
# 62. ಭ. ಮಹಾವೀರರ ಜೀವನ ದರ್ಶನ

ಸಾಂಗತ್ಯ:– ಘೋರದುರಿತ ಭವಪಾರ ಹೊಂದಿದ ಮಹಾ ।
ವೀರಜಿನೇಶಗೊಂದಿಸುವೆ ॥
ಸಾರುವೆ ಮುಕ್ತಿ ಮಹೇಶನ ಚರಿತೆಯ ।
ಶಾರದ ದೇವಿಗೆ ನಮಿಸಿ ॥೧॥

ಕೇಳಿರಿ ಭವ್ಯರೆ ಕಲಿಲಹರನ ಪರಿ ।
ಮೇಳೈಸಿದಾತನ ಚರಿತೆ ॥
ಗೋಳಿನ ಈ ಭವಸಾಗರ ದಾಂಟಿದ ।
ಬಾಳುಗೆಳೆಯನ ಕಥೆಯನು ॥೨॥

ಸುಮಾರು ಇಲ್ಲಿಗೆ ಒಂದು ಕೋಟಾಕೋಟಿಯ ಒಂದು ಸಾಗರೋಪಮ ಕಾಲದ ಹಿಂದಿನ ಮಾತು. ಈ ಜಂಬೂದ್ವೀಪದಲ್ಲಿ ಪೂರ್ವವಿದೇಹ ಕ್ಷೇತ್ರದ ಪುಂಡರೀಕಿಣೀ ನಗರದ ಹತ್ತಿರ ಮಧುಕವೆಂಬ ಅರಣ್ಯವಿತ್ತು. ಅಲ್ಲಿ ಪುರೂರವನೆಂಬ ಒಬ್ಬ ಬೇಡರ ದೊರೆ ಇದ್ದನು. ಕಾಲಿಕೆ ಎಂಬವಳು ಅವನ ಪತ್ನಿ. ಒಮ್ಮೆ ಪುರೂರವನು ಅರಣ್ಯ ಬೇಟೆಗಾಗಿ ಸುತ್ತಾಡುತ್ತಿದ್ದಾಗ ಸಾಗರ ಸೇನರೆಂಬ ದಿಗಂಬರ ಯತಿಗಳು ಒಂದು ಕಡೆ ಧ್ಯಾನಮಾಡುತ್ತ ಕುಳಿತಿದ್ದರು. ದೂರದಿಂದ ನೋಡಿದ ಪುರೂರವನಿಗೆ ಆ ಮುನಿಗಳು ಮೃಗದಂತೆ ಕಂಡರು. ಆ ಕಡೆ ಬಾಣ ಬಿಡಲು ಸಿದ್ಧನಾದ ಕೂಡಲೇ ಪಕ್ಕದಲ್ಲಿದ್ದ ಆತನ ಪತ್ನಿ ಅವನನ್ನು ತಡೆದು, “ಅಯ್ಯೋ ಅದು ಮೃಗವಲ್ಲ; ಯಾರೋ ಋಷಿಗಳು ತಪಸ್ಸು ಮಾಡುತ್ತಿದ್ದಾರೆ. ಅನ್ಯಾಯವಾಗಿ ಕೊಲ್ಲಬೇಡ. ಈ ವನದಲ್ಲಿ ದೇವತೆಗಳೂ ಕೂಡ ಸಂಚರಿಸುತ್ತಾರಂತೆ” ಎಂದಳು. ಆಗ ಪುರೂರವನು ಮುನಿಗಳ ಹತ್ತಿರ ಹೋಗಿ ಅವರ ಪ್ರಸನ್ನ ಗಂಭೀರ ಮುದ್ರೆಯನ್ನು ಕಂಡು, ಬಿಲ್ಲು ಬಾಣಗಳನ್ನು ಬದಿಗಿಟ್ಟು ನಮಸ್ಕಾರ ಮಾಡಿದನು. ಧ್ಯಾನ ಮುಗಿದ ನಂತರ ಮುನಿಗಳು ಬೇಡರ ದೊರೆಗೆ “ಸದ್ಧರ್ಮವೃದ್ಧಿರಸ್ತು” ಎಂದು ಹರಸಿದರು. ಆಗ ಆ ದೊರೆಯು ಹಾಗೆಂದರೇನು? ಎಂದು ಕೇಳಿದನು. ಮುನಿಗಳು ಧರ್ಮದ ವಿವರವನ್ನೂ ಮಹಿಮೆಯನ್ನೂ ಹೇಳಿ, ದಯೆಯೇ ಧರ್ಮದ ಮೂಲವೆಂದರು. ಅಮೃತದ ಧಾರೆಯಂತಹ ಮುನಿಗಳ ಮಧುರ ವಚನದಿಂದ



ಆನಂದದಿಂದ ಪ್ರಭಾವಿತನಾಗಿ ಮಧು, ಮದ್ಯ, ಮಾಂಸ ತ್ಯಾಗದ ವ್ರತವನ್ನು ತೆಗೆದುಕೊಂಡನು. ಅದನ್ನು ಲೋಪವಿಲ್ಲದಂತೆ ಪಾಲಿಸಿ, ಆಯುಷ್ಯಾವಸಾನದಲ್ಲಿ ಸತ್ತು ಸೌಧರ್ಮ ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು.

ಅಲ್ಲಿ ಒಂದು ಸಾಗರೋಪಮ ದಿವ್ಯ ಆಯುಷ್ಯವನ್ನು ಕಳೆದು, ಅಲ್ಲಿಂದ ಈ ಜಂಬೂದ್ವೀಪದ ಭರತ ಕ್ಷೇತ್ರದ ಅಯೋಧ್ಯಾನಗರದಲ್ಲಿ ಈ ಅವಸರ್ಪಿಣೀ ಕಾಲದ ಪ್ರಥಮ ತೀರ್ಥಂಕರರಾದ ಶ್ರೀ ವೃಷಭನಾಥರ ಪ್ರಥಮಪುತ್ರ ಭರತಚಕ್ರವರ್ತಿಗೆ ಅನಂತಮತಿ ಎಂಬ ಪತ್ನಿಯ ಹೊಟ್ಟೆಯಲ್ಲಿ ಮರೀಚಿ ಎಂಬ ಜ್ಯೇಷ್ಠ ಪುತ್ರನಾಗಿ ಹುಟ್ಟಿದನು. (ಪುರೂರವನ ಜನ್ಮ). ಒಂದಾನೊಂದು ಕಾಲಕ್ಕೆ ವೃಷಭಸ್ವಾಮಿಯು ಸರ್ವ ಪರಿಗ್ರಹಗಳನ್ನು ತ್ಯಜಿಸಿ, ವೈರಾಗ್ಯದಿಂದ ದೀಕ್ಷೆಯನ್ನು ತೆಗೆದುಕೊಂಡಾಗ ಮರೀಚಿಯೂ ತನ್ನ ತಾತನನ್ನು ಅನುಸರಿಸಿ, ಅನೇಕ ರಾಜರುಗಳೊಂದಿಗೆ ದಿಗಂಬರ ಮುನಿಯಾದನು. ಆದರೆ ಆತನಿಗೆ ಮುಂದೆ ಮಹಾವ್ರತಗಳನ್ನು ಪಾಲಿಸಿ, ಕಠಿಣ ತಪಸ್ಸನ್ನು ಮಾಡುವುದು ಅಸಾಧ್ಯವಾಯಿತು. ಹಸಿವು, ಛಳಿ ಮುಂತಾದ ಪರೀಷಹಗಳನ್ನು ಸಹಿಸಲಾರದೆ ಅರಣ್ಯದಲ್ಲಿನ ಮರಗಳಲ್ಲಿ ಬಿಟ್ಟಿದ್ದ ಹಣ್ಣುಗಳನ್ನು ಕೀಳಲು ಹೋದನು. ಆಗ ವನದೇವತೆಗಳು "ದಿಗಂಬರ ಮುನಿಗಳು ಹೀಗೆ ಮಾಡಬಾರದು. ಹೀಗಿದ್ದರೆ ಹಣ್ಣುಗಳು ದೊರೆಯಲಾರವು" ಎಂದರು. ಇದರಿಂದ ಮರೀಚಿ ಮತ್ತಿ ತರರು ಮರದ ಎಲೆ, ತೊಗಟೆ ಮುಂತಾದುವುಗಳಿಂದ ಮೈ ಮುಚ್ಚಿಕೊಂಡು ಹಸಿವನ್ನು ಛಳಿಯನ್ನು ನೀಗಿಸಿಕೊಂಡರು. ಮುಂದೆ ಇದೇ ಸರಿ ಎಂದು ಗಡ್ಡ ಮೀಸೆಗಳನ್ನು ಬೆಳಸಿ, ಪಾರಿವ್ರಾಜಕ ವೇಷ ಧರಿಸಿ ಅರಣ್ಯದಲ್ಲಿ ಸಂಚರಿಸುತ್ತ ಮಿಥ್ಯಾ ತಪಸ್ವಿಗಳಾಗಿಬಿಟ್ಟರು. ಹೀಗೆ ಮರೀಚಿಯು ಧರ್ಮಮಾರ್ಗದಲ್ಲಿ ನಡೆಯದೆ ಎಚ್ಚರದಪ್ಪಿ ಜಾರಿ ಬಿಟ್ಟನು. ಈ ಸಂದರ್ಭದಲ್ಲಿ ವೃಷಭನಾಥರು ದೀರ್ಘಮೌನದಿಂದ ತಪಸ್ಸು ಮಾಡುತ್ತ ಅಂತರ್ಮುಖಿಯಾಗಿ ಕೇವಲಜ್ಞಾನವನ್ನು ಪಡೆದರು. ಆಗ ಅನೇಕ ಮುನಿಗಳು ಮರೀಚಿಯ ಮಾರ್ಗವನ್ನು ಅವಲಂಬಿಸಿದ್ದರು. ಅವರು ಬಹಿರ್ಮುಖರಾಗಿ ಎಚ್ಚತ್ತು ಮರೀಚಿಯನ್ನು ಕರೆಸಿ, "ಧರ್ಮ ಬಾಹಿರನಾಗಬಾರದು. ಮತ್ತೆ ಪ್ರಾಯಶ್ಚಿತ್ತ ಪೂರ್ವಕ ಧರ್ಮದ ಹಾದಿಯನ್ನು ಹಿಡಿ" ಎಂದು ಉಪದೇಶವಿತ್ತರು. ಆದರೆ ಕರ್ಮದ ಉದಯದಿಂದ ಮರೀಚಿಗೆ ಉತ್ತಮ ಧರ್ಮಮಾರ್ಗವು ಹಿಡಿಸಲಿಲ್ಲ. ಆಗ ವೃಷಭನಾಥರು, "ಹೀಗಾಗ ಬೇಕಿತ್ತು; ಆಗಿಹೋಯಿತು. ಏನು ಮಾಡುವುದು? ಇದು ದುಷ್ಷಮ-ಸುಷಮವೆಂಬ ಚತುರ್ಥ ಕಾಲದ ಪರಿವರ್ತನೆ. ದುಷ್ಟ, ಶಿಷ್ಟ ಧರ್ಮ ಗಳು ಜೊತೆಯಲ್ಲೇ ಪ್ರಸಾರವಾಗುತ್ತಿರುತ್ತವೆ. ಅವರವರ ಆತ್ಮಪರಿಣತಿಗೆ

ಅನುಸಾರ ಒಳ್ಳೆಯ ಮತ್ತು ಕೆಟ್ಟದ್ದನ್ನು ವಿವೇಚಿಸಿ ಪರಿಗ್ರಹಿಸುವುದು ವಿವೇಕಿಗಳ ಕರ್ತವ್ಯ. ಮರೀಚಿಯು ತಪೋಭ್ರಷ್ಟನಾದರೂ ಕೊನೆಗೊಮ್ಮೆ ಪಶ್ಚಾತ್ತಾಪ ಪಟ್ಟು ಧರ್ಮಮಾರ್ಗಾವಲಂಬಿಯಾಗಿ ಇದೇ ಕಾಲದ ಕೊನೆಯಲ್ಲಿ ಅಂತಿಮ ತೀರ್ಥಂಕರನಾಗುವನು'' ಎಂದರು. ಮರೀಚಿಯು ತನ್ನ ಶಿಷ್ಯರೊಂದಿಗೆ ಸಾಂಖ್ಯಮತ ಸ್ಥಾಪನೆ ಮಾಡಿ ಅದಕ್ಕೆ ಸಂಬಂಧಿಸಿದ ಉಪದೇಶ ಮಾಡುತ್ತ ಬಹು ಕಾಲದವರೆಗೆ ಈ ಪೃಥ್ವಿಯಲ್ಲಿ ಸಂಚರಿಸಿದನು. ಆದರೆ ಆ ಕಾಲಕ್ಕೆ ವೃಷಭನಾಥರ ಧರ್ಮತೀರ್ಥ ಪ್ರಸಾರದ ಮುಂದೆ ಇವನ ಪ್ರತಿಭೆ ಸಾಗಲಿಲ್ಲವಾದರೂ ಮಿಥ್ಯಾಚರಣೆಯ ಅಂಕುರವಾಯಿತು. ಮರೀಚಿಯು ಬ್ರಹ್ಮಚರ್ಯ ಪಾಲನೆ ಮತ್ತು ಸ್ವಲ್ಪ ಕಾಲದವರೆಗಾದರೂ ದಿಗಂಬರ ಮುನಿಯಾಗಿದ್ದುದರಿಂದ ಪುಣ್ಯಬಂಧವಾಗಿ ಆಯುಷ್ಯಾವಸಾನದಲ್ಲಿ ಸತ್ತು, ಬ್ರಹ್ಮಕಲ್ಪದಲ್ಲಿ ದೇವನಾಗಿ ಹುಟ್ಟಿದನು.

ಅಲ್ಲಿಂದ ಮುಂದೆ ಮನುಷ್ಯ. ದೇವ, ನರಕ, ತಿರ್ಯಂಚಗತಿಗಳಲ್ಲಿ ಅನೇಕ ಬಾರಿ ಹುಟ್ಟಿ ಸತ್ತು, ಒಂದು ಭವದಲ್ಲಿ ಇದೇ ಭರತಕ್ಷೇತ್ರದಲ್ಲಿ ತ್ರಿಪೃಷ್ಠನೆಂಬ ಪ್ರಥಮ ಅರ್ಧಚಕ್ರಿಯಾಗಿ ಹುಟ್ಟಿ, ಅಲ್ಲಿಂದ ನರಕ ತಿರ್ಯಂಚ ಗತಿಗಳಲ್ಲಿ ಜನಿಸಿ, ಬಳಲಿ, ಒಮ್ಮೆ ಹಿಮವತ್ಪರ್ವತದ ತಪ್ಪಲಿನಲ್ಲಿ ಸಿಂಹವಾಗಿ ಹುಟ್ಟಿದನು. ಆ ಸಿಂಹವು ಒಂದು ದಿನ ಒಂದು ಜಿಂಕೆಯನ್ನು ಹಿಡಿದು ತಿನ್ನಲಾರಂಭಿಸುವಾಗ ಅಜಿತಂಜಯರೆಂಬ ಚಾರಣ ಮುನಿಗಳು ಆಕಾಶ ಮಾರ್ಗದಲ್ಲಿ ಹೋಗುತ್ತಿದ್ದರು. ಅವರು ಅವಧಿಜ್ಞಾನದಿಂದ ಆ ಸಿಂಹದ ವಿಷಯವು ತಿಳಿದು ಆಕಾಶದಿಂದಿಳಿದು, ಸಿಂಹದ ಎದುರಿನಲ್ಲಿ ಒಂದು ಬಂಡೆಯ ಮೇಲೆ ಕುಳಿತರು. ಸಿಂಹವು ಅವರನ್ನೇ ನೋಡಲಾರಂಭಿಸಿತು. ಆಗ ಸಿಂಹಕ್ಕೆ ಅದರ ಹಿಂದಿನ ಭವಾವಳಿಗಳನ್ನು ತಿಳಿಸಿ, ಭವಭ್ರಮಣೆಯ ಭಯಂಕರ ದುಃಖವನ್ನು ವರ್ಣಿಸಿ, ಒಮ್ಮೆ ವ್ರತಭ್ರಷ್ಟನಾದುದರ ಫಲವನ್ನು ವಿವರಿಸಿ ಧರ್ಮೋಪದೇಶವನ್ನು ಮಾಡಿದರು. ಆಗ ಸಿಂಹಕ್ಕೆ ಜಾತಿಸ್ಮರಣೆಯುಂಟಾಗಿ ಹಿಡಿದಿದ್ದ ಜಿಂಕೆಯನ್ನು ಬಿಟ್ಟು ತನ್ನ ಪೂರ್ವ ಸ್ಥಿತಿಯನ್ನು ಸ್ಮರಿಸಿಕೊಂಡು ಪಶ್ಚಾತ್ತಾಪಪಟ್ಟು ಕಣ್ಣೀರು ಸುರಿಸಿತು. ತನ್ನ ಹೃದಯದಲ್ಲಿ ಮುನಿಗಳು ಹೇಳಿದ ಸಮ್ಯಕ್ತ್ವವನ್ನು ಧರಿಸಿ ಆ ಚಾರಣ ಮುನಿಗಳಿಗೆ ಪ್ರದಕ್ಷಿಣೆ ಮಾಡಿ, ನಮಸ್ಕರಿಸಿತು. ಮುಂದೆ ರೌದ್ರ ಭಾವವನ್ನು ಬಿಟ್ಟು, ನಿರಾಹಾರಿಯಾಗಿ ಸಮಾಧಿಮರಣ ಹೊಂದಿ ಸೌಧರ್ಮ ಸ್ವರ್ಗದಲ್ಲಿ ದೇವನಾಗಿ ಹುಟ್ಟಿತು. ಅಲ್ಲಿಂದ ಕೆಲವು ದೇವಮಾನವ ಗತಿಗಳನ್ನು ಹೊಂದಿ ಧಾತಕೀಖಂಡ ದ್ವೀಪದ ಪೂರ್ವವಿದೇಹದಲ್ಲಿ ಪ್ರಿಯಮಿತ್ರನೆಂಬ ಚಕ್ರವರ್ತಿಯಾಗಿ ಹುಟ್ಟಿದನು. ಅಲ್ಲಿಂದ ಮುಂದೆ ಹನ್ನೆರಡನೇ ಸ್ವರ್ಗದಲ್ಲಿ ಸೂರ್ಯಪ್ರಭನೆಂಬ ದೇವನಾಗಿ ಹುಟ್ಟಿದನು.



ಅನಂತರ ಈ ಭರತಕ್ಷೇತ್ರದಲ್ಲಿ ನಂದನೆಂಬ ರಾಜನಾಗಿ ಹುಟ್ಟಿದನು. ಆ ಭವದಲ್ಲಿ ಪ್ರೋಷ್ಠಿಲರೆಂಬ ದಿಗಂಬರ ಯತಿಗಳಿಂದ ಧರ್ಮವನ್ನು ಕೇಳಿ, ದ್ವಾದಶಾಂಗ ಶಾಸ್ತ್ರಗಳನ್ನು ತಿಳಿದು, ಷೋಡಶ ಭಾವನೆಗಳನ್ನು ಭಾವಿಸಿ, ತೀರ್ಥಂಕರ ನಾಮ ಕರ್ಮವೆಂಬ ಪುಣ್ಯವನ್ನು ಬಂಧಿಸಿಕೊಂಡು ಸನ್ಯಾಸ ಮರಣ ಹೊಂದಿ ಅಚ್ಯುತ ಸ್ವರ್ಗದಲ್ಲಿ ಅಚ್ಯುತೇಂದ್ರನಾಗಿ ಜನಿಸಿದನು.

ಆ ಸಮಯದಲ್ಲಿ ಇತ್ತ ಈ ಭರತ ಕ್ಷೇತ್ರದಲ್ಲಿ ಇಪ್ಪತ್ಮೂರನೆಯ ತೀರ್ಥಂಕರರಾದ ಶ್ರೀ ಪಾರ್ಶ್ವನಾಥ ಸ್ವಾಮಿಯ ಮೋಕ್ಷಕ್ಕೆ ಹೋಗಿ ಸುಮಾರು 250 ವರ್ಷವಾಗಿತ್ತು. ಆ ವೇಳೆಗಾಗಲೇ ಧರ್ಮಪ್ರಭಾವನೆ ಕಡಿಮೆಯಾಗಿತ್ತು. ಕುಮತಗಳ ಅಪಪ್ರಚಾರ ಹೆಚ್ಚಾಗುತ್ತ ಬಂದಿತ್ತು. ಹಿಂಸೆಯೇ ಧರ್ಮವೆಂದು ಪರಿಗಣಿಸಿ ಯಜ್ಞಯಾಗಾದಿಗಳಲ್ಲಿ ಪಶುಬಲಿ ಮಾಡಲಾರಂಭಿಸಿದ್ದರು. ಪರಿಗ್ರಹಧಾರಿಗಳಾದ ಕೆಲವು ಸಾಧುಗಳು ಮನ್ನಣೆ ಪಡೆದರು. ಧಾರ್ಮಿಕರಿಗೆ, ಅನಾಥರಿಗೆ, ಪಶು-ಪಕ್ಷಿಗಳಿಗೆ ಉಳಿಗಾಲವಿಲ್ಲದ ಸ್ಥಿತಿಯೊದಗಿತ್ತು. ಈ ಗೋಳಿನ ನಿವಾರಣೆಗೆ ಆ ಕಾಲಕ್ಕೆ ಒಬ್ಬ ಮಹಾಪುರುಷನ ಅವತಾರವಾಗ ಬೇಕಾಗಿತ್ತು.

ಈ ಸಂದರ್ಭದಲ್ಲಿ ಈ ಆರ್ಯಖಂಡದ ಉತ್ತರದಲ್ಲಿ ವಿದೇಹ ದೇಶದ ಕುಂಡಲಪುರದಲ್ಲಿ ನಾಥವಂಶದ ಸಿದ್ಧಾರ್ಥ ಮಹಾರಾಜನು ಪ್ರಿಯಕಾರಿಣಿ ಅಥವಾ ತ್ರಿಶಲಾ ಎಂಬ ಪತ್ನಿಯೊಂದಿಗೆ ಆಳುತ್ತಿದ್ದನು. ಈತನು ಬಹುಧಾರ್ಮಿಕನೂ, ದಯಾಪರನೂ ಸಮ್ಯಕ್ತ್ವಶಾಲಿಯೂ ಆಗಿದ್ದನು. ಒಮ್ಮೆ (ಅಂದರೆ ಅಚ್ಯುತೇಂದ್ರನ ಆಯುಷ್ಯವು ಮುಗಿಯುವುದಕ್ಕೆ ಇನ್ನು ಆರು ತಿಂಗಳು ಉಳಿದಿರುವಾಗ) ಈ ರಾಜನ ಅರಮನೆಯ ಅಂಗಳದಲ್ಲಿ ದೇವತೆಗಳಿಂದ ರತ್ನವೃಷ್ಟಿಯಾಯಿತು. ಇದು ಒಬ್ಬ ಮಹಾಪುರುಷನ ಅವತಾರದ ಗುರುತೆಂದು ರಾಜನೂ ಪ್ರಜೆಗಳೂ ಆನಂದಿಸಿದರು. ದೇವಸ್ತ್ರೀಯರು ಬಂದು ತ್ರಿಶಲಾದೇವಿಯ ಗರ್ಭಶುದ್ಧಿ ಮಾಡಿ ಪೂಜಿಸಿದರು. ರತ್ನವೃಷ್ಟಿಯು ಆರು ತಿಂಗಳವರೆಗೂ ಆಯಿತು. ಆರು ತಿಂಗಳ ಕೊನೆಯಲ್ಲಿ ತ್ರಿಶಲಾದೇವಿಯು ಆಷಾಢಶುದ್ಧ. ಷಷ್ಠಿಯ ಶುಭರಾತ್ರಿಯ ಬೆಳಗಿನ ಜಾವದಲ್ಲಿ ಆನೆ, ಎತ್ತು, ಸಿಂಹ, ಲಕ್ಷ್ಮಿ, ಎರಡು ಪುಷ್ಪ ಮಾಲಿಕೆಗಳು, ಎರಡು ಮೀನು, ಚಂದ್ರ, ಸೂರ್ಯ, ಎರಡು ವಿಮಾನಗಳು, ಎರಡು ಪೂರ್ಣ ಕುಂಭಗಳು. ಪದ್ಮಸರೋವರ, ಸಮುದ್ರ, ಸಿಂಹಪೀಠ, ಧರಣೇಂದ್ರ ಭವನ, ರತ್ನರಾಶಿ, ಹೊಗೆ ಇಲ್ಲದ ಬೆಂಕಿ - ಈ ಹದಿನಾರು ಕನಸುಗಳನ್ನು ಕಂಡು ಬಳಿಕ ತನ್ನ ಮುಖದಲ್ಲಿ ಬಿಳಿ ಆನೆಯು ಪ್ರವೇಶಿಸುವ ಕನಸನ್ನು ಕಂಡಳು.

ಪ್ರಾತಃಕಾಲ ಈ ಕನಸುಗಳ ಫಲವನ್ನು ತನ್ನ ಪತಿಯಿಂದ ತಿಳಿದಳು. "ನಿನ್ನ ಪವಿತ್ರ ಗರ್ಭದಲ್ಲಿ ತೀರ್ಥೇಶನ ಅವತಾರವಾಗುವುದು'' ಎಂದು ಸಿದ್ಧಾರ್ಥನು ಪತ್ನಿಗೆ ತಿಳಿಸಿ ತಾನೂ ಆನಂದಿತನಾದನು. ಅಂದು ಆ ಶುಭ ಮುಹೂರ್ತದಲ್ಲಿ ಅಚ್ಯುತೇಂದ್ರನು ಚ್ಯುತನಾಗಿ ಈ ತ್ರಿಶಲಾದೇವಿಯ ಗರ್ಭವನ್ನು ಸೇರಿದನು. ಆಗ ದೇವತೆಗಳು ಬಂದು ಆ ರಾಜದಂಪತಿಗಳಿಗೆ ಸ್ವರ್ಣಕುಂಭಗಳಿಂದ ಮಂಗಲಾಭಿಷೇಕವನ್ನು ಮಾಡಿ ಭಗವಂತನ ಗರ್ಭಾವತರಣಕಲ್ಯಾಣವನ್ನು ಮಾಡಿದರು. ಇವೆಲ್ಲ ತೀರ್ಥಂಕರರು ಹೊತ್ತು ತಂದು ಪುಣ್ಯದ ಅತಿಶಯಗಳು.

ನವ ಮಾಸಗಳು ತುಂಬಿದ ನಂತರ ಚೈತ್ರ ಶುದ್ಧ ತ್ರಯೋದಶಿ, ಸೋಮವಾರ ಬೆಳಗಿನ ಜಾವದಲ್ಲಿ ಉತ್ತರ ಫಾಲ್ಗುನೀ ನಕ್ಷತ್ರದ ಶುಭ ಮುಹೂರ್ತದಲ್ಲಿ ಪ್ರಿಯಕಾರಿಣಿಯು ಜಿನಶಿಶುವನ್ನು ಹಡೆದಳು. ಆ ಸಮಯದಲ್ಲಿ ಸಕಲ ಜೀವಿಗಳಿಗೂ ಕ್ಷಣಕಾಲ ಅನಿರ್ವಚನೀಯ ಶಾಂತಿ ನೆಮ್ಮದಿ ಮತ್ತು ಆನಂದ ಉಂಟಾಯಿತು. ಕೂಡಲೇ ಸ್ವರ್ಗದ ದೇವತೆಗಳು ಬಂದು ಜಿನಶಿಶುವನ್ನು ಮೇರು ಪರ್ವತದ ಪಾಂಡುಕ ಶಿಲೆಗೆ ತೆಗೆದುಕೊಂಡು ಹೋಗಿ ಅಲ್ಲಿ ಕ್ಷೀರಸಮುದ್ರದ ಜಲದಿಂದ ಜನ್ಮಾಭಿಷೇಕ ವನ್ನು ಮಾಡಿದರು. ಆ ಸಮಯದಲ್ಲಿ ದೇವತೆಗಳು ಪವಿತ್ರವಾದೆವೆಂದು ಆನಂದ ಸಾಗರದಲ್ಲಿ ಮುಳುಗಿ ಭಗವಂತನ್ನು ಬಹು ವಿಧವಾಗಿ ಸುತ್ತಿಸಿದರು. ಅನಂತರ ಆ ಶಿಶುವನ್ನು ಅಲಂಕರಿಸಿ ಐರಾವತದ ಮೇಲೆ ಕೂಡಿಸಿ ಉತ್ಸವಪೂರ್ವಕ ಕುಂಡಲ ಪುರಕ್ಕೆ ಬಂದು ತ್ರಿಶಲೆಯ ಬಳಿ ಜಿನಶಿಶುವನ್ನು ಬಿಟ್ಟು ಹೋದರು. ಪುಣ್ಯಪುತ್ರನ ಜನನದಿಂದ ಹರ್ಷಿತರಾದ ರಾಜರಾಣಿಯರು ಶಿಶುವನ್ನು ಕಂಡು ಪುಲಕಿತರಾದರು. ಈ ಮಹಾತ್ಮನ ಜನನಕ್ಕೆ ಮುನ್ನಿನಿಂದಲೂ ತನ್ನ ಉನ್ನತ ಕುಲಸಂಪದಗಳು ಅಭಿವೃದ್ಧಿಯಾದುದರಿಂದ ಆ ತನ್ನ ಪುತ್ರನಿಗೆ ಸಿದ್ಧಾರ್ಥನು ವರ್ಧಮಾನನೆಂದು ಶುಭನಾಮವನ್ನಿಟ್ಟನು.

ವರ್ಧಮಾನನು ಬಿದಿಗೆಯ ಚಂದ್ರನಂತೆ ವರ್ಧಿಸುತ್ತ ತನ್ನ ಬಾಲ ಲೀಲೆಗಳಿಂದ ರಾಜಪರಿವಾರಕ್ಕೆಲ್ಲ ಸಂತೋಷವನ್ನು ಉಂಟುಮಾಡುತ್ತಿದ್ದನು. ವರ್ಧಮಾನನಿಗೆ ಸಿಂಹಲಾಂಛನವಿತ್ತು. 72 ವರ್ಷ ಆಯುಷ್ಯವಿತ್ತು. ಹುಟ್ಟುತ್ತಲೇ ಮತಿ, ಶ್ರುತ, ಅವಧಿಜ್ಞಾನ ಸಂಪನ್ನರಾಗಿದ್ದರು. ಒಮ್ಮೆ ವಿಜಯ ಮತ್ತು ಸಂಜಯರೆಂಬ ಚಾರಣ ಮುನಿಗಳು ವರ್ಧಮಾನ ಕುಮಾರರ ದರ್ಶನಕ್ಕಾಗಿ ಬಂದರು. ಅವರಿಗೆ ಸಿದ್ಧಾಂತದಲ್ಲಿ ಉತ್ಪನ್ನವಾಗಿದ್ದ ಸಂಶಯವನ್ನು ವರ್ಧಮಾನರು ನಿವಾರಿಸಿದರು. ಅದರಿಂದ ಆನಂದಿತರಾದ ಮುನಿಗಳು ಕುಮಾರನಿಗೆ ನೀನು ಸನ್ಮತಿ ಎಂದು ಹೊಗಳಿ ಹೋದರು.



ಒಂದು ಸಾರಿ ಈ ಸನ್ಮತಿಯು ತನ್ನ ಸಂಗಡಿಗರೊಂದಿಗೆ ತಮ್ಮ ಉದ್ಯಾನವನದಲ್ಲಿ ಆಡುತ್ತಿದ್ದಾಗ ಸಂಗಮನೆಂಬ ದೇವನು ಘಟಸರ್ಪವಾಗಿ ಹರಿದುಬಂದನು. ಅದರಿಂದ ಬಾಲಕರು ಹೆದರಿ ಚೀರಿದರು. ಆಗ ವರ್ಧಮಾನರು ಅಲ್ಲಿಗೆ ಬಂದು ಆ ಸರ್ಪದ ಹೆಡೆಯನ್ನು ನಿರ್ಭಯವಾಗಿ ಮೆಟ್ಟಿದರು. ಆ ಸರ್ಪವು ನಿಶ್ಚೇತನವಾಯಿತು. ಆ ದೇವನು ತನ್ನ ನಿಜರೂಪದಲ್ಲಿ ಪ್ರಕಟವಾಗಿ "ಹೇ ಪ್ರಭೋ, ನೀನು ಅಸಾಮಾನ್ಯ, ವೀರಾಧಿವೀರ, ಮಹಾವೀರ, ನಿನ್ನನ್ನು ಪರೀಕ್ಷಿಸಲು ಬಂದ ನಾನು ಮೂರ್ಖ. ಆದರೂ ನಿನ್ನ ಮಹಿಮೆ ಪ್ರಕಟವಾಯಿತು. ಪುಣ್ಯಪುಂಜರಾದ ಮಹಿಮಾವಂತರನ್ನು ಯಾರೂ ಏನೂ ಮಾಡಲಾರರು'' ಎಂದು ಹೊಗಳಿ ಹೊರಟುಹೋದನು.

ಹೀಗೆ ಮಹಾವೀರರು ತನ್ನ ಬಾಲ್ಯಾವಸ್ಥೆಯನ್ನು ಕಳೆದು, ಯೌವನಸ್ಥನಾದರು. ಕೆಲವು ಕಾಲ ದೇಶದಲ್ಲೆಲ್ಲ ಸಂಚರಿಸಿ, ದೇಶದ ಜನರ ವಿದ್ಯಮಾನಗಳನ್ನೆಲ್ಲ ತಿಳಿದುಕೊಂಡರು. ಜಗತ್ತಿನ ಜನರ ಅಜ್ಞಾನ, ಅನಾಚಾರ ಮತ್ತು ಪ್ರಾಣಿಗಳ ಗೋಳಿನ ನಿವಾರಣೆಯ ಬಗ್ಗೆ ಸದಾ ಚಿಂತಿಸಲಾರಂಭಿಸಿದರು. ಇತ್ತ ಪ್ರಾಯಕ್ಕೆ ಬಂದ ಮಗನಿಗೆ ವಿವಾಹ ಮಾಡಲು ತಂದೆ-ತಾಯಿಯರು. ಕನ್ಯಾನ್ವೇಷಣೆಯ ಬಗ್ಗೆ ವಿಚಾರ ಮಾಡತೊಡಗಿದರು. ಆಗ ಮಹಾವೀರರು ಅವರನ್ನು ತಡೆದು, "ಜಗತ್ತಿನ ಜಂಜಟಕ್ಕೆ ಮತ್ತೆ ನಾನು ಸಿಲುಕಲಾರೆ'' ಎಂದರು. ಲೋಕಕ್ಕೆ ಒಂದು ಕಲ್ಯಾಣಮಾರ್ಗ ತೋರಬೇಕು. ಅದಕ್ಕಾಗಿ ಈ ರಾಜ್ಯ, ವೈಭವ, ಪರಿವಾರದ ಸಂಕೋಲೆಯಲ್ಲಿದ್ದರೆ ಆಗುವುದಿಲ್ಲವೆಂದು ಯೋಚಿಸಿ, ವೈರಾಗ್ಯವನ್ನು ಹೊಂದಿದರು. ಆಗ ಲೌಕಾಂತಿಕ ದೇವತೆಗಳು ಬಂದು ಉಪಚಾರ ರೂಪವಾದ ವೈರಾಗ್ಯಬೋಧನೆಯನ್ನು ಮಹಾವೀರರಿಗೆ ಮಾಡಿದರು. ಇದರಿಂದ ಪ್ರೇರಿತರಾದ ವೀರರು ತಂದೆ-ತಾಯಿಗಳನ್ನು ಸಮಾಧಾನ ಮಾಡಿ, ಅವರ ಅನುಮತಿಯನ್ನು ಪಡೆದು ದೀಕ್ಷೆಗೆ ಹೊರಡಲು ಸಿದ್ಧರಾದರು.

ಕೂಡಲೇ ದೇವೇಂದ್ರಾದಿಗಳು ಸ್ವಾಮಿಯ ದೀಕ್ಷಾ ಕಲ್ಯಾಣವನ್ನು ಮಾಡಲು ಬಂದರು. ಸ್ವಾಮಿಯು ಚಂದ್ರಪ್ರಭಾ ಎಂಬ ರತ್ನ ಪಲ್ಲಕ್ಕಿಯಲ್ಲಿ ಕುಳಿತು ನಾಗಖಂಡವೆಂಬ ವನಕ್ಕೆ ಹೋದರು. ಅಲ್ಲಿ ಮಾರ್ಗಶಿರ ಕೃಷ್ಣ ದಶಮಿಯ ದಿನ ಸಿದ್ಧಪರಮೇಷ್ಠಿಗಳ ಧ್ಯಾನಪೂರ್ವಕ ಉಪವಾಸವನ್ನು ಕೈಕೊಂಡು ದಿಗಂಬರ ದೀಕ್ಷಾಬದ್ಧರಾಗಿ ಪಂಚಮುಷ್ಟಿಗಳಿಂದ ತಲೆಗೂದಲನ್ನು ಕರ್ಮಗಳ ಮೂಲವನ್ನು ಕಿತ್ತೊಗೆಯುವಂತೆ ಕಿತ್ತೊಗೆದರು. ಕೂಡಲೇ ಅವರಿಗೆ ಬುದ್ಧಿ, ವಿಕ್ರಿಯ, ತಪ, ಬಲ, ಔಷಧ. ರಸ ಮತ್ತು ಅಕ್ಷಯವೆಂಬ ಸಪ್ತ ವೃದ್ಧಿಗಳು ಪ್ರಾಪ್ತವಾಗಿ

ಮನಃಪರ್ಯಯವೆಂಬ ಜ್ಞಾನ ಉಂಟಾಯಿತು. ದೀಕ್ಷೆ ತೆಗೆದುಕೊಂಡ ಎರಡನೇ ದಿನ ಆಹಾರಕ್ಕೋಸ್ಕರ ಕೂಲಪುರವೆಂಬ ನಗರದತ್ತ ಹೋದರು. ಅಲ್ಲಿನ ಕೂಲನೆಂಬ ಮಹಾರಾಜನು ವೀರ ಮುನಿಗಳಿಗೆ ನವಧಾ ಭಕ್ತಿಪೂರ್ವಕವಾಗಿ ಆಹಾರದಾನ ಮಾಡಿದನು. ಆಗ ದೇವತೆಗಳಿಂದ ಪಂಚಾಶ್ಚರ್ಯಗಳುಂಟಾದುವು. ನಂತರ ವೀರಪ್ರಭುಗಳು ಅತಿಮುಕ್ತಕವೆಂಬ ಸ್ಮಶಾನದಲ್ಲಿ ಪ್ರತಿಮಾಯೋಗಧಾರಿಗಳಾಗಿ ತಪಸ್ಸು ಮಾಡಲಾರಂಭಿಸಿದರು. ಆಗ ಭಯಂಕರ ರುದ್ರನು ನಾನಾ ಪ್ರಕಾರದ ತನ್ನ ವಿದ್ಯಾಬಲದಿಂದ ಆ ವೀರಮುನಿಗೆ ಘೋರವಾದ ಉಪಸರ್ಗವನ್ನು ಕೊಟ್ಟನು. ಏನು ಮಾಡಿದರೂ ವೀರಮುನಿಗಳು ತಮ್ಮ ಧ್ಯಾನದಿಂದ ವಿಚಲಿತರಾಗಲಿಲ್ಲ. ಆ ಸಮಯಕ್ಕೆ ಸರಿಯಾಗಿ ಮಾತಂಗ ಮತ್ತು ಸಿದ್ಧಾಯಿನಿ ಎಂಬ ಯಕ್ಷ-ಯಕ್ಷಿಯರು ಬಂದು ರುದ್ರನು ಮಾಡುತ್ತಿದ್ದ ತೊಂದರೆಯನ್ನು ತಪ್ಪಿಸಿ ಆ ವೀರಮುನಿಗಳ ಮಹಿಮೆಯನ್ನು ಅವನಿಗೆ ತಿಳಿಸಿದರು. ಶ್ರೀ ವೀರರು ಅಂತಿಮ ತೀರ್ಥಂಕರರು, ವಜ್ರಕಾಯ ಶರೀರಿಗಳು, ಶರೀರ ಮಮತ್ವವನ್ನು ತೊರೆದವರು, ಆತ್ಮ ಪ್ರಕಾಶಪುಂಜರೆಂದು ಹೇಳಿ, ನೀನು ಮಾಡುವ ಉಪಸರ್ಗದಿಂದ ಅವರಿಗೆ ಏನೂ ಆಗುವುದಿಲ್ಲ ಎಂದರು. ಆಗ ರುದ್ರ ತನ್ನ ಅಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಪ್ರಭುಗಳಿಗೆ ವಂದಿಸಿ, "ಮಹತಿ ಮಹಾವೀರ" ಎಂದು ಹೊಗಳಿ ಹೋದ. ಮುಂದೆ ವೀರಮುನಿಯು ಆಹಾರಕ್ಕೆ ಹೊರಟು, ಬಂಧನದಲ್ಲಿದ್ದ ಚಂದನಬಾಲಾ ಎಂಬುವಳನ್ನು ಬಂಧಮುಕ್ತಳನ್ನಾಗಿ ಮಾಡಿ, ಆಕೆಯಿಂದ ಆಹಾರ ಸ್ವೀಕರಿಸಿ, ಅಲ್ಲಿ ಅಪೂರ್ವ ಅತಿಶಯದ ಪವಾಡವನ್ನು ತೋರಿಸಿದರು. ಆ ನಂತರ 12 ವರ್ಷ ಘೋರ ತಪಸ್ಸನ್ನು ಮಾಡುತ್ತ ಒಮ್ಮೆ ಜೃಂಭಿಕ ಗ್ರಾಮದ ಸಾಲವೃಕ್ಷದ ಅಡಿಯಲ್ಲಿ ಧ್ಯಾನಾರೂಢರಾಗಿ ಘಾತಿ ಕರ್ಮಗಳನ್ನು ಕೆಡಿಸಿ ಕೇವಲ ಜ್ಞಾನವನ್ನು ಪಡೆದರು. ಕೂಡಲೇ ಅವರು ಶರೀರದೊಂದಿಗೆ ಆಕಾಶದಲ್ಲಿ ನಿಂತರು. ಕೂಡಲೇ ಇಂದ್ರನ ಅಪ್ಪಣೆಯಂತೆ ಕುಬೇರನು ಸಮವಸರಣವೆಂಬ ದಿವ್ಯ ಸಭಾಮಂಟಪವನ್ನು ರಚಿಸಿದನು. ಅದು ಒಂದು ಯೋಜನ ವಿಸ್ತಾರವಾಗಿತ್ತು. ನಾಲ್ಕು ದಿಕ್ಕುಗಳಲ್ಲೂ ಮಹಾದ್ವಾರಗಳಿದ್ದುವು. ಅವುಗಳ ಮುಂದೆ ಮಾನಸ್ತಂಭಗಳಿದ್ದುವು. ಮಧ್ಯಭಾಗದಲ್ಲಿ ಸಿಂಹಪೀಠವಿತ್ತು. ಅದರ ಮೇಲೆ ಗಂಧಕುಟಿಯಿತ್ತು, ಎಲ್ಲವೂ ರತ್ನಮಯವಾಗಿತ್ತು. ಗಂಧಕುಟಿಯಲ್ಲಿ ಸಹಸ್ರದಳ ಕಮಲಕ್ಕೆ ಸೋಂಕದಂತೆ 4 ಅಂಗುಲದ ಮೇಲೆ ವೀರ ಸರ್ವಜ್ಞರು ವಿರಾಜಮಾನರಾಗಿದ್ದರು. ಅವರ ಮೇಲೆ ಮುಕ್ಕೊಡೆ ಪ್ರಕಾಶಮಾನವಾಗಿತ್ತು. ಅವರ ಸುತ್ತಲೂ ಹನ್ನೆರಡು ಸಭೆಗಳಿದ್ದುವು. ಅಲ್ಲಿ ಮುನಿಗಳೂ, ಆರ್ಯಿಕೆಯರೂ, ದೇವ-ದೇವಿಯರೂ, ಮಾನವರೂ, ಸಂಜ್ಞಿ



ಪಂಚೇಂದ್ರಿಯ ಪಶುಪಕ್ಷಿಗಳೂ ತಮ್ಮ ತಮ್ಮ ಸ್ಥಾನದಲ್ಲಿ ಸೇರಿದರು. ಮಾತಂಗ ಸಿದ್ಧಾಯಿನಿ ಯಕ್ಷಯಕ್ಷಿಯರು ಭಗವಂತನಿಗೆ ಚಾಮರಸೇವೆ ಮಾಡುತ್ತಿದ್ದರು.

ಸರ್ವರೂ ವೀರರ ದಿವ್ಯ ಉಪದೇಶವನ್ನು ಕೇಳಲು ಕಾತುರರಾಗಿದ್ದರು. ಆದರೆ ಓಂಕಾರ ದಿವ್ಯ ಧ್ವನಿ ಹೊರಡಲಿಲ್ಲ. ದೇವ ಮಾನವರೆಲ್ಲ ಗಾಬರಿಗೊಂಡರು. ಆಗ ದೇವೇಂದ್ರನು ತನ್ನ ಅವಧಿಜ್ಞಾನದಿಂದ ತಿಳಿದು, 'ಗೌತಮ' ಎಂಬ ಗ್ರಾಮಕ್ಕೆ ವಟುವೇಷಧಾರಿಯಾಗಿ ಇಂದ್ರಭೂತಿ ಎಂಬ ಬ್ರಾಹ್ಮಣ ಯತಿಯ ಬಳಿಗೆ ಹೋಗಿ, ಅಲ್ಲಿ ಒಂದು ಶ್ಲೋಕದ ಅರ್ಥವನ್ನು ಕೇಳಿದನು. ಅದು ಅನೇಕಾಂತಮಯ ಜೈನ ಸಿದ್ಧಾಂತವಾಗಿತ್ತು. ಅದರ ಅರ್ಥ ತಿಳಿಯದೆ ಅದರ ಸಂಶಯ ನಿವಾರಣೆಗೆಂದು ಆ ವಟುವಿನೊಂದಿಗೆ ವೀರರ ಸಮವಸರಣಕ್ಕೆ ಬಂದನು. ಅಲ್ಲಿ ಮಾನಸ್ತಂಭವನ್ನು ನೋಡುತ್ತಲೇ ಮಿಥ್ಯಾಜ್ಞಾನವೆಲ್ಲ ನಾಶವಾಗಿ ಜಿನಸಿದ್ಧಾಂತದ ಸರ್ವಸ್ವವೂ ಗೋಚರವಾಯಿತು. ಮುಂದೆ ವೀರರ ಪವಿತ್ರ ಮುದ್ರೆಯ ದರ್ಶನವಾಗುತ್ತಲೇ ತನ್ನ ಮಾನಕಷಾಯವೆಲ್ಲ ನಾಶವಾಯಿತು. ಆಗ ಇಂದ್ರಭೂತಿಯು ತನ್ನ ಐನೂರು ಮಂದಿ ಶಿಷ್ಯರೊಡನೆ ವೀರ ಭಗವಾನರಿಗೆ ನಮಸ್ಕರಿಸಿ, ಜಿನದೀಕ್ಷೆಯನ್ನು ಸ್ವೀಕರಿಸಿದನು. ಕೂಡಲೇ ಆತನಿಗೆ ಗಣಧರ ಪದವಿಯು ಪ್ರಾಪ್ತವಾಯಿತು. ಅಂದು ಮುನಿಗಳ ಗುಂಪಿಗೆಲ್ಲ ಮುಖ್ಯಸ್ಥನಾಗಿ ಭಗವಂತರ ದಿವ್ಯವಾಣಿಯನ್ನು ಅನುವಾದ ಮಾಡಿ ಹೇಳುವ ವೃದ್ಧಿಯುಂಟಾಯಿತು. ವಟುವಾಗಿದ್ದ ದೇವೇಂದ್ರನು ಗಣಧರರ ಪೂಜೆ ಮಾಡಿದನು. ನಂತರ ವೀರಭಗವಂತರನ್ನು ಅನೇಕ ಪ್ರಕಾರವಾಗಿ ಸ್ತುತಿಸಿ ಜಗತ್ತಿನ ಜೀವಿಗಳ ಕಲ್ಯಾಣಮಾರ್ಗದ ಬೋಧೆಯಾಗಬೇಕೆಂದು ಬೇಡಿದನು. ಬಳಿಕ ಓಂಕಾರ ದಿವ್ಯ ಧ್ವನಿ ಹೊರಟಿತು. ಅದೇ ಗೌತಮ ಗಣಧರರು ಆ ಓಂಕಾರದ ಅನುವಾದವನ್ನು ಮಾಡಿ ವಿಸ್ತರಿಸಿ ಉಪದೇಶ ಮಾಡುತ್ತಿದ್ದರು. ಭಗವಾನರ ಸಮವಸರಣವು ರಾಜಗೃಹದ ವಿಪುಲಾಚಲದ ಮೇಲೆ ಬಂದಿತು. ಅಲ್ಲಿನ ರಾಜನಾದ ಶ್ರೇಣಿಕನು ಬಂದು, ಭಕ್ತಿಯಿಂದ ಭಗವಂತನನ್ನು ಸ್ತುತಿಸಿ, ವಂದಿಸಿದನು. ಆತನೇ ಮುಖ್ಯಶ್ರೋತೃವಾಗಿ ಭಗವಂತನಿಂದ ಸವಿಸ್ತಾರವಾದ ಪುರಾಣ, ಪುಣ್ಯಕಥೆ, ಲೋಕಸ್ವರೂಪ, ದ್ರವ್ಯಸ್ವರೂಪ, ಕರ್ಮಪರಿಪಾಟ, ಧರ್ಮಸಿದ್ಧಾಂತ, ಯತಿಗಳ, ಶ್ರಾವಕರ ಆಚರಣೆಯ ವಿವರವೇ ಮುಂತಾದ ಎಲ್ಲ ವಿಷಯವನ್ನು ಕೇಳಿದನು. ವೀರರು ಜಗತ್ತಿನ ಜೀವಿಗಳಿಗೆ ಕಲ್ಯಾಣದ ಮಾರ್ಗವನ್ನು ಶಾಶ್ವತ ಸುಖ-ಶಾಂತಿಯ ಉಪದೇಶವನ್ನೂ ಅಹಿಂಸಾ ಧರ್ಮದ ಅವಶ್ಯಕತೆಯನ್ನೂ ಒಳ್ಳೆಯ ನಂಬಿಕೆ, ಜ್ಞಾನ, ಆಚರಣೆಗಳ ವಿವರವನ್ನೂ ತಿಳಿಸುತ್ತ ಆರ್ಯಖಂಡದಲ್ಲೆಲ್ಲ ವಿಹರಿಸಿದರು.

ಶ್ರೀ ವೀರವಾಣಿಯನ್ನು ಗೌತಮ ಗಣಧರರು ದ್ವಾದಶಾಂಗ ಶಾಸ್ತ್ರ ಮತ್ತು

ಚತುರ್ದಶ ಪೂರ್ವಗಳನ್ನಾಗಿ ಸಂಗ್ರಹಿಸಿದರು. ಅದು ಪರಂಪರಾನುಗತವಾಗಿ ಬಂದು ಅಳಿದುಳಿದ ಸ್ವಲ್ಪ ಭಾಗ ಮಾತ್ರ ಈಗ ಉಳಿದಿದೆ. ಭಗವಂತನ ಸಮವಸರಣದಲ್ಲಿ ಗೌತಮಾದಿ ಹನ್ನೊಂದು ಗಣಧರರಿದ್ದರು. ಆರ್ಯಿಕೆಯರ ಗುಂಪಿಗೆ ಚಂದನಾರ್ಯಿಕೆಯೇ ಮುಖ್ಯವಾಗಿದ್ದಳು.

ಹೀಗೆ ವೀರರು ಮೂವತ್ತು ವರ್ಷಗಳವರೆಗೆ ಧರ್ಮತೀರ್ಥವನ್ನು ಪ್ರವಹಿಸಿ, ತನ್ನ ಆಯುಷ್ಯವು ಎರಡು ದಿನ ಇದೆ. ಎನ್ನುವಾಗ ಸಮವಸರಣವನ್ನು ಬಿಟ್ಟು ಪಾವಾಪುರದ ಕೆರೆಯ ಮಧ್ಯೆ ಇದ್ದ ಸ್ವಚ್ಛ ಶಿಲೆಯ ನಿರ್ಜನ ಪ್ರದೇಶದಲ್ಲಿ ನಿಂತು ಯೋಗನಿರೋಧವನ್ನು ಮಾಡಿದರು. ಕಾರ್ತಿಕ ಕೃಷ್ಣ ಚತುರ್ದಶಿಯ ಅಂತಿಮ ಜಾವದಲ್ಲಿ ಸಕಲ ಕರ್ಮಗಳನ್ನು ನಿರ್ಮೂಲ ಮಾಡಿ, ನಿರ್ವಾಣ ಹೊಂದಿದರು. ಕೂಡಲೇ ದೇವತೆಗಳು ನಿರ್ವಾಣಕಲ್ಯಾಣ ಪೂಜೆಯನ್ನು ಮಾಡಿದರು. ಭಗವಂತನ ಪಾರ್ಥಿವ ಶರೀರಕ್ಕೆ ಅಗ್ನಿಕುಮಾರನಿಂದ ಅಗ್ನಿಸಂಸ್ಕಾರವಾಯಿತು. ನಂತರ ಎಲ್ಲರೂ ದೀಪಗಳನ್ನು ಬೆಳಗಿಸಿ, ಭಗವಂತನನ್ನು ಹೊಗಳಿ, ಭಜನೆ ಮಾಡಿ, ನಮಗೂ ನಿನ್ನ ಪದವಿ ದೊರೆಯಲೆಂದು ಪ್ರಾರ್ಥಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹೋದರು ಮಹಾವೀರಸ್ವಾಮಿಯು ಮೋಕ್ಷಕ್ಕೆ ಹೋದಕಾಲಕ್ಕೆ ಚತುರ್ಥ ಕಾಲವು 3 ವರ್ಷ 8 ತಿಂಗಳು ಮಾತ್ರ ಉಳಿದಿತ್ತು. ಅಂದರೆ ಮಹಾವೀರರು ಜನಿಸಿ ಇಂದಿಗೆ 2598 ವರ್ಷ, ಮತ್ತು ನಿರ್ವಾಣ ಹೊಂದಿ 2526 ವರ್ಷಗಳಾದುವು. ಅವರು ಏಳು ಮೊಳ ಉದ್ದವಿದ್ದು 72 ವರ್ಷ ಆಯುಷ್ಯವನ್ನು ಹೊಂದಿದ್ದರು. ಮಹಾವೀರರು ಮುಕ್ತಿ ಹೊಂದಿದ ದಿನವೇ ದೀಪಾವಳಿ.

ಹೀಗೆ ಒಂದು ಜನ್ಮದಲ್ಲಿ ಚಾರಿತ್ರಭ್ರಷ್ಟರಾದುದರಿಂದ ಅನೇಕ ಭವಗಳನ್ನು ಎತ್ತಿ ಒಂದಾನೊಂದು ಭವದಲ್ಲಿ ದೃಢಸಮ್ಯಕ್ತ್ವಿಯಾಗಿ ಮಹಾವೀರರೆಂಬ ಅಂತಿಮ ತೀರ್ಥಂಕರರಾದರು. ಜೀವನು ಜನ್ಮ ಮರಣಾದಿಗಳೆಂಬ ಭವಸಾಗರದಿಂದ ಪಾರಾಗಿ ಜೀವನ್ಮುಕ್ತನಾಗಲು ಬೇಕಾದ ಸಕಲ ಸಾಮಗ್ರೀಯ ರೂಪವಾದ ಬೋಧೆಯನ್ನು ನೀಡಿ ಹೋದರು. ಇಂಥ ಮಹಿಮರ ಜನ್ಮದಿನ ಮತ್ತು ನಿರ್ವಾಣ ದಿನಗಳನ್ನು ಸ್ಮರಿಸಿಕೊಂಡು ಭಗವಾನರ ಉತ್ಸವ ಪೂಜೆಗಳನ್ನು ಮಾಡಿ, ಅವರ ಜೀವನ ಪರಿಚಯವನ್ನೂ ವಾಣಿಯನ್ನೂ ಪ್ರಸಾರ ಮಾಡಿ ಅವರ ಆದರ್ಶಗಳನ್ನು ಅನುಸರಿಸಿ ಅವರ ಹಾದಿಯಲ್ಲಿ ಸಾಗುತ್ತಾ ನಮ್ಮ ನಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳೋಣ.



# 63. ಲಬ್ಧಿ ವಿಧಾನ ವ್ರತ ಮಹಿಮೆ

(ಆಧಾರ – ಸಮ್ಯಗ್‌ಜ್ಞಾನ)

ಅವಂತೀ ದೇಶದಲ್ಲಿ ಪುಷ್ಪಪುರಿ ಎಂಬುದೊಂದು ನಗರ. ಮಹೀಚಂದ್ರನೆಂಬುವನು ಅಲ್ಲಿನ ರಾಜ. ಆತನ ಪತ್ನಿ ಸುಂದರಿ. ಒಮ್ಮೆ ಅಂಗಭೂಷಣಾಚಾರ್ಯರೆಂಬ ದಿಗಂಬರ ಮುನಿಗಳು ಚತುಃಸಂಘದೊಂದಿಗೆ ವಿಹರಿಸುತ್ತ ಈ ಪುಷ್ಪಪುರಿಯ ಹೊರಭಾಗದಲ್ಲಿದ್ದ ಉಪವನಕ್ಕೆ ಬಂದರು. ಆಚಾರ್ಯರ ಆಗಮನವನ್ನು ಕೇಳಿದ ಮಹೀಚಂದ್ರ ರಾಜನು ತನ್ನ ಪರಿವಾರದೊಂದಿಗೆ ಆಚಾರ್ಯರ ದರ್ಶನಕ್ಕೆ ಹೋದನು. ಆತನು ಮುನಿದರ್ಶನ, ಪೂಜೆ, ಸೇವಾ, ನಂತರ ಧರ್ಮೋಪದೇಶವನ್ನು ಕೇಳಿದನು. ಅದೇ ಸಮಯದಲ್ಲಿ ಸ್ವಲ್ಪ ದೂರದಲ್ಲಿ ಮೂವರು ಕುರೂಪೀ ಹೆಣ್ಣುಮಕ್ಕಳು ನಿಂತು, ಮುನೀಶ್ವರರ ಉಪದೇಶವನ್ನು ಕೇಳುತ್ತಿದ್ದರು. ಉಪದೇಶ ಕೇಳಿದ ನಂತರ ರಾಜನು ಆ ಹೆಣ್ಣುಮಕ್ಕಳನ್ನು ನೋಡಿದನು. ಅವರನ್ನು ನೋಡುತ್ತಿದ್ದಂತೆಯೇ ಅವರ ಮೇಲೆ ಅನುಕಂಪೆಯಿಂದ ಒಂದು ವಿಧದ ವಾತ್ಸಲ್ಯ ಉಂಟಾಯಿತು. ಇದ್ದಕ್ಕಿದ್ದಂತೆ ಅವರಲ್ಲಿ ತನಗೆ ಈ ಭಾವನೆ ಏಕಾಯಿತೆಂದು ಆಚಾರ್ಯರನ್ನು ಕೇಳಿದನು. ಆಚಾರ್ಯರು ಅವಧಿಜ್ಞಾನ ಸಂಪನ್ನರಾಗಿದ್ದರು. ಅವರು ಹೇಳಿದರು. -

"ಹೇ ರಾಜನ್! ನಿನಗೆ ಅವರಲ್ಲಿ ವಾತ್ಸಲ್ಯವುಂಟಾಗಲು ಜನ್ಮಾಂತರ ಸಂಬಂಧ ಉಂಟು. ಕಾರಣವಿಲ್ಲದೆ ಕಾರ್ಯವಾಗದು. ನಿನ್ನ ಪ್ರೇಮಕ್ಕೆ ಕಾರಣ ಹಿಂದಿನ ಭವದ ಸಂಬಂಧ. ಕೇಳು, - ಹಿಂದೆ ಕಾಶೀನಗರದಲ್ಲಿ ವಿಶ್ವಲೋಚನನೆಂಬ ರಾಜನಿದ್ದನು. ವಿಶಾಲಾಕ್ಷಿ ಎಂಬುವಳು ತನ್ನ ಪತ್ನಿ. ಆಕೆಗೆ ರಂಗಿ ಮತ್ತು ಚಮರೀ ಎಂಬಿಬ್ಬರು ದಾಸಿಯರಿದ್ದರು. ಅವರು ದುರಾಚಾರಿಗಳು. ರಾಣಿಗೆ ಆಪ್ತರಾಗಿದ್ದುದರಿಂದ ಅವರ ಮಾತಿಗೆ ಬೆಲೆ ಕೊಡುತ್ತಿದ್ದಳು. ಹೀಗಾಗಿ ಕ್ರಮ ಕ್ರಮವಾಗಿ ರಾಣಿಯನ್ನು ಅವರು ತಪ್ಪು ದಾರಿಗೆ ಎಳೆಯಲಾರಂಭಿಸಿದರು. ಒಮ್ಮೆ ರಾಜನು ವಿಹಾರಾರ್ಥ ಹೊರಗೆ ಹೋಗಿದ್ದಾಗ ರಾಣಿಯು ದಾಸಿಯರ ಸಂಗಡ ಹೋಗಿ, ಒಂದು ನಾಟಕವನ್ನು ನೋಡಿ, ಚಿತ್ತಭ್ರಮಿತಳಾದಳು. ಅಂದಿನಿಂದ ಆಕೆಯ ನಡೆ-ನುಡಿಯಲ್ಲಿ ಸ್ವೇಚ್ಛಾಚಾರಗಳು ಕಂಡುಬಂದುವು. ಒಂದು ರಾತ್ರಿ ಆಕೆಯು ಅಪಾರ ಹಣದೊಂದಿಗೆ ಆ ದಾಸಿಯರ ಸಂಗಡ ಅರಮನೆಯನ್ನು ತೊರೆದು ಓಡಿಹೋದಳು. ಇದು

ಚಿತ್ತಭ್ರಮೆ, ವಿಷಯ ಲಂಪಟತ್ವ ಮತ್ತು ಸಹವಾಸದೋಷ. ಕೆಲವು ದಿನ ಕಳೆದ ಮೇಲೆ ಯೋಗಿನಿಯ ವೇಷ ಧರಿಸಿ, ಮಾಯಾಚಾರದಿಂದ ವೇಶ್ಯಾವೃತ್ತಿಯಲ್ಲಿ ತೊಡಗಿದಳು. ಈ ದಾಸಿಯರು ಶಿಷ್ಯರಂತೆ ಸಹಾಯಕರಾದರು.

ಇತ್ತ ವಿಶ್ವಲೋಚನರಾಜನು ಪತ್ನಿಯ ವಿಯೋಗದಿಂದ ದುಃಖಪಟ್ಟು ಹುಚ್ಚನಾಗಿ ಸತ್ತನು. ಅವನು ಅನೇಕ ಭವಗಳಲ್ಲಿ ಬಳಲಿ ಒಮ್ಮೆ ಓರ್ವ ಮುನಿಗಳಿಂದ ಣಮೋಕಾರ ಮಂತ್ರವನ್ನು ಕೇಳಿ ಪಠಿಸಿ ಅದರ ಪ್ರಭಾವದಿಂದ ಒಬ್ಬ ರಾಜನಾಗಿ ಹುಟ್ಟಿದನು. ಆ ರಾಜನೇ  ಮಹೀಚಂದ್ರನೆಂಬನೀನು ಎಂದರು ಮುನಿ ಮಹಾರಾಜರು.

"ಸ್ವಾಮಿ ಆ ವಿಶಾಲಾಕ್ಷಿ ಮತ್ತು ದಾಸಿಯರ ಪಾಡೇನಾಯಿತು?" ಎಂದು ಕೇಳಿದ ರಾಜನಿಗೆ ಆಚಾರ್ಯರು ಹೇಳುತ್ತಾರೆ.

"ರಾಜನ್! ಆ ಮಾಯಾವಿ ವಿಶಾಲಾಕ್ಷಿಯು ಮಧು, ಮದ್ಯ, ಮಾಂಸಾದಿಗಳ ಸೇವನೆ ಮಾಡುತ್ತ ಒಂದು ದಿನ ರಾತ್ರಿ ಓರ್ವ ದಿಗಂಬರ ಮುನಿಗಳು ಧ್ಯಾನಾಸಕ್ತರಾಗಿ ಕುಳಿತಿದ್ದಾಗ ಅವರ ಚಾರಿತ್ರ ಕೆಡಿಸಲು ಅತಿಶಯ ಉಪಸರ್ಗ ಕೊಟ್ಟಳು. ಏನು ಮಾಡಿದರೂ ತನ್ನ ಕಾರ್ಯಸಾಧನೆಯಾಗದೆ ಹೊರಟು ಹೋದಳು. ಹೀಗೆ ಅಲೆದಾಡುತ್ತ ಮುದಿತನದಲ್ಲಿ ಅವರು ಮೂವರೂ ಆರ್ತರೌದ್ರ ಧ್ಯಾನದಿಂದ ಸತ್ತು ಐದನೇ ನರಕದಲ್ಲಿ ಹುಟ್ಟಿದರು. ಅಲ್ಲಿ ಘೋರ ದುಃಖವನ್ನು ಅನುಭವಿಸಿ, ಅಲ್ಲಿಂದ ಮೂವರೂ ಒಂದೆಡೆ ಬೆಕ್ಕುಗಳಾಗಿ ಹುಟ್ಟಿದರು. ಅಲ್ಲಿಂದ ಸತ್ತು ಮೂವರೂ ಹಂದಿಗಳಾಗಿ ಹುಟ್ಟಿದರು. ಅನಂತರ ನಾಯಿ, ಕೋಳಿ ಮುಂತಾದ ತಿರ್ಯಂಚ ಯೋನಿಗಳಲ್ಲಿ ಹುಟ್ಟಿ ಸತ್ತು ಬಹು ದುಃಖವನ್ನು ಅನುಭವಿಸಿದರು. 'ಮಾಯಾ ತೈರ್ಯಗ್ಯೋನಸ್ಯ' ಎಂಬಂತೆ ಮಾಯಾಚಾರಿಗೆ ತಿರ್ಯಂಚಗತಿಯಲ್ಲಿ ಜನ್ಮವೇ ಪ್ರಾಪ್ತಿ. ಅನಂತರ ಒಂದು ಶೂದ್ರ ಕುಟುಂಬದಲ್ಲಿ ಮೂವರೂ ಅಕ್ಕ-ತಂಗಿಯರಾಗಿ ಜನಿಸಿದರು. ಅವರು ಕೆಲವೇ ದಿನಗಳಲ್ಲಿ ತಂದೆ, ತಾಯಿ, ಬಂಧು, ಬಳಗವನ್ನು ಕಳೆದುಕೊಂಡು ಅನಾಥರಾದರು. ಅವರಲ್ಲಿ ಒಬ್ಬಳು ಕುಂಟಿ, ಒಬ್ಬಳು ಕುರುಡಿ, ಇನ್ನೊಬ್ಬಳು ಕಿವುಡಿಯಾದರು. ಮೂವರೂ ಕುರೂಪಿಗಳೇ ಅವರು ಹಿಂದೆ ಮಾಯಾಚಾರಿಗಳಾಗಿ ಮುನಿಗಳಿಗೆ ಉಪಸರ್ಗ ಮಾಡಿದ್ದರಿಂದ ಇಂತಹ ವಿಪತ್ತನ್ನು ಅನುಭವಿಸಬೇಕಾಯಿತು." ಎಂದು ಹೇಳಿದ ಮುನಿಗಳು, "ರಾಜನೇ! ಇವರೇ ಹಿಂದೆ ನೀನು ವಿಶ್ವಲೋಚನನಾಗಿದ್ದಾಗಿನ ನಿನ್ನ ರಾಣೀ ಮತ್ತು ದಾಸಿಯರು. ಇವರಿಗೆ ಈಗ ಲಬ್ಧಿ ಒದಗಿದೆ. ಇದರಿಂದಾಗಿಯೇ ನಿನಗೆ ಅವರ ಮೇಲೆ ವಾತ್ಸಲ್ಯವುಂಟಾಗಿದೆ.



ದಯಾಭಾವದಿಂದ ಅನಾಥರಾದ ಅವರಿಗೆ ಅನ್ನ ಬಟ್ಟೆಗಳಿಗೆ ಆಶ್ರಯಕೊಡು" ಎಂದರು.

"ಆಗಲಿ ಸ್ವಾಮಿ ತಮ್ಮ ಆಜ್ಞೆ" ಎಂದನು ರಾಜ.

ಆ ಮೂವರೂ ಕನ್ಯೆಯರೂ ಮುನಿಗಳ ಈ ಎಲ್ಲ ಕಥೆಯನ್ನು ಕೇಳುತ್ತಿದ್ದರು. ಪಾಪಭೀತರಾಗಿ ಮುನಿಗಳ ಹತ್ತಿರ ಬಂದು ಅಡ್ಡ ಬಿದ್ದು ಪ್ರಾರ್ಥಿಸಿದರು. "ಪ್ರಭುಗಳೇ, ಮಹಾಸ್ವಾಮಿಗಳೇ! ತಮ್ಮಿಂದ ನಮ್ಮ ಭವದ ಕಥೆ ಗೊತ್ತಾಯಿತು. ಈಗ ನಮಗೆ ಬಹಳ ಪಶ್ಚಾತ್ತಾಪವಾಗಿದೆ. ಈ ದುಃಖದಿಂದ ಪಾರಾಗುವ ಉಪಾಯವನ್ನು ತಿಳಿಸಿ ಕಾಪಾಡಿರಿ" ಎಂದು ಬೇಡಿದರು. ಮುನಿಮಹಾರಾಜರು ಆ ಮೂವರಿಗೂ ಆಶೀರ್ವದಿಸಿ ಧರ್ಮೋಪದೇಶವನ್ನು ಮಾಡಿ, "ಪುತ್ರಿಯರಿರಾ, ನೀವು ಲಬ್ಧಿ ವಿಧಾನ ಎಂಬ ವ್ರತವನ್ನು ಮಾಡಿರಿ. ಅದರಿಂದ ನಿಮಗೆ ಒಳ್ಳೆಯದಾಗುವುದು" ಎಂದು ಹೇಳುತ್ತ, ರಾಜನ ಕಡೆಗೆ ಕೈ ಮಾಡಿ, "ರಾಜನ್, ಇವರು ಈ ವ್ರತವನ್ನು ಸಾಂಗವಾಗಿ ಮಾಡುವುದಕ್ಕೆ ವ್ಯವಸ್ಥೆ ಮಾಡು" ಎಂದು ಆಶೀರ್ವದಿಸಿದರು.

"ಗುರುದೇವ! ಆ ವ್ರತದ ವಿಧಾನವೇನು ಅಪ್ಪಣೆ ಕೊಡಿಸಿರಿ" ಎಂದು ಆ ಕನ್ಯೆಯರು ಕೇಳಿದರು.

"ಕೇಳಿ, ಇದು ಬಹಳ ಸುಲಭ." ಎಂದು ಹೇಳುತ್ತ ಆಚಾರ್ಯರು, "ಭಾದ್ರಪದ ಶುಕ್ಲ ಪಕ್ಷದ ಪಾಡ್ಯ, ಬಿದಿಗೆ, ತದಿಗೆ ಈ ಮೂರು ದಿನವೂ ಶುಚಿರ್ಭೂತರಾಗಿ, ಮಂದಿರದಲ್ಲಿ ನವದೇವತಾರಾಧನೆ ಮಾಡಿಸಬೇಕು. ಪೂಜಾ ನಂತರ ನೀವು ಸಂಕಲ್ಪ ಪೂರ್ವಕವಾಗಿ (ಶುದ್ಧ ಮನಸ್ಸಿನಿಂದ 'ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಃ ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸರ್ವಸಾಧುಜಿನಧರ್ಮ ಜಿನಾಗಮಜಿನಚೈತ್ಯ ಚೈತ್ಯಾಲಯೇಭ್ಯೋ ನಮಃ ಸ್ವಾಹಾ' ಎಂದು ಮೂರು ದಿನವೂ 108 ಸಾರಿ ಜಪಿಸಬೇಕು. ಮೂರು ದಿನವೂ ಉಪವಾಸವಿರಬೇಕು. ಇದು ಅಸಾಧ್ಯವಾದರೆ ಒಪ್ಪತ್ತಾದರೂ (ಏಕಭುಕ್ತ) ಮಾಡಬೇಕು. ಬ್ರಹ್ಮಚರ್ಯ ಪಾಲಿಸಬೇಕು. ಈ ವ್ರತ ಕಥೆಯನ್ನು ಕೇಳಬೇಕು. ಅಥವಾ ಓದಬೇಕು ಹೀಗೆ ಮೂರು ವರ್ಷ ಮಾಡಿದ ನಂತರ ಯಥಾಶಕ್ತಿ ಉದ್ಯಾಪನೆ ಮಾಡಬೇಕು" ಎಂದರು.

ಗುರುದೇವರ ಆಜ್ಞೆಯನ್ನೂ, ಆಶೀರ್ವಾದವನ್ನೂ ಪಡೆದು ಆ ಕನ್ಯೆಯರು ಮಹಿಚಂದ್ರ ರಾಜನ ಆಶ್ರಯವನ್ನು ಪಡೆದು ಸತ್ಕಾಲಕ್ಷೇಪ ಮಾಡುತ್ತ ಪೂರ್ಣ ಬ್ರಹ್ಮಚರ್ಯವನ್ನು ಅನುಸರಿಸಿ, ಮುನಿಗಳು ತಿಳಿಸಿದ ಪ್ರಕಾರ ಲಬ್ಧಿವಿಧಾನ

ವ್ರತವನ್ನು ಧಾರಣ ಮಾಡಿ ಉದ್ಯಾಪನೆಯನ್ನೂ ಮಾಡಿಸಿದರು. ಸಾತ್ವಿಕ ವೃತ್ತಿಯಿಂದ ಬಾಳಿ, ಸಮಾಧಿಯಿಂದ ಮರಣ ಹೊಂದಿದರು. ಅರಹಂತರ ಸ್ಮರಣೆಯೊಂದಿಗೆ ಮರಣ ಹೊಂದಿದ್ದರಿಂದ ಸ್ತ್ರೀಲಿಂಗವನ್ನು ಛೇದಿಸಿ ಸ್ವರ್ಗದಲ್ಲಿ ಪ್ರಭಾವಶಾಲಿ ದೇವಪರ್ಯಾಯವನ್ನು ಪಡೆದರು.

ಮಾಗಧ ದೇಶದಲ್ಲಿ ಬ್ರಾಹ್ಮಣವೆಂಬ ನಗರದಲ್ಲಿ ಶಾಂಡಿಲ್ಯನೆಂಬ ಬ್ರಾಹ್ಮಣನಿದ್ದನು. ಆತನ ಪತ್ನಿ ಸ್ಥಾಂಡಿಲಾ ಎಂಬವಳು. ಈ ದಂಪತಿಗಳಿಗೆ ಸ್ವರ್ಗದಲ್ಲಿದ್ದ ಆ ದೇವತೆಗಳು ಮಕ್ಕಳಾಗಿ ಜನಿಸಿದರು. ಅವರಲ್ಲಿ ಹಿರಿಯವನೇ ಇಂದ್ರಭೂತಿ ಹಿಂದಿನ ವಿಶಾಲಾಕ್ಷಿಯ ಜನ್ಮ. ಎರಡನೇಯವನು ವಾಯುಭೂತಿ. ಹಿಂದಿನ ರಂಗಿ ಎಂಬ ದಾಸಿಯ ಜನ್ಮ. ಮೂರನೆಯವನು ಅಗ್ನಿಭೂತಿ. ಹಿಂದಿನ ಚಮರೀ ಎಂಬ ದಾಸಿಯ ಜನ್ಮ. ಈ ಮೂವರು ಪುತ್ರರನ್ನೂ ಶಾಂಡಿಲ್ಯನು ಅಕ್ಕರೆಯಿಂದ ಬೆಳೆಸಿ, ವೇದ ವೇದಾಂಗ ಪಾರಂಗತರನ್ನಾಗಿ ಮಾಡಿದನು. ಈ ಮೂವರೂ ಸೋದರರು ಬ್ರಹ್ಮಚಾರಿಗಳಾಗಿಯೇ ಇದ್ದು ಐದು ನೂರು ಶಿಷ್ಯರನ್ನು ಹೊಂದಿದ್ದರು. ಇವರಿಗೆಲ್ಲ ಹಿರಿಯ ಇಂದ್ರಭೂತಿಯೇ ಮುಖ್ಯ ಗುರು. ಇವರು ಗೌತಮ ಕುಂಡದ ಬಳಿ ಆಶ್ರಮದಲ್ಲಿ ಇದ್ದರು.

ಭಗವಾನ್ ಮಹಾವೀರ ಸ್ವಾಮಿಯವರು ಕೇವಲ ಜ್ಞಾನವನ್ನು ಹೊಂದಿ ಸಮವಸರಣದಲ್ಲಿ ವಿರಾಜಮಾನರಾದರು. ಅರವತ್ತಾರು ದಿನಗಳಾದರೂ ದಿವ್ಯಧ್ವನಿಯು ಹೊರಡಲಿಲ್ಲ. ಇಂದ್ರನು "ಇಲ್ಲಿ ಗಣಧರರಿಲ್ಲ. ಅದಕ್ಕೇ ದಿವ್ಯಧ್ವನಿ ಹೊರಡಲಿಲ್ಲ" ವೆಂದರಿತು, ಬಹು ಉಪಾಯದಿಂದ ಇಂದ್ರಭೂತಿ ಬ್ರಾಹ್ಮಣನನ್ನು ಸಮವಸರಣಕ್ಕೆ ಕರೆತಂದನು. ಅಲ್ಲಿದ್ದ ಮಾನಸ್ತಂಭವನ್ನು ಕಂಡಕೂಡಲೇ ಇಂದ್ರಭೂತಿಯ ಮಾನಕಷಾಯ ನಾಶವಾಯಿತು. ವೀರ ಜಿನೇಂದ್ರರ ದರ್ಶನ ಮಾಡಿ, ತನ್ನ ಶಿಷ್ಯರೊಂದಿಗೆ ದೀಕ್ಷೆ ತೆಗೆದುಕೊಂಡು ದಿಗಂಬರ ಯತಿಯಾದರು. ಕೂಡಲೇ ಮನಃಪರ್ಯಯಜ್ಞಾನವಾಯಿತು. ಮುನಿಪತಿ ಎನಿಸಿ ಗೌತಮ ಗಣಧರರಾದರು. ಭಗವಂತನ ದಿವ್ಯಧ್ವನಿಯನ್ನು ವಿಶದೀಕರಿಸಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಉಪದೇಶ ಮಾಡಿದರು. ಮತ್ತಿತರ ಸೋದರರಾದ ವಾಯುಭೂತಿ ಮತ್ತು ಅಗ್ನಿಭೂತಿ ಇವರೂ ಗಣಧರರಾದರು. ಕ್ರಮವಾಗಿ ಮುಕ್ತಿಯನ್ನು ಹೊಂದಿದರು.

ನೋಡಿರಿ! ಕೆಟ್ಟ ಸಹವಾಸ ದೋಷದಿಂದ ಸ್ವಚ್ಛಂದ ವೃತ್ತಿಯಿಂದ ಮಾಯಾಚಾರಿಯಾದ ರಾಣೀ ರಾಜ್ಯಪದವನ್ನು ತೊರೆದು ಅಲೆಯಬೇಕಾಯಿತು. ಅಲ್ಲಿ ಮುನಿಯೋರ್ವರಿಗೆ ಉಪಸರ್ಗ ನೀಡಿದ್ದರಿಂದ ಘೋರ ದುಃಖವನ್ನು ಅನುಭವಿಸಬೇಕಾಯಿತು. ಬಹು ಕಾಲಾನಂತರ ಮತ್ತೆ ಲಬ್ಧಿ ಒದಗಿ 'ಲಬ್ಧಿವಿಧಾನ' ವ್ರತವನ್ನು ಮಾಡಿ ಗುರುಭಕ್ತಿ ಹಾಗೂ ಜಿನೇಂದ್ರ ಭಗವಾನರ ನಿಜವಾದ ಧರ್ಮಪ್ರಸಾದದಿಂದ ಗಣಧರ ಪದವಿಯನ್ನು ಪ್ರಾಪ್ತಮಾಡಿಕೊಂಡು ವೃದ್ಧಿಸಂಪನ್ನರಾಗಿ ಶಿವಸೌಖ್ಯ ಸಿದ್ಧಿಯನ್ನು ಪಡೆದು ಸದಾ ಸಿದ್ಧಸುಖವನ್ನು ಅನುಭವಿಸುತ್ತ ಸ್ವಸ್ಥಾನವಾದ ಸಿದ್ಧಶಿಲೆಯಲ್ಲಿ ನೆಲೆಸಿದರು.



ಹಿಂದೆ ಭಗವಾನ್ ವೃಷಭನಾಥರ ಪುತ್ರ ಅನಂತ ವೀರ್ಯನೆಂಬುವನೂ ಈ 'ಲಬ್ಧಿವಿಧಾನ' ವ್ರತವನ್ನು ಮಾಡಿದ್ದನು. ಹೀಗೇ ಅನಾದಿಕಾಲದಿಂಥಲೂ ಇಂತಹ ಸುಲಭವೂ, ಮಹತ್ವಪೂರ್ಣವೂ, ಮಹಿಮಾನ್ವಿತವೂ ಆದ ವ್ರತಗಳ ಅನುಸರಣೆಯಿಂದ ಅನಂತ ಜೀವಿಗಳು ಶಾಶ್ವತ ಸುಖ-ಶಾಂತಿಯನ್ನು ಹೊಂದಿದ್ದಾರೆ.

ಈ ಲಬ್ಧಿವಿಧಾನ ವ್ರತವು ಬಹು ಸುಲಭವೂ, ಸರ್ವರೂ ಮಾಡಲು ಅನುಕೂಲವೂ ಆಗಿರುವುದರಿಂದ ಅನಾಯಾಸವಾಗಿ ಮಾಡಿ ಪುಣ್ಯಭಾಗಿಗಳಾಗಬಹುದು.

## 64. ಶ್ರೀ ಶುಭಚಂದ್ರ ಚರಿತ್ರೆ

ಶುಭಚಂದ್ರ ಮತ್ತು ಭರ್ತೃಹರಿ ಇವರಿಬ್ಬರು ಅವಳಿ ಸಹೋದರ ರಾಜಪುತ್ರರಿದ್ದರು. ಇವರಿಬ್ಬರೂ ಪರಾಕ್ರಮಿಗಳೂ ಶೂರರೂ ಇದ್ದರು. ಇವರ ತಂದೆ ಸಿಂಧು ರಾಜ, ತಾಯಿ ಮೃಗಾವತಿ. ಸಿಂಧುಮಹಾರಾಜನಿಗೆ ಇನ್ನೊಬ್ಬ ಹೆಂಡತಿಯ ಉದರದಿಂದ ಬೇರೆ ಪುತ್ರರೂ ಹುಟ್ಟಿದರು. ಅವರೆಲ್ಲ ಸುಂದರ ರೂಪವಂತರಿದ್ದರೂ ಶೂರ ವೀರರಾಗಿರಲಿಲ್ಲ. ರಾಜನು ಈ ಹೊಸ ರಾಣಿಯ ಮಕ್ಕಳಿಗೆ ರಾಜ್ಯವನ್ನು ಕೊಡಬೇಕೆಂದು ಯೋಚಿಸುತ್ತಿದ್ದನು. ರಾಣಿಯನ್ನು ಸಂತುಷ್ಟಗೊಳಿಸುವ ವಿಚಾರದಲ್ಲಿದ್ದನು.

ಒಂದು ದಿನ ನವಯುವಕರಾದ ರಾಜಪುತ್ರರೆಲ್ಲ ಮಂಟಪದಲ್ಲಿ ಆಡುತ್ತಿದ್ದರು. ಅವರಲ್ಲಿ ಶುಭಚಂದ್ರ ಮತ್ತು ಭರ್ತೃಹರಿ ಇವರು ಮಂಟಪದಲ್ಲಿ ಹೂತಿದ್ದ ಕಬ್ಬಿಣದ ಕಂಬವನ್ನು ಕಬ್ಬಿನಂತೆ ತುಂಡು ತುಂಡು ಮಾಡಿಬಿಟ್ಟರು. ಇದನ್ನು ರಾಜನು ನೋಡಿ, ಆಶ್ಚರ್ಯಪಟ್ಟು ಆಲೋಚಿಸಹತ್ತಿದನು. 'ಈ ಇಬ್ಬರು ಪುತ್ರರು ಮನೆಯಲ್ಲಿದ್ದರೆ ನನ್ನ ಬಯಕೆ ಪೂರ್ಣಗೊಳ್ಳುವುದಿಲ್ಲ. ಹೊಸ ರಾಣಿಯ ಪುತ್ರರಿಗೆ ರಾಜ್ಯ

ದೊರಕುವುದು ಕಷ್ಟವಾದೀತು. ಆದುದರಿಂದ ಈಗಲೇ ಇವರನ್ನು ನಷ್ಟಗೊಳಿಸಬೇಕು, ಇವರ ಅಸ್ತಿತ್ವ ಇಲ್ಲದಂತೆ ಮಾಡಬೇಕು.' ಅದೇ ಸಮಯದಲ್ಲಿ ಮಂತ್ರಿಯನ್ನು ಕರೆಯಿಸಿದನು ಮತ್ತು ಈ ದೊಡ್ಡ ಇಬ್ಬರು ರಾಜಪುತ್ರರನ್ನು ಅರಣ್ಯದಲ್ಲಿ ದೂರ ಒಯ್ದು ಕೊಲೆ ಮಾಡಲು ಆಜ್ಞೆಯಿತ್ತನು. ಇದನ್ನು ಕೇಳಿ, ಮಂತ್ರಿಗೆ ಬಹಳ ದುಃಖವಾಯಿತು. ಹೀಗೆ ತಾವು ಮಾಡುವುದು ಸರಿಯಲ್ಲವೆಂದು ಬಹಳ ತಿಳಿಸಿ ಹೇಳಿದರೂ ರಾಜನು ಒಪ್ಪಲಿಲ್ಲ. ಮತ್ತು ಉತ್ತರಿಸಿದ್ದೇನೆಂದರೆ - 'ಇದು ರಾಜನೀತಿಯಿದೆ, ಹೀಗೆಯೇ ಮಾಡಬೇಕಾಗುವುದು. ನನ್ನ ಆಜ್ಞೆಯಲ್ಲಿ ಎಳ್ಳಷ್ಟೂ ಬದಲಾವಣೆ ಆಗಲಾರದು.' ಅನುಚಿತವಾದ ಆಜ್ಞೆಯನ್ನು ಕೇಳಿ ಮಂತ್ರಿಯು ಮನಸ್ಸಿನಲ್ಲಿ ಧಿಕ್ಕರಿಸಿದನು. ಮತ್ತು ಇಬ್ಬರೂ ರಾಜಪುತ್ರರಿಗೆ ಸಂಸಾರದ ವಿಷಮತೆಯನ್ನು ತಿಳಿಸಿಹೇಳಿದನು. 'ಸಹೋದರರೇ! ನೀವಿಬ್ಬರೂ ಪುಣ್ಯಶಾಲಿಗಳೂ, ಶೂರ ವೀರರೂ ಇದ್ದೀರಿ. ಆದರೆ ನಿಮ್ಮ ತಂದೆಯವರು ನಿಮ್ಮ ಮಲತಾಯಿಯ ಪುತ್ರರ ಮೇಲಿನ ಮೋಹದಿಂದ ನಿಮ್ಮ ಶೂರ-ವೀರತೆಯನ್ನು ಕಂಡು ಸ್ವಾರ್ಥಾಂಧರಾಗಿ ನಿಮ್ಮನ್ನು ಕೊಲ್ಲಲು ಆಜ್ಞಾಪಿಸಿದ್ದಾರೆ. ರಾಜ್ಯವನ್ನು ನಿಮಗೆ ಕೊಡದೆ ನಿಮ್ಮ ಬಂಧುಗಳಿಗೆ ಕೊಡುವುದಾಗಿ ನಿರ್ಣಯಿಸಿದ್ದಾರೆ. ಆದುದರಿಂದ ನನ್ನ ಕೈಯಿಂದ ಇಂಥ ದುಷ್ಕೃತ್ಯವು ನಡೆಯಲಾರದು. ನೀವು ಎಲ್ಲಾದರೂ ಈ ಕ್ಷಣದಲ್ಲಿ ಹೊರಟುಹೋಗಬೇಕು. ಮತ್ತು ಗುಪ್ತ ವೇಷದಲ್ಲಿರಬೇಕು.'

ತಂದೆಯೂ ಸಹ ಮಕ್ಕಳ ಮೇಲೆ ಇಷ್ಟು ಭೇದಭಾವವನ್ನು ಮಾಡುತ್ತಾನೆ ಎಂದ ಮೇಲೆ ಈ ಸಂಸಾರದಲ್ಲಿ ಸುಖವೆಲ್ಲಿ? ವಿಷಯ ಸುಖದಲ್ಲಿ ಮೋಹಿತರಾದ ಪ್ರಾಣಿಗಳು ಏನೇನು ಅನರ್ಥ ಮಾಡುವರೋ ಅದನ್ನು ಸರ್ವಜ್ಞ ಪರಮಾತ್ಮನೇ ಬಲ್ಲನು. ಇದು ಕರ್ಮವೈಚಿತ್ರ್ಯ, ಈ ಅಸಾರ ಸಂಸಾರವನ್ನು ತ್ಯಜಿಸಿ, ಶಾಶ್ವತ ಸುಖಕ್ಕೋಸ್ಕರ ಪ್ರಯತ್ನಿಸುವುದೇ ಶ್ರೇಷ್ಠ ಮಾರ್ಗವೆಂದು ವಿಚಾರಮಾಡಿ ಇಬ್ಬರೂ ಸಹೋದರರು ವಿರಕ್ತರಾಗಿ ತಮ್ಮ ತಮ್ಮ ರುಚಿಗನುಸಾರವಾಗಿ ಸುಖಶೋಧನೆಗಾಗಿ ಬೇರೆ ಬೇರೆ ಹೊರಟರು. ಯಥಾರ್ಥ ಸುಖದ ಮಾರ್ಗವನ್ನು ಸ್ವ-ಪರ ಭೇದವಿಜ್ಞಾನಿಗಳಾದ ಅಂತರಂಗ ಬಹಿರಂಗ ಪರಿಗ್ರಹವನ್ನೆಲ್ಲ ತೊರೆದ ಮಹಾಮುನಿಗಳೇ ತೋರಿಸಬಲ್ಲರು. ಆದಕ್ಕಾಗಿ ಅವರನ್ನೇ ಆಶ್ರಯಿಸಬೇಕು. ಅವರಿಂದ ಸಂಯಮವನ್ನು ಸ್ವೀಕರಿಸಿ ಲೋಕೋತ್ತರ ಜೀವನವನ್ನು ಪಡೆಯಬೇಕೆಂದು ಶುಭಚಂದ್ರ ರಾಜಕುಮಾರನು ವಿಚಾರ ಮಾಡುತ್ತ ಮಹಾಮುನಿಗಳನ್ನು ಶೋಧಿಸುತ್ತ ಹೊರಟನು. ಒಂದು ಸ್ಥಾನದಲ್ಲಿ ನಿರ್ಗ್ರಂಥ ಮುನೀಶ್ವರರು ಕಂಡರು. ಅವರನ್ನು ನೋಡಿ ಪರಮಹರ್ಷಿತನಾದನು. ಬಿಸಿಲಿನ



ಬೇಗೆಯಿಂದ ಬಳಲಿದವನಿಗೆ ಉತ್ತಮ ಸ್ವಚ್ಛ ನೀರು ಸಿಕ್ಕಂತಾಯಿತು. ಕಪ್ಪೆಚಿಪ್ಪಿಗೆ ಸ್ವಾತಿ ಮಳೆಯ ನೀರು ಸಿಕ್ಕಂತಾಯಿತು. ಅವರ ಹೆಸರು ಶ್ರುತಸಾಗರ ಎಂದಿತ್ತು. ಧ್ಯಾನಮುದ್ರೆಯಲ್ಲಿದ್ದರು. ಧ್ಯಾನವಿಸರ್ಜನೆಯಾದ ಕೂಡಲೇ ಅವರ ಅಡಿಗಳಲ್ಲಿ ನಮೋಸ್ತು ಮಾಡಿದನು. ಗುರುಗಳು ಸದ್ಧರ್ಮವೃದ್ಧಿರಸ್ತು ಎಂದು ಆಶೀರ್ವದಿಸಿದರು.

ಶುಭಚಂದ್ರನು ಶ್ರೀಗುರುವಿನ ಬಳಿ ವಿನಯ ಪೂರ್ವಕವಾಗಿ ವಂದಿಸಿ ''ಗುರುವರ್ಯರೇ ನನಗೆ ಎಲ್ಲ ವಿಷಮತೆಗಳನ್ನು ನಷ್ಟಮಾಡುವ ಭಗವತೀ ಜಿನದೀಕ್ಷೆಯನ್ನು ದಯಪಾಲಿಸಬೇಕು.' ಎಂದು ಪ್ರಾರ್ಥಿಸಿದನು. ಗುರುಗಳು ಎಲ್ಲ ತರದಿಂದ ಆಲೋಚಿಸಿ, ಶುಭಚಂದ್ರನಿಗೆ ಪರಮ ನಿರ್ಗ್ರಂಥ ದೀಕ್ಷೆಯನ್ನು ಇತ್ತರು. ಆಗ ಶುಭಚಂದ್ರನು ರಾಜಕುಮಾರನಾಗಿ ಉಳಿಯದೆ ಪರಮ ನಿರ್ಗ್ರಂಥ ಸಾಧುಪರಮೇಷ್ಠಿಗಳ ಶ್ರೇಣಿಯಲ್ಲಿ ಸೇರಿದನು.

ವಿಷಯಯಶಾವಶಾತೀತೋ ನಿರಾರಂಭೋ ಅಪರಿಗ್ರಹಃ ।
ಜ್ಞಾನಧ್ಯಾನತಪೋರಕ್ತಸ್ತಪಸ್ವೀ ಸ ಪ್ರಶಸ್ಯತೇ ॥

ಅಂದರೆ ಯಾರು ಪಂಚೇಂದ್ರಿಯಗಳ ವಿಷಯಗಳ ಆಸೆಯನ್ನು ತೊರೆದಿದ್ದಾರೆಯೋ, ಪರಿಗ್ರಹವಿಲ್ಲದವರೂ, ಜ್ಞಾನ, ಧ್ಯಾನ ಮತ್ತು ತಪಸ್ಸುಗಳಲ್ಲಿ ಅನುರಕ್ತರೂ ಆಗಿರುತ್ತಾರೆಯೋ ಅವರೇ ನಿಜವಾದ ತಪಸ್ವಿಯೆಂದು ಹೇಳಲ್ಪಡುತ್ತಾರೆ. ಈ ಲಕ್ಷಣಗಳಿಂದ ಶುಭಚಂದ್ರಮುನಿಯು ಶೋಭಿಸುತ್ತಿದ್ದರು. ತಪಸ್ಸು ಮಾಡುತ್ತ ಕೆಲವು ದಿನಗಳಲ್ಲಿ ತಪೋಮಾಹಾತ್ಮ್ಯದಿಂದ ಅವರಲ್ಲಿ ಅನೇಕ ವೃದ್ಧಿಗಳು ವ್ಯಕ್ತವಾದುವು.

ಇತ್ತ ಭರ್ತೃಹರಿಯು ಆತ್ಮಸುಖ ಮತ್ತು ಅದರ ಸಾಧನದಲ್ಲಿ ಶ್ರದ್ಧೆ ಇಲ್ಲದುದರಿಂದ ಶರೀರದ ಮಮತ್ವದಿಂದ ಹಸಿವೆ, ನೀರಡಿಕೆಗಳನ್ನು ನಿವಾರಿಸುವ ಉಪಾಯವನ್ನು ನೋಡಹತ್ತಿದನು. ಮತ್ತು ಅನೇಕ ಕಂದ-ಮೂಲಗಳನ್ನೂ, ಕೈಗೆ ಸಿಕ್ಕ ಫಲಗಳನ್ನೂ ತಿನ್ನುತ್ತ ಸೋಸದೆ ಇದ್ದ ಜಲಾಶಯಗಳ ನೀರನ್ನು ಕುಡಿಯುತ್ತ ತಿರುಗಾಡಹತ್ತಿದನು. ಮನೆಯನ್ನು ಬಿಟ್ಟರೂ ಇನ್ನೂ ಮಮತ್ವವು ಅವನಲ್ಲಿ ಕಡಿಮೆಯಾಗಲಿಲ್ಲ. ದಟ್ಟವಾದ ಅರಣ್ಯದಲ್ಲಿ ತಿರುಗುತ್ತ ತಿರುಗುತ್ತ ಒಂದು ಸ್ಥಳದಲ್ಲಿ ಒಬ್ಬ ಸಾಧುವು ತಪಸ್ಸನ್ನಾಚರಿಸುತ್ತಿರುವುದನ್ನು ಕಂಡನು. ಆತನ ಬಳಿ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿದನು. ಮತ್ತು ಆಶ್ರಯವನ್ನು ಕೊಡಬೇಕೆಂದು ಪ್ರಾರ್ಥಿಸಿದನು. ತಾಪಸಿಯು ಇವನು ರಾಜಪುತ್ರನೆಂದು ತಿಳಿದು ಆಶ್ರಯವನ್ನು

ಕೊಟ್ಟನು. ಭರ್ತೃಹರಿಯು ಶಿಷ್ಯನಾದನು. ಕೆಲವು ವರ್ಷಗಳಿದ್ದು ಯಂತ್ರ, ಮಂತ್ರ, ವನಸ್ಪತಿ ರಸಾಯನ ವಿದ್ಯೆಯನ್ನು ಕಲಿತನು. ತದನಂತರ ಗುರುವಿನಿಂದ ಬೇರೆಯಾದನು. ಸುವರ್ಣವನ್ನು ಮಾಡುವ ಸಿದ್ಧರಸವನ್ನು ತಯಾರಿಸಿದನು. ಅವನಿಗೆ ಅನೇಕ ಜನರು ಭಕ್ತರಾದರು. ಏಕೆಂದರೆ ಜಗತ್ತಿನಲ್ಲಿ ಚಮತ್ಕಾರಕ್ಕೆ ನಮಸ್ಕಾರವೆಂಬುದು ಪ್ರಸಿದ್ಧವಿದೆ.

ಒಂದಾನೊಂದು ದಿನ ತನ್ನ ಅಣ್ಣನಾದ ಶುಭಚಂದ್ರನ ನೆನಪು ಬಂದಿತು. ಅವರನ್ನು ಹುಡಕಲಿಕ್ಕಾಗಿ ತನ್ನ ಶಿಷ್ಯರನ್ನು ಕಳಿಸಿದನು. ಬಹಳ ಹುಡುಕಿದ ಮೇಲೆ ಅಣ್ಣನು ದಿಗಂಬರನಾಗಿದ್ದಾನೆ. ತೊಡಲಿಕ್ಕೆ ಬಟ್ಟೆಗಳೂ ಸಹ ಇಲ್ಲ. ಊಟದ ಸಾಧನವಾಗಲೀ ಅಥವಾ ಭಕ್ತಜನರಾಗಲೀ ಯಾರೂ ಹತ್ತಿರ ಇಲ್ಲ. ಬಹಳ ಕಷ್ಟದಲ್ಲಿದ್ದಾರೆ. ನಾನು ಸ್ವತಹ ನೋಡಿಬಂದಿರುವೆನೆಂದು ಒಬ್ಬ ಶಿಷ್ಯನು ಬಂದು ಸಮಾಚಾರವನ್ನು ಹೇಳಿದನು.

ಶಿಷ್ಯನಿಂದ ಸಮಾಚಾರವನ್ನು ತಿಳಿದು ನನ್ನ ಅಣ್ಣನು ಬಹಳ ಕಷ್ಟದಲ್ಲಿದ್ದಾನೆಂದು ಆತನ ದುಃಖವನ್ನು ದೂರಮಾಡುವುದಕ್ಕಾಗಿ ತಾನು ತಯಾರಿಸಿದ ಅರ್ಧ ರಸಕುಪ್ಪಿಯನ್ನು ಶುಭಚಂದ್ರ ಮುನಿರಾಜನ ಕಡೆಗೆ ಶಿಷ್ಯನ ಮುಖಾಂತರ ಕಳಿಸಿದನು.

ಶಿಷ್ಯನು ಆ ರಸಕುಪ್ಪಿಯನ್ನು ತೆಗೆದುಕೊಂಡು ಶ್ರೀ ಶುಭಚಂದ್ರ ಮುನಿರಾಜನ ಕಡೆಗೆ ಹೊರಟನು. ಅಲ್ಲಿಗೆ ಬಂದು ರಸಕುಪ್ಪಿಯನ್ನು ಅವರ ಮುಂದಿಟ್ಟು, 'ಇದು ನಿಮ್ಮ ದಾರಿದ್ರ್ಯವನ್ನೆಲ್ಲ ದೂರಮಾಡುವ ಅಮೂಲ್ಯ ಸಿದ್ಧರಸವಿದೆ. ಇದನ್ನು ನಿಮ್ಮ ತಮ್ಮನಾದ ಭರ್ತೃಹರಿ ತಾಪಸಿಯು ಕಳಿಸಿದ್ದಾನೆ. ಇದನ್ನು ಸ್ವೀಕರಿಸಬೇಕು' ಎಂದು ವಿನಂತಿ ಮಾಡಿಕೊಂಡನು. ಶುಭಚಂದ್ರರು ಉಪೇಕ್ಷಾ ಬುದ್ಧಿಯಿಂದ ಅದರತ್ತ ನೋಡಿದರು. ಮತ್ತು 'ಈ ಸುವರ್ಣರಸವನ್ನು ಬಂಡೆಯ ಮೇಲೆ ಸುರಿದುಬಿಡು ಎಂದರು. ಶಿಷ್ಯನು ಇದನ್ನು ಕೇಳಿ ಆಶ್ಚರ್ಯಪಟ್ಟನು. ಮತ್ತು ಕಷ್ಟಸಾಧ್ಯವಾದ ಈ ರಸವನ್ನು ಹೇಗೆ ನಾನು ಚೆಲ್ಲಲಿ? ಎಂದನು. ಶಿಷ್ಯನೇ! ಒಂದು ಸಲ ತ್ಯಾಗಮಾಡಿದಂಥ ಪದಾರ್ಥದ ಮೇಲೆ ಇಷ್ಟು ಮೋಹವೇಕೆ? ಅದನ್ನು ಚೆಲ್ಲಿಬಿಡು.' ಎಂದರು. ಬಹಳ ಕಷ್ಟದಿಂದ ಶಿಷ್ಯನು ಸಿದ್ಧರಸವನ್ನು ಮುನಿರಾಜರ ಆಜ್ಞೆಯಂತೆ ಬಂಡೆಯ ಮೇಲೆ ಸುರಿದು ಭರ್ತೃಹರಿಯ ಬಳಿಗೆ ಹೋದನು. ಮತ್ತು ನಡೆದ ಸಮಾಚಾರವನ್ನು ತಿಳಿಸಿದನು. ಭರ್ತೃಹರಿಗೆ ತನ್ನ ಶರೀರದ ಮೇಲೆ ಎಷ್ಟು ಮೋಹವಿತ್ತೋ ಅಷ್ಟೇ ಮೋಹವು ಆ ಸುವರ್ಣಸಿದ್ಧಿ ರಸದ ಮೇಲಿತ್ತು. ಇದನ್ನು ಕೇಳಿ ಆತನು



ಬೆಪ್ಪನಾದನು. ಮನಸ್ಸಿಗೆ ಬಹಳ ಬೇಸರವಾಯಿತು. ರಾತ್ರಿಯೆಲ್ಲ ಚಿಂತಿತನಾಗಿದ್ದನು. ನಾನು ಬಹಳ ದೊಡ್ಡ ತಪ್ಪು ಮಾಡಿದೆನು. ಇಂಥ ಅಮೂಲ್ಯ ವಸ್ತುವನ್ನು ಬೇರೆಯವನೊಡನೆ ಕಳಿಸಿದ್ದು ಸರಿಯಲ್ಲ. ಈಗ ನಾನೇ ಹೋಗಿ ಅಣ್ಣನಿಗೆ ಸರಿಯಾಗಿ ತಿಳಿಸಿಹೇಳುವೆನು. ಮತ್ತೆ ಇಂಥ ತಪ್ಪನ್ನು ಆಗಗೊಡುವುದಿಲ್ಲ. ಎಂದು ನಾನಾ ಸಂಕಲ್ಪ ವಿಕಲ್ಪಗಳನ್ನು ಮಾಡುತ್ತ ಹಾಸಿಗೆಯ ಮೇಲೆ ಅಡ್ಡಾಗಿದ್ದನು. ಮತ್ತು ಶಿಷ್ಯನು ನನ್ನ ಅಣ್ಣನಿಗೆ ಸುವರ್ಣಸಿದ್ಧಿ ರಸದ ಮಹತ್ವವನ್ನು ಸರಿಯಾಗಿ ತಿಳಿಸಿ ಹೇಳಿರಲಿಕ್ಕಿಲ್ಲ. ಹೀಗೆ ಅನೇಕ ಚಿಂತನೆಗಳಲ್ಲಿಯೇ ಬೆಳಗಾಗುವವರೆಗೆ ಮಗ್ನನಾಗಿದ್ದನು.

ಬೆಳಗಾಗುತ್ತಲೇ ಎದ್ದು ಭರ್ತೃಹರಿಯು ತನ್ನ ಅಣ್ಣನಲ್ಲಿಗೆ ಹೋದನು. ಅಣ್ಣನಿಗೆ ತಿಳಿಯಹೇಳಿ ಆ ರಸಕುಪ್ಪಿಯನ್ನು ಕೊಟ್ಟನು. ಶುಭಚಂದ್ರರು ಆ ರಸಕುಪ್ಪಿಯನ್ನು ಬಂಡೆಯ ಮೇಲೆ ಅಪ್ಪಳಿಸಿದರು. ಆಗ ಭರ್ತೃಹರಿಯು ಅವಾಕ್ಕಾದನು. 'ಎಲ್ಲಿ ಬಂಗಾರವಾಯಿತು?' ಎಂದು ಶುಭಚಂದ್ರರು ಅಂದರು. 'ಅಣ್ಣಯ್ಯ! ಕಲ್ಲು ಬಂಗಾರವಾಗುವುದಿಲ್ಲ. ತಾಮ್ರವು ಆಗುವುದು. ನೀವೇನು ಮಾಡಿದಿರಿ! ಬಹಳ ದುಃಖದ ಮಾತು' ಎಂದು ಸಂಕಟದಿಂದ ನುಡಿದನು. 'ನಾನಿದನ್ನು 12 ವರ್ಷಗಳವರೆಗೆ ಗುರುಸೇವೆ ಸಲ್ಲಿಸಿದ ಮೇಲೆ ಪಡೆದಿದ್ದೆನು. ಹಾಯ್! ಈ ದುರ್ಲಭ ವಸ್ತುವು ನಿನ್ನ ಕೆಲಸಕ್ಕೂ ಬರಲಿಲ್ಲ, ನನ್ನ ಕೆಲಸಕ್ಕೂ ಬರಲಿಲ್ಲ.'

ಶುಭಚಂದ್ರರು ಭರ್ತೃಹರಿಯ ಮುಗ್ಧ ಸ್ವಭಾವ ಮತ್ತು ಅಜ್ಞಾನವನ್ನು ಕಂಡು ಮುಗುಳ್ನಗೆಯಿಂದ ನಕ್ಕರು. ಮತ್ತು ಹೇಳಿದರು - "ಭರ್ತೃಹರಿ! ನೀನು ಮನೆ, ಧನ-ದೌಲತ್ತು, ರಾಜ್ಯ ವೈಭವನ್ನೆಲ್ಲ ಬಿಸಾಡಿ ಈ ಅರಣ್ಯದಲ್ಲಿ ಬಂದಿದ್ದು ಏಕೆ? ಎಲ್ಲ ಬಿಟ್ಟು ಬಂದರೂ ಇನ್ನೂ ಬಂಗಾರದ ಮೋಹವನ್ನು ಮಾತ್ರ ಬಿಡಲಿಲ್ಲ. ನಿನ್ನಲ್ಲಿ ಕಲಂಕವಿನ್ನೂ ದೂರವಾಗಲಿಲ್ಲ. ಇಷ್ಟು ವರ್ಷಗಳು ಕಳೆದರೂ ಅಜ್ಞಾನ, ಮಿಥ್ಯಾತ್ವದಲ್ಲಿಯೇ ಹೊರಳಾಡುತ್ತಿರುವೆ. ಇದಕ್ಕೆ ವೈರಾಗ್ಯವೆಂದು ಹೇಳಲಾರರು. ಡಂಭಾಚಾರವೆನ್ನುತ್ತಾರೆ. ನೀನು ಇನ್ನೂ ಆತ್ಮನ ನಿಜಸ್ವರೂಪವನ್ನು ತಿಳಿಯಲಿಲ್ಲ. ಅನಂತ ಭವಗಳಲ್ಲಿ ಧರ್ಮದ ಹೆಸರಿನಿಂದ ಅನೇಕ ವೇಷಗಳನ್ನು ಧರಿಸಿ ಆತ್ಮನನ್ನು ವಂಚಿಸಿರುವೆ. ಪರಪದಾರ್ಥವು ಎಂದೂ ತನ್ನದಾಗಲಾರದು, ಮತ್ತು ಆತ್ಮನು ಪರಪದಾರ್ಥವಾಗಲಾರನು. ಸೂರ್ಯನು ಸದಾ ಸ್ವಯಂ ಪ್ರಕಾಶಮಾನನಾಗಿರುತ್ತಾನೆ. ಆತನು ಕತ್ತಲೆಯನ್ನು ಗ್ರಹಣ ಮಾಡುವುದಿಲ್ಲ. ಅದರಂತೆ ಈ ಶರೀರದೊಳಗಿರುವ ಆತ್ಮನು ಆತ್ಮಭಿನ್ನ ವಸ್ತುಗಳನ್ನು

ಗ್ರಹಣಮಾಡುವುದಿಲ್ಲ, ತ್ಯಾಗವನ್ನೂ ಮಾಡುವುದಿಲ್ಲ. ಪರವಸ್ತು ಎಂದೂ ನಮ್ಮದಾಗಲಾರದು. ಆತ್ಮನು ಜ್ಞಾನದರ್ಶನಸ್ವರೂಪನಿದ್ದಾನೆ. ಅಜ್ಞಾನಿಯು ರಾಗ-ದ್ವೇಷ ಮೋಹಗಳಿಗೆ ಅಧೀನನಾಗಿ ಭ್ರಾಂತಿಯಿಂದ ಪರವಸ್ತುವು ತನ್ನದೆಂತಲೂ, ಆತ್ಮೋಪಕಾರಿಯೆಂತಲೂ ತಿಳಿಯುತ್ತಾನೆ. ಆದರೆ ಜ್ಞಾನಿಯು ಇದಕ್ಕೆ ವಿಪರೀತವಾಗಿ ತಿಳಿಯುತ್ತಾನೆ. ಆತ್ಮನು ಸ್ವಯಂವೇದ್ಯನಿದ್ದಾನೆ. ಶರೀರ ಪರಿಮಾಣನಿದ್ದಾನೆ. ಅವಿನಶ್ವರನೂ ಲೋಕಾಲೋಕಗಳನ್ನು ಪ್ರಕಾಶಿಸುವವನೂ ಇದ್ದಾನೆ. ಈ ಆತ್ಮಶಕ್ತಿಯನ್ನು ಸ್ವಪುರುಷಾರ್ಥದಿಂದಲೇ ಪಡೆಯಬೇಕು. ಆತ್ಮನನ್ನು ಆತ್ಮನೆಂತಲೂ, ಪರವನ್ನು ಪರವೆಂತಲೂ ತಿಳಿದು ಹಾಗೆ ಶ್ರದ್ಧಾನ ಮಾಡುವುದೇ ಸಮ್ಯಗ್ದರ್ಶನವಾಗಿದೆ. ಇದೇ ಧರ್ಮದ ತಳಹದಿಯಾಗಿದೆ. ತನ್ಮೂಲಕ ಚಾರಿತ್ರವನ್ನು ಪ್ರಾಪ್ತಿಮಾಡುವುದರಿಂದ ಆತ್ಮನು ಈ ಸಂಸಾರಬಂಧನದಿಂದ ಬಿಡುಗಡೆಯನ್ನು ಪಡೆಯುತ್ತಾನೆ. ತಮ್ಮಾ! ಸಂಕ್ಷೇಪವಾಗಿ ನಿಜಸ್ವರೂಪವನ್ನು ತಿಳಿದುಕೋ. ಅದರಂತೆ ನಡೆದರೆ ನಿನಗೆ ಸುಖವಿದೆ. ಆತ್ಮನು ಅನೇಕ ಋದ್ಧಿಸಿದ್ಧಿಗಳ ಮನೆಯಾಗಿದ್ದಾನೆ'' ಎಂದರು.

ಶುಭಚಂದ್ರರ ಉಪದೇಶವನ್ನು ಕೇಳಿ ಭರ್ತ್ಯುಹರಿಯು ಪ್ರಭಾವಿತನಾದನು. ಆದರೂ ತಾನು ಬಹುಕಾಲ ತಪಸ್ಸುಮಾಡಿ ಶ್ರಮಪಟ್ಟು ತಯಾರಿಸಿದ ಸಿದ್ಧರಸ ಹಾಳಾಯಿತಲ್ಲಾ, ಅದರಿಂದ ಬಹಳ ಚಿನ್ನವನ್ನು ಮಾಡಬಹುದಾಗಿತ್ತು ಎಂದು ಚಿಂತಿಸಿದನು. ಅವನ ಮನೋವ್ಯಾಕುಲವನ್ನರಿತ ಶುಭಚಂದ್ರರು, ಅಯ್ಯ ನಿನಗೆ ಇನ್ನೂ ಚಿನ್ನದ ವ್ಯಾಮೋಹ ಹೋಗಿಲ್ಲ ಎಂದು ತಮ್ಮ ಕಮಂಡಲದ ನೀರನ್ನು ಅಭಿಮಂತ್ರಿಸಿ ಪಕ್ಕದಲ್ಲಿದ್ದ ಒಂದು ಬಂಡೆಗಲ್ಲಿನ ಮೇಲೆ ಎರಚಿದರು. ಆ ಬಂಡೆಯು ಬಂಗಾರವಾಯಿತು. ಅವರಿಗೆ ಅಂತಹ ವೃದ್ಧಿಸಿದ್ಧಿಗಳು ಉಂಟಾಗಿದ್ದವು. ಆ ಚಮತ್ಕಾರವನ್ನು ಕಂಡು ಭರ್ತ್ಯುಹರಿ ಬೆರಗಾದನು. ಆಗ ಅವನು ತನ್ನ ವ್ಯಾಮೋಹವನ್ನು ತೊರೆದನು. ಶುಭಚಂದ್ರರ ಕಾಲಿಗೆರಗಿ ತನ್ನನ್ನು ಕ್ಷಮಿಸುವಂತೆ ಬೇಡಿಕೊಂಡು ಅವರಿಂದ ದೀಕ್ಷೆ ತೆಗೆದುಕೊಂಡು ಅವರ ಶಿಷ್ಯನಾದನು. ಶುಭಚಂದ್ರರು ಆಚಾರ್ಯರಾದರು. ಅವರ ಜ್ಞಾನಾರ್ಣವ. ಪಾಂಡವ ಪುರಾಣ ಎಂಬ ಗ್ರಂಥಗಳನ್ನು ಬರೆದರು. ಭರ್ತೃಹರಿಯು ನೀತಿಶತಕವನ್ನು ಬರೆದರು. ಇಬ್ಬರು ಆತ್ಮೋನ್ನತಿ ಹೊಂದಿದರು.



# 65. ಸುಖಸನ್ನಿಧಿಯ ಸೋಪಾನಗಳು

ಅನಾದಿ ಕಾಲದಿಂದಲೂ ಜಡಕ್ಕೂ ಚೇತನಕ್ಕೂ ಪರಸ್ಪರ ಸಂಯೋಗ ಸಂಬಂಧವಿದೆ. ಆದರೂ ಜಡದ ಮತ್ತು ಚೇತನದ ಗುಣ ಸ್ವಭಾವಗಳು ಬೇರೆ ಬೇರೆಯೇ ಇವೆ. ಜಡದ ಗುಣ ರೂಪ, ರಸ, ಗಂಧ, ಮತ್ತು ಸ್ಪರ್ಶಗಳಾದರೆ ಚೇತನದ ಗುಣ ಜ್ಞಾನ, ದರ್ಶನ, ಸುಖ, ಮತ್ತು ಶಕ್ತಿ. ಜಡವು ಅಚೇತನ ಗುಣವುಳ್ಳದ್ದು. ಆದರೂ ಶಿಲೆಯಲ್ಲಿ ಬಂಗಾರವು ಬೆರೆತಿರುವಂತೆ ಅನಾದಿ ಕಾಲದಿಂದಲೂ ಈ ಚೇತನವು ಜಡದಲ್ಲಿ ಬೆರೆತುಬಂದಿದೆ. ಮೃಗರಾಜನಾದ ಸಿಂಹವು ಪಂಜರದಲ್ಲಿ ಸಿಕ್ಕಿ ಪರತಂತ್ರಿಯಾಗಿ ದುಃಖಪಡುತ್ತಿರುವಂತೆ ಈ ಜೀವನು ಕರ್ಮಬಂಧನವೆಂಬ ಪಂಜರದಲ್ಲಿ ಸಿಲುಕಿ ಚತುರ್ಗತಿ ಭವಭ್ರಮಣೆ ಮಾಡುತ್ತ ನಾನು ಪ್ರಕಾರದ ಶಾರೀರಿಕ, ಮಾನಸಿಕ, ಆಗಂತುಕ ದುಃಖಗಳನ್ನು ಅನುಭವಿಸಬೇಕಾಗಿದೆ. ಬಂಗಾರದಲ್ಲಿ ಸೇರಿರುವ ಕಿಟ್ಟಕಾಲಿಕೆಯು ಬೆಂಕಿಯ ತಾಪದಿಂದಲೂ ಸುತ್ತಿಗೆಯು ಏಟಿನಿಂದಲೂ ಬೇರೆಯಾಗಿ ಶುದ್ಧ ಬಂಗಾರವೇ ದೊರೆಯುವಂತೆ ಅನಾದಿಯಿಂದ ಜೀವನೊಂದಿಗೆ ಅಂಟಿ ಬಂದಿರುವ ಕರ್ಮವೆಂಬ ಕಿಟ್ಟಕಾಲಿಕೆಯು ತಪ ಮತ್ತು ಧ್ಯಾನದಿಂದ ಬೇರೆಯಾಗಿ ಆತ್ಮನು ಪರಮಾತ್ಮನೆನಿಸಿ, ಸ್ವಸ್ವರೂಪದ ಚೈತನ್ಯದ ಸ್ವಭಾವವನ್ನು ಪಡೆದು ಪರಮಾನಂದವನ್ನು ಹೊಂದುವ ಸ್ಥಾನವನ್ನು ತಲುಪುವುದು. ಸಿಪ್ಪೆಯಿಂದ ಬೀಜವೂ, ಒರೆಯಿಂದ ಖಡ್ಗವೂ ಬೇರೆಯಾಗುವಂತೆ ಕರ್ಮಕವಚದಿಂದ ಜ್ಞಾನಚೇತರೂಪಿಯಾದ ಆತ್ಮವು ಬೇರೆಯಾಗುವುದೇ ಮುಕ್ತಿ ಅಥವಾ ಕೈವಲ್ಯ. ಇದೇ ಜೀವದ ಅಂತಿಮ ಗುರಿ. ಏಕೆಂದರೆ ಪ್ರತಿ ಜೀವಕ್ಕೂ ಸುಖದ ಅಪೇಕ್ಷೆ ಇದೆ. ಆ ನಿಜವಾದ ಸುಖವೆಂದರೆ ಆತ್ಮಸುಖ, ಈ ಆತ್ಮಸುಖ ಸಾಧನೆಯ ಉಪಾಯವನ್ನು ಸರ್ವಜ್ಞ ಭಗವಾನರು ಅನಾದಿಯಿಂದಲೂ ಹೇಳಿಕೊಂಡು ಬಂದಿದ್ದಾರೆ. ಅವರು ಜಡ ಮತ್ತು ಚೇತನದ ಗುಣಸ್ವರೂಪವನ್ನು ಅರಿತು, ಚೇತನದ ನೈಜತೆಯನ್ನು ಹೊಂದಿದವರಾಗಿದ್ದಾರೆ. ಅವರ ಹೇಳಿಕೆ ಈಗಲೂ ಕೈಮರದಂತೆ ಇದೆ. ಆ ಕೈ ಮುಕ್ತಿ ಸುಖದ ಕಡೆಗೆ ಸದಾ ತೋರಿಸುತ್ತದೆ. ಆ ಮಾರ್ಗವನ್ನು ನಂಬಿ ನಡೆದವರಿಗೆ ಮಾತ್ರ ಆ ಸುಖದ ಸನ್ನಿಧಿ ಪ್ರಾಪ್ತವಾಗುವುದು. ಅದನ್ನು ಪಡೆಯಲು ಹೊರಟವರಿಗೆ ದಾರಿಯಲ್ಲಿ ಪುಣ್ಯಾರ್ಜನೆಯಾಗಿ ಶ್ರೀಮಂತಿಕೆ, ನಿರೋಗತೆ, ಅಧಿಕಾರ ಮುಂತಾದ

ಲೌಕಿಕ ಸುಖವು ಪ್ರಾಪ್ತವಾಗಿ ಮುಂದೆ ನೈಜಸುಖದ ಸನ್ನಿಧಿಯು ದೊರೆಯುತ್ತದೆ. ಇಂತಹ ಒಂದು ಉತ್ತಮ ಸ್ಥಾನಕ್ಕೆ ಕೊಂಡೊಯ್ಯುವ ಸಾಧನಾ ಮಾರ್ಗವನ್ನು ಶ್ರೀ ಗುಣಭದ್ರಾಚಾರ್ಯರು ತಮ್ಮ ಅಪೂರ್ವ ಗ್ರಂಥರತ್ನವಾದ ಆತ್ಮಾನುಶಾಸನದಲ್ಲಿ ಒಂದು ಕಡೆ ಹೇಳಿದ್ದಾರೆ. ಇದು ಖಂಡಿತ ವಾಗಿಯೂ ಸುಖಸಾಧನಾ ಮಂದಿರವನ್ನು ತೋರಿಸುವ ಕೈಮರದಂತೆಯೇ ಇದೆ.

ದಯಾದಮತ್ಯಾಗ ಸಮಾಧಿಸಂತತೇಃ ।
ಪಥಿ ಪ್ರಯಾಹಿ ಪ್ರಗುಣಂ ಪ್ರಯತ್ನವಾನ್ ॥
ನಯುತ್ಯವಶ್ಯಂ ವಚಸಾಮಗೋಚರಂ ।
ವಿಕಲ್ಪದೂರಂ ಪರಮಂ ಕಿಮಪ್ಯಸೌ ॥

ಅಂದರೆ - ಅಯ್ಯಾ! ಅತ್ಯಂತ ಪ್ರಯತ್ನದಿಂದಲಾದರೂ ಅಥವಾ ಶಕ್ತಿಮೀರಿಯಾದರೂ ದಯೆ, ದಮ, ತ್ಯಾಗ ಮತ್ತು ಸಮಾಧಿ ಎಂಬ ಪರಂಪರಾರೂಪವಾದ ಸನ್ಮಾರ್ಗದಲ್ಲಿ ಪ್ರವರ್ತಿಸು. ಆ ಮಾರ್ಗವು ನಿನ್ನನ್ನು ವಚನದಿಂದ ವರ್ಣಿಸಲಸಾಧ್ಯವೂ, ಸಂಕಲ್ಪ ವಿಕಲ್ಪಗಳಿಂದ ದೂರವಾದುದೂ ಆದ ಒಂದು ಉತ್ತಮವಾದ ಸ್ಥಾನಕ್ಕೆ ಖಂಡಿತವಾಗಿ ಕೊಂಡೊಯ್ಯುವುದು.

ಆಚಾರ್ಯರು ಜಿನೇಶನ ವಾಣಿಯನ್ನು ಅನುಸರಿಸಿ ಮುಂದಿನ ಭವ್ಯ ಪೀಳಿಗೆಗೆ ಮಹದುಪಕಾರ ಮಾಡಿದ್ದಾರೆ. ದಯೆ, ದಮ, ತ್ಯಾಗ ಮತ್ತು ಸಮಾಧಿ ಇವು ಉತ್ತಮ ಸುಖಸನ್ನಿಧಿಗೆ ಕೊಂಡೊಯ್ಯುವ ಸೋಪಾನಗಳಾಗಿವೆ.

ಬಾಹ್ಯದಲ್ಲಿ ಎಷ್ಟು ಹೊಸ ಪದಾರ್ಥ, ಹೊಸ ಸ್ಥಳಗಳನ್ನು ಕಂಡುಹಿಡಿದು ಪಡೆದರೂ ಮಾನವನ ಪಿಪಾಸೆ ಹಿಂಗಿಲ್ಲ. ಇದರಿಂದ ಗೊತ್ತಾಗುವುದೇನೆಂದರೆ ಸುಖ-ಸಾಧನೆಯು ಬಾಹ್ಯದಲ್ಲಿಲ್ಲ, ಬಾಹ್ಯದ ಸುಖ - ಸಾಧನೆಗಳು ಕ್ಷಣಿಕವಾದುವುಗಳು. ಅವುಗಳಿಂದ ಪ್ರತ್ಯೇಕವಾದ. ಶಾಶ್ವತವೂ, ಅಲೌಕಿಕವೂ ಆದ ಸುಖವು ತನ್ನಲ್ಲಿಯೇ ಇದೆ. ಅದನ್ನು ಹುಡುಕಿ ಪಡೆಯಬೇಕು.

ಅಜ್ಞಾನ, ಅವಿರತಿ, ಕಷಾಯ ಮತ್ತು ಯೋಗದಿಂದ ಆತ್ಮನಿಗೆ ಉಂಟಾಗಿರುವ ದುಃಖವನ್ನು ಹೋಗಲಾಡಿಸಲು ದಯೆ, ದಮ , ತ್ಯಾಗ ಮತ್ತು ಸಮಾಧಿ ಎಂಬ ಸೋಪಾನಗಳನ್ನು ಏರಿ ನೈಜಸುಖಮಂದಿರವನ್ನು ತಲುಪಬಹುದೆಂದು ಆಚಾರ್ಯರು ಮೇಲ್ಕಂಡ ಶ್ಲೋಕವೆಂಬ ರತ್ನವನ್ನು ಕೊಟ್ಟು ಹೋಗಿದ್ದಾರೆ. ಈ ರತ್ನದ ಪ್ರಕಾಶದಲ್ಲಿ ತನ್ನ ನೈಜತೆಯನ್ನು ಕಂಡುಕೊಳ್ಳಬಹುದು.



**ದಯೆ :–** ಅಧ್ಯಾತ್ಮಾನಂದ ಸುಖಮಂದಿರದ ಮೊದಲ ಸೋಪಾನ ದಯೆ. ದಯೆ ಎಂಬುದು ಆತ್ಮನ ನೈಜ ಗುಣ. ಪ್ರತಿಯೊಂದು ಚೇತನವೂ ಪ್ರತ್ಯೇಕ ಪ್ರತ್ಯೇಕವಾಗಿಯೇ ಇವೆ. ಪ್ರತಿ ಚೇತನಕ್ಕೂ ತಾನು ಇರಬೇಕು. ತನಗೆ ಸುಖ ಬೇಕು ಎಂಬ ಅಪೇಕ್ಷೆ ಇದ್ದೇ ಇದೆ. ಇದರಿಂದ ಒಂದು ಚೇತನವು ಇನ್ನೊಂದು ಚೇತನದ ಅಪೇಕ್ಷೆಯನ್ನು ನಾಶ ಮಾಡುವ ಅಧಿಕಾರವಿಲ್ಲ. ಯಾವ ವಿಧದಿಂದಲು ಅನ್ಯ ಜೀವವನ್ನು ನೋಯಿಸದೆ 'ಆತ್ಮವತ್ ಸರ್ವ ಭೂತಾನಿ' 'ಸತ್ವೇಷು ಮೈತ್ರೀ' 'ಕ್ಲಿಷ್ಟೇಷು ಜೀವೇಷು ಕೃಪಾ ಪರತ್ವಂ' ಎಂಬಂತೆ ಸಕಲ ಜೀವಿಗಳಲ್ಲೂ ನನ್ನಂತೆ ಅವಕ್ಕೂ ಆತ್ಮವಿದೆ, ಬದುಕಬೇಕು, ಸುಖಬೇಕೆಂಬ ಆಸೆ ಇದೆ ಎಂದು ತಿಳಿದು ಸಕಲ ಪ್ರಾಣಿಗಳಲ್ಲೂ ಶಾಂತಿಯಿಂದ ವರ್ತಿಸುವುದೇ ದಯೆ. ದಯೆ ಎಂಬುದೇ ಅಹಿಂಸೆ. ಅಹಿಂಸೆಯಿಂದಲೇ ಶಾಂತಿ. ಶಾಂತಿಯೇ ಕ್ಷಮೆ. ಕ್ಷಮೆಯೇ ಆತ್ಮನ ನೈಜ ಗುಣ. 'ನೀನೂ ಇರು. ಇತರರೂ ಇರಲಿ' ಎಂಬ ವಿಶಾಲ ಮನೋಭಾವನೆಯಿಂದ ವರ್ತಿಸುವುದೇ ದಯೆ. ಅಂದರೆ ಸ್ವ-ಪರ ದುಃಖಿಗಳನ್ನರಿತು ಸರ್ವ ಜೀವಿಗಳ ಮೇಲೂ ಕರುಣೆಯನ್ನಿಡುವುದು ಮತ್ತು ಇತರರ ದುಃಖವು ಹೇಗೆ ಮತ್ತು ಎಂದು ನಿವಾರಣೆಯಾದೀತೆಂದು ಭಾವಿಸುವುದೂ ದಯೆ ಎನಿಸುವುದು. ದುಃಖಿತ ಪ್ರಾಣಿಗಳಲ್ಲಿ ಅನುಕಂಪೆಯಿಂದ ಆ ದುಃಖನಿವಾರಣೆಗೆ ಕೈಲಾದ ನೆರವು ನೀಡುವುದು ದಯೆ ಎನಿಸುವುದು. ಈ ದಯಾ ಮನೋಭಾವನೆಯಿಂದ ರಾಗ,ದ್ವೇಷ, ಕ್ರೋಧಾದಿಗಳು ಉಂಟಾಗುವುದಿಲ್ಲ. ಜೀವನದಲ್ಲಿ ಶಾಂತಿ ದೊರೆಯುತ್ತದೆ. ಧರ್ಮದ ಮೂಲವೂ, ಉತ್ತಮ ಧರ್ಮದ ತಳಹದಿಯೂ, ಸುಖ-ಸಾನ್ನಿಧ್ಯದ ಪ್ರಥಮ ಸೋಪಾನವೂ ಆದ ದಯೆ ಎಂಬ ಗುಣವನ್ನು ಮೈಗೂಡಿಸಿಕೊಂಡು ವರ್ತಿಸಬೇಕು.

**ದಮ :–** ದಮ ಎಂಬುದು ಎರಡನೆಯ ಸೋಪಾನ ಇಂದ್ರಿಯ ಮತ್ತು ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ದಮ ಎನ್ನುವರು, ಕಂಡ ಕಂಡದ್ದನ್ನೆಲ್ಲ ಬಯಸುವ ಇಂದ್ರಿಯ, ಹುಚ್ಚು ಹುಚ್ಚಾಗಿ ವರ್ತಿಸುವ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳದಿದ್ದರೆ ಬ್ರೇಕಿಲ್ಲದ ಬಸ್ಸಿನಂತೆ ಸಿಕ್ಕಿದ ಕಡೆ ನುಗ್ಗಿ ಅನಾಹುತಕ್ಕೆ ಈಡು ಮಾಡುವಂತೆ ಜೀವನರಂಗದಲ್ಲಿ ಈ ಇಂದ್ರಿಯ ಮತ್ತು ಮನಸ್ಸನ್ನು ಬಿಗಿ ಹಿಡಿದು ಹಿತಾಹಿತ, ಹೇಯೋಪಾದೇಯಗಳನ್ನರಿತು ವರ್ತಿಸುವುದೇ ದಮವಾಗಿದೆ. ದುರ್ಗುಣಗಳನ್ನು ದಮನ ಮಾಡಿ ಸುಗುಣಗಳನ್ನು ಪ್ರಕಾಶಪಡಿಸಿಕೊಳ್ಳುವ ಗುಣಕ್ಕೆ ದಮ ಎನ್ನುವರು.

ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ ಆಗುವ ಅನಾಹುತವನ್ನು ಪಂಪನು ತನ್ನ ಆದಿಪುರಾಣದಲ್ಲೊಂದು ಕಡೆ ಹೇಳಿದ್ದಾನೆ.

"ಪೆಸರ್ ನಿನಗೆ ಮೊಸರ್ ಪರರ್‌ಗೆ
ನಿನ್ನ ಮೈ ದಡ್ಡಸ್ಸಕ್ಕೆ ಗುರಿಯಪ್ಪುದು
ಒಡ್ಡಿರಿದುವೆಂಬರ್ ಅನ್ನರ್ ಕ್ರಿಯಾವಸಾನ ವಿರಸಂಗಳ್
ಇಂದ್ರಿಯ ಸುಖಂಗಳ್ ಮತ್ತಾವ ಸಂತಸಂಗಳ್ ನಿನಗೆ
ಗತವಿವೇಕಾ ಈ ಅಸಾರ ಸಂಸಾರದೊಳ್"

ಎಲೈ ಆತ್ಮನೇ! ನಿನ್ನ ಹೆಸರಿನಲ್ಲಿ ಪಂಚೇಂದ್ರಿಯಗಳು ನನ್ನನ್ನು ಹೊಡೆದು, ಇರಿದು ಸುಖವನ್ನು ಅನುಭವಿಸುತ್ತಿವೆ. ಹೇ ಅವಿವೇಕಿ! ಈ ಇಂದ್ರಿಯಗಳಿಂದ ಈ ಅಸಾರ ಸಂಸಾರದಲ್ಲಿ ನಿನಗೆ ಸುಖ ಸಂತೋಷವೆಲ್ಲಿದೆ? ಅಂದರೆ ಇಂದ್ರಿಯಗಳಿಗೆ ವಶವಾದ ಜೀವಿಯನ್ನು 'ಗತ ವಿವೇಕಾ' ಎಂದು ಹೀಯಾಳಿಸಿದ್ದಾನೆ. ಆತ್ಮನಿಗೆ ಆವರಿಸಿರುವ ಕರ್ಮ-ಶತ್ರುವಿನಿಂದ ಬಿಡುಗಡೆಯಾಗುವುದಕ್ಕೆ ಈ ದಮ ಎಂಬ ಗುಣವನ್ನು ಹೊಂದಬೇಕಲ್ಲದೆ ಸುಮ್ಮನೆ ಬಾಯಿಮಾತಿಗೆ ಕರ್ಮ ಜಾರುವುದೇ? ಅದಕ್ಕೆ

'ಬಿಡದೆ ಕಷಾಯಮಂ ಸುಡದೆ ಇಂದ್ರಿಯ ತೃಷ್ಣೆಗಳಂ ಪರೀಷಹ ।
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ।
ಬಿಡದೊಡಲಿಂದೆ ಬೇರ್ಪಡಿಸಿ ನೋಡದೆ ಸುಮ್ಮನೆ ಕರ್ಮಶತ್ರುವೇ।
ಬಿಡು ಬಿಡು ಪೋಗೆನಲ್ಕುಡಿಗೆ ಪೋದಪುದೇ ಅಪರಾಜಿತೇಶ್ವರಾ।'

ಎಂದು ರತ್ನಾಕರ ಕವಿಯು ಹೇಳುತ್ತಾರೆ.

ಕಷಾಯಗಳನ್ನು ಬಿಡದೆ, ಇಂದ್ರಿಯ ಲಾಲಸೆಯನ್ನು ಸುಡದೆ, ಪರೀಷಹಗಳನ್ನು ಎದುರಿಸಿ ಗೆಲ್ಲದೆ, ತ್ರಿಗುಪ್ತಿಗಳನ್ನು ಪರಿಪಾಲಿಸದೆ, ಮಲಭರಿತವಾದ ದೇಹದಿಂದ ಪರಿಶುದ್ಧಾತ್ಮನನ್ನು ಬೇರ್ಪಡಿಸಿ ನೋಡದೆ ಸುಮ್ಮನೇ ಎಲೈ ಕರ್ಮಶತ್ರುವೇ ಹೊರಟುಹೋಗು ಎಂದ ಮಾತ್ರಕ್ಕೆ ಅದು ಹೋದೀತೇ? ಹೋಗಲಾರದು. ಅದಕ್ಕೆ ಮೇಲ್ಕಂಡಂತೆ ಇಂದ್ರಿಯಗಳು ಮತ್ತು ಮನಸ್ಸನ್ನು ಸದುಪಯೋಗಪಡಿಸಿಕೊಂಡು ಸಂಯಮಪಾಲನೆ ಮಾಡುತ್ತ ಶೀಲವಂತನಾಗಿ, ಸಾತ್ವಿಕನಾಗಿ ವರ್ತಿಸಿದರೆ ದಮ ಎಂಬ ಎರಡನೇ ಸೋಪಾನವನ್ನೇರಬಹುದು.

ತ್ಯಾಗ :– ನಂತರ ಮೂರನೆಯ ಸೋಪಾನ ತ್ಯಾಗ. ವಿಷಯ ಭೋಗ ಮತ್ತು ಪರಿಗ್ರಹಗಳ ಮೇಲಿನ ಆಸಕ್ತಿಯನ್ನು ತೊರೆದು ಧನ, ಕನಕ, ವಸ್ತು, ವಾಹನ, ಮನೆ, ಮಠ, ರಾಜ್ಯ, ಕೋಶ, ಪುತ್ರ, ಮಿತ್ರ, ಕಳತ್ರಾದಿ ಬಾಹ್ಯ ಪರಿಗ್ರಹಗಳ ಮೇಲಿನ ಮಮತೆಯನ್ನು ಕಡಿಮೆ ಮಾಡಿ, ಕ್ರೋಧ, ಮಾನ, ಮಾಯಾ, ಲೋಭ ಮುಂತಾದ



ಅಂತರಂಗ ಪರಿಗ್ರಹಗಳನ್ನು ಕ್ರಮ ಕ್ರಮವಾಗಿ ತೊರೆದು ನಿರ್ಲಿಪ್ತತೆಯಿಂದ ಅಂದರೆ ಕೆಸರಿನಲ್ಲಿ ಹುಟ್ಟಿದ ಕಮಲ ಪರಿಶುದ್ಧವಾಗಿಯೇ ಇರುವಂತೆ ವರ್ತಿಸುವುದೇ ತ್ಯಾಗ. 'ಪರಿಗ್ರಹದಿಂದ ದುಃಖ, ತ್ಯಾಗದಿಂದ ಸುಖ' ಎಂಬ ಮಾತು ಸತ್ಯ. ಪರಿಗ್ರಹಗಳಿರುವುದರಿಂದ ಜೀವನಲ್ಲಿ ರಾಗ-ದ್ವೇಷಗಳೇ ಸಂಸಾರ ಬಂಧನಕ್ಕೆ ಕಾರಣ. ಆದುದರಿಂದ ಪರಿಗ್ರಹಗಳ ತ್ಯಾಗದಿಂದ ರಾಗ-ದ್ವೇಷಗಳು ದೂರವಾಗುತ್ತವೆ. ಪರಿಗ್ರಹದ ಗೊಂದಲದಲ್ಲಿ ಮಗ್ನನಾಗಿರುವ ಜೀವನಿಗೆ ಬಿಡುವೆಲ್ಲಿದೆ? ವಿಶ್ರಾಂತಿ ಎಲ್ಲಿದೆ? ವಿಶ್ರಾಂತಿ ಇಲ್ಲದೆ ಸುಖವೆಲ್ಲಿದೆ? ಅದಕ್ಕಾಗಿಯೇ ಗುಣಭದ್ರಾಚಾರ್ಯರು ಇದೇ ಆತ್ಮಾನುಶಾಸನದಲ್ಲಿ ತ್ಯಾಗದ ಬಗ್ಗೆ ಹೇಳುತ್ತಾರೆ.

'ವಿರಜ್ಯ ಸಂಪದಃ ಸಂತಸ್ತ್ಯಜಂತಿ ಕಿವಿಹಾದ್ಭುತಮ್।
ಮಾನಮೀತ್ ಕಿಂ ಜುಗುಪ್ಸಾವಾನ್ ಸುಭುಕ್ತ ಮಪಿ ಭೋನಮ್॥

ಅಂದರೆ ಈ ಜೀವನಿಗೆ ಎಲ್ಲಿನ ವರೆಗೆ ಸಂಸಾರ, ಶರೀರ ಭೋಗಗಳಲ್ಲಿ ರಾಗಭಾವವಿರುತ್ತದೋ ಅಥವಾ ಪರಪದಾರ್ಥದಲ್ಲಿ ಮತ್ತು ಪರಿಗ್ರಹದಲ್ಲಿ ಆಸಕ್ತನಾಗುತ್ತಾನೋ, ಅಲ್ಲಿಯ ವರೆಗೆ ಅವನಿಗೆ ಸುಖವಿಲ್ಲ. ಪುಣ್ಯ ತೀರಿದ ನಂತರ ಸಂಪತ್ತು ನಷ್ಟವಾದರೆ ಅದರ ವಿಯೋಗದಿಂದ ದುಃಖಿತರಾಗುತ್ತಾರೆ. ಏಕೆಂದರೆ ಪುಣ್ಯವೆಂಬುದು ನಿರಂತರವಾಗಿರುವ ಶಾಶ್ವತ ವಸ್ತುವಲ್ಲ ಆದರೆ ವಿವೇಕಿಗಳಾದ ಸತ್ಪುರುಷರು ಸಂಪತ್ತು ನಿಃಸಾರವಾದುದೂ, ಅಸ್ಥಿರವಾದುದೂ ಎಂದು ತಿಳಿದು ಅದು ನಾಶವಾಗುವ ಮುನ್ನವೇ ಅದರಿಂದ ವಿರಕ್ತರಾಗಿ ಅದನ್ನು ತ್ಯಾಗ ಮಾಡುತ್ತಾರೆ. ಒಳ್ಳೆಯ ಊಟವೆಂದು ಭೋಜನ ಮಾಡಿಯೂ ಅದು ಅತಿಯಾದರೂ, ಹೇಸಿಕೆ. ಗ್ಲಾನಿ ಅಥವಾ ಅಸಹ್ಯವಾಗಿ ವಮನ ಮಾಡುವಂತೆ ಸಂಪತ್ತಿನಿಂದ ವಿರಕ್ತರಾದವರು ಅದನ್ನು ತ್ಯಾಗ ಮಾಡುವುದರಲ್ಲಿ ಆಶ್ಚರ್ಯವಿಲ್ಲ

'ಪಡೆವಂ ಪೂರ್ವದ ಪುಣ್ಯದಿಂ ಸಿರಿಯನಾತಂ ಶ್ರೀ ದಯಾಮೂಲದೋ।
ಳ್ಪಡೆವಂ ತಾಂ ಸುಕೃತಾನುಬಂಧಿ ಸುಕೃತಂ...'

ಎಂದು ರತ್ನಾಕರನು ಪೂರ್ವಸುಕೃತದಿಂದ ಪಡೆದ ಸಂಪತ್ತು, ಶರೀರ, ಬಲ, ಶಕ್ತಿ ಮುಂತಾದುವನ್ನು ಸತ್ಕಾರ್ಯದಲ್ಲಿ ವ್ಯಯಮಾಡಿದರೆ ಅದು ಮುಂದಿನ ಭವಕ್ಕೆ ಸುಖಪಡೆಯಲು ಬಂಡವಾಳವಾಗುತ್ತದೆ. ಎಂದಿದ್ದಾನೆ. ಆ ರೀತಿ ಸುಕೃತಾನುಬಂಧಿ ಸುಕೃತವಾಗಲು ತ್ಯಾಗಬುದ್ಧಿಯಿಂದ ವರ್ತಿಸುತ್ತ

'ತನುವಂ ಸಂಘದ ಸೇವೆಯೊಳ್ ಮನವನಾತ್ಮಧ್ಯಾನದಭ್ಯಾಸದೊಳ್ ।
ಧನವಂ ದಾನಸುಪೂಜೆಯೊಳ್ ದಿನಮನರ್ಹದ್ಧರ್ಮಕಾರ್ಯಪ್ರವ- ।

ರ್ತನೆಯೊಳ್ಪರ್ವವನೊಲ್ದು ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷ ಚಿಂ- ।
ತನೆಯೊಳ್ತೀರ್ಚುವಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ॥

ತನು, ಮನ, ಧನದ ಸದ್ವಿನಿಯೋಗ ಮಾಡುತ್ತ ತ್ಯಾಗಬುದ್ಧಿಯನ್ನು ಬೆಳಿಸಿಕೊಳ್ಳಲು ಗೃಹಸ್ಥನಿಗೆ ರತ್ನಾಕರ ಕವಿ ಒಳ್ಳೆಯ ಬೋಧನೆಯನ್ನು ನೀಡಿದ್ದಾನೆ. ಸದ್‌ಗೃಹಸ್ಥನು ತ್ರಿಕರಣಪೂರ್ವಕವಾಗಿ ಅನುಸರಿಸಬೇಕಾದ ದಿನಚರಿಯನ್ನು ಹೇಳಿದ್ದಾನೆ. ಮುನಿ, ಆರ್ಜಿಕಾ, ಶ್ರಾವಕ, ಶ್ರಾವಿಕೆಯರ ಸೇವೆಯಲ್ಲಿ ನಿರತನಾಗಬೇಕು, ಆತ್ಮ ಚಿಂತನೆಯಲ್ಲಿ ಮನಸ್ಸು ಲೀನವಾಗಬೇಕು. ಸಂಪತ್ತು ದಾನ, ಪೂಜಾದಿ ಧರ್ಮಕಾರ್ಯಗಳಲ್ಲಿ ವ್ಯಯವಾಗಬೇಕು. ದಿನವನ್ನು ಜಿನಧರ್ಮ ಪ್ರಭಾವನೆಯಲ್ಲಿ ಕಳೆಯಬೇಕು. ವ್ರತ, ನೋಂಪಿ, ಪರ್ವದಿನಗಳನ್ನಾಚರಿಸುತ್ತ ಇರುವ ಆಯುಷ್ಯವನ್ನು ಮೋಕ್ಷಚಿಂತನೆಯಲ್ಲಿ ಕಳೆಯಬೇಕು. ಹೀಗಿದ್ದಲ್ಲಿ ಸಕಲ ವಿಕಾರ ಪರಿಣಾಮವನ್ನೂ ಕ್ರೋಧ, ಮಾನ, ಮಾಯಾ, ಲೋಭಗಳನ್ನೂ ರಾಗದ್ವೇಷವನ್ನೂ ಮೋಹ ಚಿಂತನೆಯನ್ನೂ ತೊರೆದು ನಿಜಸ್ವಭಾವವನ್ನು ಹೊಂದಬಹುದು. ಪರದಲ್ಲಿ ದುಃಖಕ್ಕೆ ಕಾರಣವಾದುದೂ ಹಾಗೂ ತನ್ನ ಯಶಸ್ಸು ಮತ್ತು ಧರ್ಮವನ್ನು ನಾಶ ಮಾಡುವಂತಹ ಮನ, ವಚನ, ಕಾಯಗಳ ಪ್ರವೃತ್ತಿಯನ್ನು ಬಿಡುವುದೇ ತ್ಯಾಗ. ಅಂತರಂಗ ಮತ್ತು ಬಹಿರಂಗ ಪರಿಗ್ರಹಗಳನ್ನು ತ್ಯಾಗಮಾಡಿದವರೇ ತ್ಯಾಗಿಗಳು. ಈ ತ್ಯಾಗಿಗಳೇ ಕಷಾಯಗಳನ್ನು ತೊರೆದು ಮೋಹನೀಯ ಕರ್ಮವನ್ನು ಗೆಲ್ಲಲು ಸಮರ್ಥರು. ಅಂತಹ ಸಾಮರ್ಥ್ಯವನ್ನು ಪಡೆಯಲು ಗೃಹಸ್ಥರೂ ಶಕ್ತಿ ಇದ್ದಷ್ಟನ್ನಾದರೂ ತ್ಯಾಗ ಮಾಡುತ್ತ ದಾನ, ಧರ್ಮ, ಪರೋಪಕಾರಗಳನ್ನೂ ಮಾಡುತ್ತ ಮಾಡುತ್ತ ಈ ತ್ಯಾಗವೆಂಬ ಮೆಟ್ಟಲನ್ನು ಏರಬಹುದು.

**ಸಮಾಧಿ :–** ಇನ್ನು ಕೊನೆಯದಾಗಿ ಸಮಾಧಿಯೆಂಬ ನಾಲ್ಕನೆಯ ಸೋಪಾನ. ಸಮಸ್ತ ಸಂಕಲ್ಪ ವಿಕಲ್ಪಗಳನ್ನು ತೊರೆದು ಮನಸ್ಸನ್ನು ಆತ್ಮಚಿಂತನೆಯಲ್ಲಿ ಲೀನವಾಗಿರಿಸಿ ಅಂತರ್ಮುಖಿಯಾಗುವುದೇ ಸಮಾಧಿ. ಪರಮ ಶಾಂತ ಸ್ವಭಾವವು ಸಮಾಧಿಯ ಪ್ರಾಪ್ತಿಗೆ ಕಾರಣವಾಗಿದೆ, ಕರ್ಮಕ್ಷಯವು ಸುಖಿಚೇತನವನ್ನು ಹೊಂದುವುದಕ್ಕೆ ಕಾರಣವಾಗಿದೆ. ಇದನ್ನೇ ಸರ್ವಾರ್ಥಸಿದ್ಧಿಯಲ್ಲಿ ಹೇಳಿದ್ದಾರೆ.

ಏಕತ್ವೇನ ಅಯನಂ ಗಮನಂ ಸಮಯಃ, ಸಮಯ ಏವ ಸಾಮಾಯಿಕಂ ।
ಸಮಯಃ ಪ್ರಯೋಜನಮಸ್ಯೇತಿ ವಾ ವಿಗೃಹ್ಯ ಸಾಮಾಯಿಕಂ ॥

ಅಂದರೆ ಆತ್ಮನಲ್ಲಿ ತನ್ಮಯವಾಗುವುದೂ, ಆತ್ಮಮಯವೇ ತಾನಾಗುವುದೂ ಸಾಮಾಯಿಕವು. ಸಾಮಾಯಿಕದಿಂದಲೇ ಸಮಾಧಿಸ್ಥ ಭಾವನೆ ಮೂಡುವುದು.



ತತ್ತ್ವಾನುಶಾಸನದಲ್ಲಿ ಹೇಳಿರುವಂತೆ -

ಯೇನ ಭಾವೇನ ಯದ್ರೂಪಂ ಧ್ಯಾಯತ್ಯಾತ್ಮಾನಮಾತ್ಮವಿತ್ ।
ತೇನ-ತನ್ಮಯತಾಂ ಯಾತಿ ಸೋಪಾಧಿಃ ಸ್ಫಟಿಕೋ ಯಥಾ ॥

ಅಂದರೆ ಸ್ಫಟಿಕವು ಯಾವ ಬಣ್ಣದ ಸಂಬಂಧವನ್ನು ಹೊಂದುವುದೋ ಅದೇ ಬಣ್ಣದಂತೆ ಕಾಣುವಂತೆ ಆತ್ಮಜ್ಞಾನಿಯು ಯಾವ ಪರಮ ಸಮಾಧಿಯಿಂದ ಅಂತರ್ಮುಖಿಯಾಗಿ ಆತ್ಮನನ್ನು ಧ್ಯಾನಿಸುವುದರಿಂದ ಅದೇ ರೂಪದಲ್ಲಿ ತನ್ಮಯನಾಗುತ್ತಾನೆ. ಆತ್ಮಲೀನತೆಯೇ ಪರಮಸಮಾಧಿ. ಈ ಆತ್ಮತನ್ಮಯತೆಯೇ ಪರಮಾನಂದ. ಇದೇ ಶಿವಸೌಖ್ಯಸಿದ್ಧಿಯ ನೆಲೆಗಾಣುವ ಕೊನೆಯ ಸೋಪಾನ. ಇದು ಎಲ್ಲರಿಗೂ ಸಿದ್ಧಿಸುವಂತಹುದಲ್ಲ. ಯಾರು ಆಧ್ಯಾತ್ಮರ ಸಾನುಭವಿಗಳೋ, ಯಾರು ಜ್ಞಾನ, ಧ್ಯಾನ, ತಪದಲ್ಲಿ ನಿರತರೋ, ಯಾರು ನಿಷ್ಠಾವಂತ ನಿಶ್ಚಯ ಸಮ್ಯಗ್‌ದೃಷ್ಟಿಗಳೋ, ಯಾರು ಪರಿಗ್ರಹರಹಿತರಾಗಿ ಸಂಯಮಧಾರಿಗಳಾಗಿರುವರೋ ಅಂತಹವರಿಗೆ ಸಾಧ್ಯ. ಹಾಗೆಂದು ಇದರ ಚಿಂತೆ ಶ್ರಾವಕರಿಗೆ ಬೇಕಿಲ್ಲವೆಂದಲ್ಲ. ಶ್ರಾವಕರೂ ಜಪ, ಧ್ಯಾನ, ಸಂಯಮಗಳನ್ನು ಪಾಲನೆ ಮಾಡುತ್ತ ಮಾಡುತ್ತ ಆತ್ಮ ನಿರೀಕ್ಷಣದ ಅಭ್ಯಾಸವನ್ನು ಮಾಡುತ್ತಿದ್ದರೆ ಒಂದಲ್ಲ ಒಂದು ದಿನ ಆ ಸಮಾಧಿಯ ಸೋಪಾನವನ್ನೇರಬಹುದು.

ಅಂತರ್ಮುಖಿಯಾದ ಭವ್ಯನು ಆತ್ಮಚಿಂತನೆಯನ್ನು ಮಾಡುತ್ತ ಏನನ್ನು ಭಾವಿಸುತ್ತಾನೆಂಬುದನ್ನು ರತ್ನಾಕರ ಹೇಳಿದ್ದಾನೆ.

ಅರಸುವೆನೆನ್ನ ದೇಹದೊಳೆನ್ನನೇ ಕಾಣ್ಬನ ಮೂರ್ತ ಸಿದ್ಧನಂ ।
ಪೊರಗೊಳಗೆಲ್ಲಮಂ ತೊಳೆದು ತಿಂಗಳ ಪುತ್ತಳಿ ಮಾಡಿ ನೋಡುವೆಂ ।
ತರುಬುವೆನಲ್ಲಿಯೇ ಮನಮನಾಗಳೇ ಬಾಹ್ಯ ಸಮಸ್ತ ಚಿಂತೆಯಂ ।
ಮರೆವೆನನಂತಸೌಖ್ಯದೊಳಗಾಳ್ದಪೆ ನಾನಪರಾಜಿತೇಶ್ವರಾ ॥

ಅಂದರೆ ಅಪರಾಜಿತೇಶ್ವರನೇ, ನನ್ನ ಶರೀರದೊಳಗೆ ನನ್ನನ್ನು ಹುಡುಕವೆನು, ನನ್ನನ್ನೇ ನೋಡುವೆನು, ಹೊರಗೂ, ಒಳಗೂ ಎಲ್ಲವನ್ನೂ ತೊಳೆದು ಚಂದ್ರನ ಪ್ರತಿಬಿಂಬದಂತೆ ಮಾಡಿ ಅಮೂರ್ತನಾದ ಸಿದ್ಧಾತ್ಮನನ್ನು ನೋಡುವೆನು. ಮನಸ್ಸನ್ನು ಅಲ್ಲಿಯೇ ನಿಲ್ಲಿಸುವೆನು. ಮತ್ತು ಹೊರಗಿನ ಚಿಂತೆಗಳನ್ನೆಲ್ಲ ಮರೆತುಬಿಡುವೆನು. ನಾನು ಅನಂತ ಸೌಖ್ಯದಲ್ಲಿ ಲೀನವಾಗುವೆನು. ''ನೀನಾನೆಂಬರಿವಾಗೆ ಸಾಕು' ಎಂದು ಶ್ರಾವಕನು ಸಾಕ್ಷೀ ಮೂರುತಿ ಜಿನಬಿಂಬದೆದುರಿಗೆ ಭಕ್ತಿಭಾವದಿಂದ ಮೊದಲು ''ದಾಸೋಹಂ'' ಭಾವನೆಯಿಂದ ಸೇವೆ, ಸ್ತೋತ್ರ, ಪೂಜೆಗಳನ್ನು ಮಾಡಿ ಮಾಡಿ,

ಜಪ ಧ್ಯಾನದಲ್ಲಿ ತೊಡಗಿ, "ಸೋಹಂ" ಭಾವನೆಯನ್ನು ಬೆಳೆಸಿಕೊಂಡು ನೀನು ನಾನೆಂಬ "ಅಹಂ" ತಾನಾಗುವ ಉಪದೇಶವನ್ನು ಮೇಲ್ಕಂಡ ಪದ್ಯದಲ್ಲಿ ಕಾಣಬಹುದು.

ಹಾಗೆಯೆ ಸಾಧು ಸಮಾಧಿಯ ಕ್ರಮವನ್ನು ಶ್ರೀ ಅಮಿತಗತ್ಯಾಚಾರ್ಯರು ಸಾಮಾಯಿಕ ಪಾಠದಲ್ಲಿ ಹೇಳಿದ್ದಾರೆ.

ನ ಸಂತಿ ಬಾಹ್ಯಾ ಮಮ ಕೇಚನಾರ್ಥಾ ಭವಾಮಿ ತೇಷಾಂ ನ ಕದಾಚನಾಹಂ ।
ಇತ್ಥಂ ವಿನಿಶ್ಚಿತ್ಯ ವಿಮುಚ್ಯ ಬಾಹ್ಯಂ ಸ್ವಸ್ಥಃ ಸದಾ ತ್ವಂ ಭವ ಭದ್ರ ಮುಕ್ತ್ಯೈ ॥

ಅಂದರೆ ಬಾಹ್ಯವಸ್ತುಗಳು ನನಗೆ ಹೇಗೆ ಸೇರುವುದಿಲ್ಲವೋ ಅದೇ ಬಾಹ್ಯ ವಸ್ತುಗಳಿಗೆ ನಾನೂ ಸೇರಿದವನಲ್ಲ. ಈ ರೀತಿ ತಿಳಿದು ಓ ಜೀವನೇ! ಬಾಹ್ಯ ಪದಾರ್ಥಗಳನ್ನು ತೊರೆ. ನಿನಗೆ ಸ್ಥಿರಸೌಖ್ಯ ಬೇಕಿದ್ದರೆ, ನೀನು ಮೋಕ್ಷವನ್ನು ಬಯಸುವೆಯಾದರೆ ಆತ್ಮಚಿಂತೆಯಲ್ಲಿ ಮಗ್ನನಾಗು. ಈ ಭವಕೂಪದಿಂದ ಪಾರಾಗಬೇಕಾದರೆ ಸಮಾಧಿಯೊಂದೇ ಮಾರ್ಗವೆಂದು ತಿಳಿ.

ಆತ್ಮಾನಮಾತ್ಮನ್ಯವಲೋಕಮಾನ- ।
ಸ್ತ್ವಂ ದರ್ಶನಜ್ಞಾನಮಯೋ ವಿಶುದ್ಧಃ ॥
ಏಕಾಗ್ರಚಿತ್ತಃ ಖಲು ಯತ್ರ ತತ್ರ ।
ಸ್ಥಿತೋಽಪಿ ಸಾಧುರ್ಲಭತೇ ಸಮಾಧಿಂ ॥

ಅಂದರೆ ಎಲೈ ಜೀವನೇ ! ಯಾರು ತನ್ನೊಳಗೇ ತನ್ನ ನಿಜಾತ್ಮ ಸ್ವರೂಪವನ್ನು ಕಾಣಬಲ್ಲರೋ ಅಂತಹವನೇ ಶುದ್ಧನೂ, ಸಮ್ಯಗ್ದರ್ಶಿಯೂ, ಸಮ್ಯಗ್ಜ್ಞಾನಿಯೂ ಆಗಬಲ್ಲನು. ಯಾರು ಹೀಗೆ ತನ್ನ ಚಿತ್ತವನ್ನು ಏಕಾಗ್ರತೆಯಲ್ಲಿ ಇಟ್ಟಿರುತ್ತಾರೋ ಅಂತಹವರು ಎಲ್ಲಿದ್ದರಲ್ಲಿಯೇ ಸುಲಭವಾಗಿ ಸಮಾಧಿಯನ್ನು ಹೊಂದಬಲ್ಲರು.

ಹೀಗೆ ನಿರ್ವಿಕಲ್ಪ ಸಮಾಧಿಸ್ಥ ಧ್ಯಾನವು ಸಂವರ ಮತ್ತು ನಿರ್ಜರೆಗೆ ಕಾರಣವಾಗುತ್ತದೆ.

ಹೀಗೆ ಉತ್ತಮ ಸುಖಿ-ಸನ್ನಿಧಿಯ ಸೋಪಾನಗಳಾದ ದಯೆ, ದಮ, ತ್ಯಾಗ ಮತ್ತು ಸಮಾಧಿ ಎಂಬಿವು ಒಂದಕ್ಕೊಂದು ಸಂಬಂಧಿತವಾಗಿವೆ. ದಯೆಯಿಂದ ದಮವೂ, ದಮದಿಂದ ತ್ಯಾಗವೂ, ತ್ಯಾಗದಿಂದ ಸಮಾಧಿಯೂ, ಸಮಾಧಿಯಿಂದ ಸುಖಿ-ಸನ್ನಿಧಿಯೂ ದೊರೆಯುತ್ತದೆ. ಈಪರಮ ಪದವಿಯನ್ನು ಮಾತಿನಿಂದಾಗಲೀ ವಸ್ತುವಿನಿಂದಾಗಲೀ ತೋರಿಸಲು ಸಾಧ್ಯವಿಲ್ಲ; ವರ್ಣಿಸಲೂ ಸಾಧ್ಯವಿಲ್ಲ. ಇದು



ಮನಸ್ಸಿಗೂ ವ್ಯಕ್ತಿಗೂ ಅಗೋಚರ. ಈ ಸುಖಿ-ಸನ್ನಿಧಿಯನ್ನು ತಲುಪಲು ಇಚ್ಛೆಯುಳ್ಳ ಆಧ್ಯಾತ್ಮಾಭಿರುಚಿಗಳೇ ತಮ್ಮ ತಮ್ಮ ಯಥಾ ಶಕ್ತಿ ತಿಳಿದು (ಸ್ವಸಂವೇದನ ಜ್ಞಾನದಿಂದ) ದಯೆ, ದಮ, ತ್ಯಾಗ, ಸಮಾಧಿಗಳೆಂಬ ಸೋಪಾನಗಳನ್ನು ಏರಿ ಸುಖಿಸನ್ನಿಧಿಯನ್ನು ತಲುಪಲು ಸಮರ್ಥರಾಗುತ್ತಾರೆ.

## 66. ಶಾಸನದೇವತೆಗಳನ್ನು ಪೂಜಿಸಬಹುದೇ?

ಜಿನಶಾಸನ ದೇವತೆಗಳ ಆರಾಧನೆ ಪೂಜೆ ಮಾಡುವ ವಿಷಯದಲ್ಲಿ ಹಲವರು ಭ್ರಮೆ, ಗೊಂದಲ, ಅನುಮಾನಕ್ಕೆ ಈಡಾಗಿದ್ದಾರೆ. 'ನಾವು ಶಾಸನ ದೇವ ದೇವಿಯರನ್ನು ಆರಾಧಿಸಬಹುದೇ?' ಎಂಬ ಪ್ರಶ್ನೆಯನ್ನು ಅನೇಕರು ನನಗೆ ಕೇಳುತ್ತಿದ್ದಾರೆ. ಅವರಿಗೆ ಆಧಾರಪೂರ್ವಕವಾಗಿ ಉತ್ತರಕೊಡಲು ಈ ಮೂಲಕ ಪ್ರಯತ್ನಿಸಿದ್ದೇನೆ.

ಈ ಅನುಮಾನ ದಕ್ಷಿಣ ದೇಶದವರಾದ ನಮಗೆ ಬರಲು ಸಾಧ್ಯವಿಲ್ಲ. ಇಲ್ಲಿ ಬಹು ಪೂರ್ವದಿಂದಲೇ ಶಾಸನದೇವತೆಗಳ ಸ್ಥಾಪನೆ ಪೂಜೆ, ಭಕ್ತಿ ಭಾವನೆಗಳು ಬೆಳೆದು ಬಂದಿದೆ. ಉತ್ತರ ದೇಶದಲ್ಲಿನ ಜೈನ ಜನಾಂಗದಲ್ಲಿ ತೇರಾಪಂಥಿ, ಕಾನಜಿಪಂಥಿ ಮುಂತಾದ ಕೆಲವು ಪಂಗಡಗಳಲ್ಲಿ ಈ ಬಗ್ಗೆ ಭಿನ್ನ ಭೇದಗಳುಂಟಾಗಿದೆ.

ಜಿನಧರ್ಮಾಚರಣೆಯು ಗೃಹಸ್ಥ ಮತ್ತು ಯತಿ ಮಾರ್ಗವೆಂದು ಎರಡು ವಿಭಾಗವಾಗಿದೆ. ಯತಿಮಾರ್ಗಕ್ಕೆ ಯೋಗ್ಯತೆಯನ್ನು ಗೃಹಸ್ಥನಾಗಿ ಪಡೆಯಬೇಕು. ಶ್ರಾವಕ ಧರ್ಮಮಾರ್ಗದಲ್ಲಿ ನಡೆದು ಅನುಭವದ ಪರಿಪಕ್ವತೆಯನ್ನು ಹೊಂದಿ ಮುಂದೆ ತ್ಯಾಗಿ ಅಥವಾ ಮುನಿಯಾದರೆ ಅಲ್ಲಿ ಬರುವ ಪರೀಷಹಗಳೆಂಬ ತೊಡರುಗಳನ್ನು ಧೈರ್ಯದಿಂದ ಗೆಲ್ಲಬಲ್ಲವನಾಗುತ್ತಾನೆ. ಮುನಿಮಾರ್ಗ ಬಹಳ ಉತ್ತಮವೂ ಉತ್ಕೃಷ್ಟವೂ ಆದುದು ನಿಜ. ಆದರೆ ಅದು ನಿರತಿಚಾರ ಪೂರ್ವಕವಾಗಿ ಆದರ ಕಠಿಣ ಕ್ರಮಗಳನ್ನು ಬಿಡದೆ ಪಾಲಿಸುವುದಕ್ಕೆ ಬೇಕಾದ ಅರ್ಹತೆಯನ್ನು ಗೃಹಸ್ಥನಾಗಿದ್ದು ಕಲಿಯಬೇಕು. ಶ್ರಾವಕನು ತನಗೆ ನಿಯಮಿತವಾದ ದೇವ ಪೂಜಾದಿ ಷಟ್ಕ್ರಿಯೆಗಳಲ್ಲಿ ತೊಡಗಿದ್ದು ನೌಂಪಿ, ಉಪವಾಸಾದಿಗಳನ್ನು ಮಾಡುವ ಅಭ್ಯಾಸವನ್ನು ಮಾಡಿದ್ದರಲ್ಲವೇ ಅಲ್ಲಿ ಭಾವಲಿಂಗಿಯಾದ ಯತಿ ಎನಿಸುವುದು.

ಒಂದೇಸಾರಿ ನಾನು ತ್ಯಾಗಿ ಎನಿಸಿ ಮುನಿಯಾಗುತ್ತೇನೆ ಎಂಬುದು ಬಹು ಕಷ್ಟ ಹಾಗೂ ಅದನ್ನು ಪಡೆದು ನಿರತಿಚಾರಪೂರ್ವಕ ಪಾಲಿಸುತ್ತೇನೆಂಬ ಧೈರ್ಯ ಸ್ಥೈರ್ಯಗಳು ಎಲ್ಲೋ ಕೆಲವೆರಡು ಉನ್ನತಾತ್ಮರಿಗೆ ಮಾತ್ರ ಸಾಧ್ಯ. ಈ ಗೃಹಸ್ಥಧರ್ಮ ಸಾಗರದಲ್ಲಿ ಈಜಿ ಗಟ್ಟಿಗನೆನಿಸಿದರೆ ಮುನಿಧರ್ಮಮಾರ್ಗದಲ್ಲಿ ಬರುವ ಪರೀಷಹಾದಿಗಳನ್ನು ಜೈಸಬಲ್ಲ. ಆ ನಿಶ್ಚಯ ಮಾರ್ಗಕ್ಕೆ ಈ ವ್ಯವಹಾರ ಮಾರ್ಗ ಪೋಷಕವಾಗಿ ಅನಾದಿ ಕಾಲದಿಂದಲೂ ಬಂದಿದೆ. ಕೇವಲ ವ್ಯವಹಾರವಷ್ಟೇ ಮುಖ್ಯವಲ್ಲ. ಕೇವಲ ನಿಶ್ಚಯವಷ್ಟೇ ಸಾಧ್ಯವಿಲ್ಲ. ವ್ಯವಹಾರದೊಂದಿಗೆ ನಿಶ್ಚಯದ ಕಡೆ ಸಾಗುತ್ತಾ ಇದನ್ನು ಬಿಟ್ಟು ಅದನ್ನೇ ಹಿಡಿದು ಮುಂಸಾಗಬಹುದು. ವ್ಯವಹಾರ ಗೌಣವೂ ನಿಶ್ಚಯ ಮುಖ್ಯವೂ ಆದುದು. ಅನೇಕಾನೇಕ ಆತ್ಮರುಗಳು 'ವ್ಯವಹಾರ ನಿಶ್ಚಯ ವರಿದು ತಮ್ಮಾತ್ಮತತ್ವವ ನೆಮ್ಮಿ ನಿಜವ ಸಾಧಿಸಿ' ಕೊಂಡಿದ್ದಾರೆ. ಅನೇಕ ತೀರ್ಥಾದೀಶ್ವರರೂ ಗೃಹಸ್ಥರಾಗಿ ಮನೆಮಠ ರಾಜ್ಯಕೋಶ ಹೆಂಡತಿ ಮಕ್ಕಳುಗಳೊಂದಿಗೆ ಬಾಳಿ ಕೊನೆಗೆ ವೈರಾಗ್ಯ ಹೊಂದಿ ಮುನಿಗಳಾಗಿ ಆತ್ಮಕಲ್ಯಾಣ ಮಾಡಿಕೊಂಡಿದ್ದಾರೆ. ಈ ಪಂಚಮ ಕಾಲದಲ್ಲಿಯಂತೂ ಉತ್ತಮ ಗೃಹಸ್ಥನೆನಿಸಿ ಬಾಳಿ ಇರುವ ತ್ಯಾಗಿಗಳಿಗೆ ಸುವ್ಯವಸ್ಥೆಗೊಳಿಸಿ ತನ್ನ ಕೈಲಾದ ಸೇವೆ ಮಾಡುತ್ತಾ ಆ ಯತೀಧರ್ಮಕ್ಕೆ ಪೋಷಕರಾಗಿ ನಿಂತು ತನ್ನ ಮನ, ಮಾತು, ಕಾಯಗಳ ಕ್ರಿಯೆಯನ್ನು ಉತ್ತಮಗೊಳಿಸಿ ಇಂದ್ರಿಯನಿಗ್ರಹ, ಮನೋಧಾರ್ಢ್ಯಗಳನ್ನು ಹೊಂದಿ ನಂತರ ಸಾಧ್ಯವಾದರೆ ಯತಿಯಾಗಿ ಸಫಲನಾಗಬಹುದು. ಆಗ ಅಂತಹ ಯತಿಗಳಿಗೆ ಆತ್ಮಾವಲಂಬನೆಯೇ ಮುಖ್ಯ ಗುರಿ. ಅದನ್ನು ಬೋಧಿಸಿದ ಜಿನೇಂದ್ರಸ್ತುತಿ ಸ್ವಾಧ್ಯಾಯಾದಿಗಳು ಮಾತ್ರವೇ ಅವರಿಗೆ ಸಾಕು. ಇನ್ನೂ ಮುಂದೆ ಅವರ ಶುದ್ಧಾತ್ಮಾವಲಂಬನೆ ಮತ್ತು ನಿರೀಕ್ಷಣೆಯಷ್ಟೇ ಸಾಕು ಆ ದೊಡ್ಡ ಪದವಿಗೇರಿದವರಿಗೆ ಮತ್ತಾವ ದೇವ ದೇವಿಯರ ಆರಾಧನೆಯೂ ಅನವಶ್ಯಕ. ಆದರೆ.....

ಈಗಿನ ಗೃಹಸ್ಥರಲ್ಲಿ ಬಹುಪಾಲು ಅವಿರತ ಸಮ್ಯಗ್ದೃಷ್ಟಿಗಳೆಂಬ ನಾಲ್ಕನೇ ಗುಣಸ್ಥಾನವರ್ತಿಗಳೇ ಹೆಚ್ಚು. ಇವರೂ ಪಂಚಾಣುವ್ರತಪಾಲಕರೂ ಮಧುಮದ್ಯ ಮಾಂಸ ಮತ್ತು ಪಂಚೌಂದುಬರ ಫಲತ್ಯಾಗಿಗಳೂ ಆದ ಪಾಕ್ಷಿಕ ಶ್ರಾವಕನೆನಿಸಿ ನಿಜವಾದ ದೇವ, ಗುರು, ಶಾಸ್ತ್ರವನ್ನು ದೃಢವಾಗಿ ನಂಬಿರುತ್ತಾರೆ. ಜೊತೆಗೆ ಜಿನಶಾಸನ ದೇವದೇವಿಯರನ್ನು ನಂಬಿ ಪೂಜಿಸಿ ಭಕ್ತಿಮಾಡುವುದು ತಪ್ಪಾಗುವುದಿಲ್ಲ. ಮತ್ತು ಸಮ್ಯಕ್ತ್ವಕ್ಕೆ ಹಾನಿಯೂ ಆಗುವುದಿಲ್ಲ.

ಜಿನಶಾಸನ ದೇವದೇವಿಯರು ಯಕ್ಷ-ಯಕ್ಷಿಯರು ನಾಲ್ಕನೇ ಗುಣಸ್ಥಾನ ವರ್ತಿಗಳಾದ ಸಮ್ಯಗ್ದೃಷ್ಟಿಗಳಾಗಿದ್ದಾರೆ.



**ಒಂದು ಪ್ರಶ್ನೆ :–** ಸಮ್ಯಗ್ದೃಷ್ಟಿಗಳಿಗೆ, ಭವನವಾಸಿ ಗತಿ, ಸ್ತ್ರೀ ಪರ್ಯಾಯ ನರಕಗತಿ ಮುಂತಾದವು ಉಂಟಾಗುವುದಿಲ್ಲವೆಂದು ಶಾಸ್ತ್ರಪ್ರಮಾಣವಿದೆ. ಈ ಶಾಸನ ದೇವದೇವಿಯರಲ್ಲಿ ಬಹಳಷ್ಟು ಮಂದಿ ಭವನವಾಸಿ ವ್ಯಂತರ ಯಕ್ಷ ಯಕ್ಷಿಯರು ಇದ್ದಾರೆಲ್ಲಾ ಸಮ್ಯಗ್ದೃಷ್ಟಿಗಳಿಗೆ ಆ ಗತಿ ಏಕಾಯಿತು? ಅವರು ಸಮ್ಯಗ್ದೃಷ್ಟಿಗಳೇ?

**ಸಮಾಧಾನ :–** ಯಾರಿಗೇ ಆಗಲಿ ಗತಿ ಬಂಧವಾಗುವ ಮುಂಚೆಯೇ ಸಮ್ಯಕ್ತ್ವಪ್ರಾಪ್ತಿಯಾದರೆ ಸ್ತ್ರೀ, ಭವನವಾಸಿ, ವ್ಯಂತರ, ಜ್ಯೋತಿಷ್ಯ, ನಾರಕಿ, ಅಂಗಹೀನ ಮುಂತಾದ ಪರ್ಯಾಯಗಳಲ್ಲಿ ಜನ್ಮ ತಾಳುವುದಿಲ್ಲ ನಿಜ. ಆದರೆ ಗತಿಬಂಧವಾದ ನಂತರ ಸಮ್ಯಕ್ತ್ವಪ್ರಾಪ್ತಿಯಾದರೆ ಗತಿಯಲ್ಲಿ ಜನ್ಮತಾಳುವುದನ್ನು ತಪ್ಪಿಸಿಕೊಳ್ಳಲಾಗುವುದಿಲ್ಲವಾದರೂ ಆ ಗತಿಯಲ್ಲಿನ ಸ್ಥಿತಿ ಬದಲಾವಣೆಯಾಗುತ್ತದೆ. ಕಾಲ ಮರ್ಯಾದೆಯು ಜಘನ್ಯವಾಗುತ್ತದೆ. ಹೇಗೆಂದರೆ - ಮಿಥ್ಯಾದೃಷ್ಟಿಯಾಗಿದ್ದಾಗ ಶ್ರೇಣಿಕನಿಗೆ 7ನೇ ನರಕಗತಿಯು ಬಂಧವಾಗಿತ್ತು. ಆ ಗತಿಯು ಬಂಧಕ್ಕೆ ಕಾರಣವಾದ ದುಷ್ಟಕಾರ್ಯವನ್ನು ಆತ ಮಾಡಿದ್ದ. ಆದರೆ ಆತನು ಮುಂದೆ ಚೇಳಿನಿಯ ದೆಸೆಯಿಂದ ಸಮ್ಯಗ್ದೃಷ್ಟಿಯಾಗಿ ತಾನು ಮಾಡಿದ ಕಾರ್ಯಗಳಿಗೆ ಪಶ್ಚಾತ್ತಾಪ ಪಟ್ಟನು ಆಗ ಬಂಧವಾಗಿದ್ದ ನರಕಗತಿಯಲ್ಲಿನ ದುಃಖದ ಸ್ಥಿತಿ ಬದಲಾವಣೆಯಾಗಿ 7ನೇ ನರಕದ ಬದಲಿಗೆ ಒಂದನೇ ನರಕದಲ್ಲಿ ಜನ್ಮ ತಾಳುವಂತಾಯಿತು. ಗತಿ ಬದಲಾಗುವುದಿಲ್ಲ ವಾದರೂ ಅದರ ಸ್ಥಿತಿ ಬದಲಾಗುವುದೆಂದು ಶಾಸ್ತ್ರಾಧಾರವಿದೆ. ಸಮ್ಯಕ್ತ್ವ ದರ್ಶದ 16,17,18, ನೇ ಪೇಜು ನೋಡಿ, ಇರಲಿ ಯಾವ ಗತಿಯಲ್ಲಾದರೂ ಯಾವ ಸಂಜ್ಞ ಜೀವಕ್ಕಾದರೂ ಸಮ್ಯಕ್ತ್ವ ಪ್ರಾಪ್ತವಾಗಬಹುದು. ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಗೋಮಟಸಾರ ಗ್ರಂಥದಲ್ಲಿ ಹೇಳಿದ್ದಾರೆ.

ಚದುಗದಿಭವ್ವೋ ಸಣ್ಣೀ
ಪಜ್ಜತ್ತೋಸು ಜ್ಝಾಗೋಯ ಸಾಗಾರೋ।
ಜಾಗಾರೋ ಸಮ್ಮ ಮುವಗಮಈ॥

ಅಂದರೆ - ಜೀವಿಯು ದೇವಗತಿ, ಮನುಷ್ಯಗತಿ, ತಿರ್ಯಂಚಗತಿ, ನರಕಗತಿಯಲ್ಲಿರಲಿ ಭವ್ಯನಾಗಿದ್ದು, ಸಂಜ್ಞ ಪಂಚೇಂದ್ರಿಯವೂ, ಪರ್ಯಾಪ್ತಕವೂ, ಮಂದಕಷಾಯಿಯೂ ಆಗಿದ್ದರೆ ಅದಕ್ಕೆ ಕಾಲಲಬ್ಧಿ ಒದಗಿತೆಂದರೆ ಸಮ್ಯಕ್ತ್ವವನ್ನು ಗ್ರಹಣೆ ಮಾಡಬಲ್ಲದು. ಸಮ್ಯಕ್ತ್ವವು ಯಾವ ಗತಿಯಲ್ಲಾದರೂ ಮೇಲ್ಕಂಡ ಅರ್ಹತೆಗಳಿದ್ದರೆ ಪ್ರಾಪ್ತವಾಗಬಲ್ಲದು. ಇದಕ್ಕೆ ಲಬ್ಧಿಸಾರ ಧವಲಾದಿ ಗ್ರಂಥಗಳ ಆಧಾರ ಉಂಟು. ಆದುದರಿಂದ ಶಾಸನದೇವತೆಗಳು ಆ ಜನ್ಮವನ್ನು ತಾಳಿದ ಮೇಲೆ

ಸಮ್ಯಗ್ದೃಷ್ಟಿಗಳಾಗಿದ್ದಾರೆ. ಉದಾಹರಣೆಗೆ ಕಂಠಗತಪ್ರಾಯವಾಗಿದ್ದ ಎರಡು ಹಾವುಗಳು ಭಗವಾನ್ ಪಾರ್ಶ್ವನಾಥ ಸ್ವಾಮಿಯವರ ಬಾಯಿಯಿಂದ ಣಮೋಕಾರ ಮಂತ್ರವನ್ನು ಕೇಳಿ ನೆಮ್ಮದಿಯಿಂದ ಪ್ರಾಣ ಬಿಟ್ಟು ಭವನವಾಸಿ ಲೋಕದಲ್ಲಿ ಧರಣೇಂದ್ರ ಪದ್ಮಾವತಿಯರಾಗಿ ಜನಿಸಿದರು.

ತಮಗುಂಟಾದ ಆ ಪದವಿಗೆ ಕಾರಣವೇನೆಂದು ನೆನೆದಾಗ ಹಿಂದಿನ ಘಟನೆಯನ್ನು ಅವಧಿಯಿಂದ ತಿಳಿದು ಜಿನಭಕ್ತರಾಗಿ ಸಮ್ಯಗ್ದೃಷ್ಟಿಗಳಾದರು. ಅವರಿಗೆ ಆ ಗತಿ ಮೊದಲೇ ಬಂಧವಾಗಿತ್ತು. ಆ ನಂತರ ದೃಢ ಸಮ್ಯಗ್ದೃಷ್ಟಿಗಳಾಗುತ್ತಾರೆ. ಜಿನೇಂದ್ರರ ಬಿಂಬದ ಲಾಂಛನವನ್ನ ತಮ್ಮ ಕಿರೀಟದಲ್ಲಿ ಸ್ಥಾಪಿಸಿ ಜಿನಶಾಸನವನ್ನ ಶಿರೋಧಾರ್ಯ ಮಾಡಿ ತಮ್ಮ ಪರಿವಾರದೊಂದಿಗೆ ತೀರ್ಥಂಕರರ ಉಪಸರ್ಗ ನಿವಾರಣೆ - ಚಾಮರಸೇವೆ - ಧರ್ಮಪ್ರಾಭಾವನೆ - ಧಾರ್ಮಿಕರ ಸಂಕಟ ನಿವಾರಣೆ ಮತ್ತು ಧರ್ಮಕಾರ್ಯಗಳಿಗೆ ಉಂಟಾಗುವ ವಿಘ್ನಗಳನ್ನು ನಿವಾರಣೆಮಾಡಲು ಕಂಕಣಬದ್ಧರಾಗಿರುತ್ತಾರೆ.

ನಮಗಿಂತಲೂ ಶಾಸನದೇವತೆಗಳು ಜಿನೇಂದ್ರ ಭಗವಂತನ ಪೂಜಾಸ್ತುತಿ, ವಂದನೆಗಳನ್ನು ಅತಿಶಯವಾದ ಭಕ್ತಿಯಿಂದ ಮಾಡುತ್ತಾ ಅಹೋರಾತ್ರಿ ಭಗವಂತನ ಆರಾಧನೆ, ಪೂಜೆ, ಉತ್ಸವ ಅಕೃತ್ರಿಮ ಚೈತ್ಯಾಲಯ ದರ್ಶನ ವಂದನ, ಗಾಯನ, ನರ್ತನದಲ್ಲಿ ತೊಡಗಿದ್ದು ತಮಗೊದಗಿರುವ ಸಂಪದೊಯ್ಯವಗಳನ್ನು ಸದುಪಯೋಗ ಮಾಡಿಕೊಂಡು ಸತ್ಕಾಲಕ್ಷೇಪ ಮಾಡುತ್ತಾರೆ. ಇದರಿಂದಾಗಿ ಶಾಸನ ದೇವಿಯರನ್ನು ನಮ್ಮ ಸಾಧರ್ಮಿಗಳೆಂದು ತಿಳಿದು ಜಿನೇಂದ್ರ ಭಗವಂತನ ಪೂಜೆ, ಅಭಿಷೇಕ, ಪಂಚಕಲ್ಯಾಣಾದಿ ಶುಭಕಾರ್ಯಗಳಲ್ಲಿ ಅವರನ್ನು ವಿಧಿಪೂರ್ವಕವಾಗಿ ಆಹ್ವಾನಿಸಿ ಅರ್ಘ್ಯಾದಿಗಳನ್ನು ಕೊಟ್ಟು ಪೂಜಿಸಿ ಸತ್ಕರಿಸಬಹುದು.

ವೀತರಾಗನೆ ದೇವ ಭೂತಹಿತವೇ ಧರ್ಮ।
ಜಾತರೂಪನೆ ಗುರುವೆಂದು।
ಈ ತೆರನಲ್ಲದೆ ಧರ್ಮವಿಲ್ಲೆಂದೆಂಬ।
ನೀತಿಯು ಸಮ್ಯಕ್ತ್ವವಹುದು॥

ಎಂದು ಅವರೂ ಜಿನದೇವ ಗುರುಧರ್ಮಗಳನ್ನು ದೃಢವಾಗಿ ನಂಬಿ ಸೇವೆ ಮಾಡುತ್ತಿರುವುದರಿಂದ ಅವರಿಗೂ ಸಮ್ಯಗ್ದೃಷ್ಟಿಗಳೂ ದೇವ ಪರ್ಯಾಯ ಉಳ್ಳವರೂ ಅನೇಕ ವೃದ್ಧಿ ವಿದ್ಯಾಭೂಷಿತರೂ ಆಗಿರುವುದರಿಂದ ಅವರನ್ನು ಗೌರವದಿಂದ ಆರಾಧಿಸುವುದು ದೇವಮೂಢವೆನಿಸುವುದಿಲ್ಲ. ಬಲಿಪ್ರಿಯರೂ,



ರೌದ್ರಾಕಾರಿಗಳು ಮಿಥ್ಯಾದೃಷ್ಟಿಗಳೂ ಆದ ಕ್ಷುದ್ರ ದೇವಿಯರನ್ನು ಆರಾಧಿಸುವುದು ಮಿಥ್ಯತ್ವವೆನಿಸುತ್ತದೆ. ಆದರೆ ನಾವು ವಿಷಯವನ್ನು ತಿಳಿಯದೆ ಜಿನೇಂದ್ರನ ಆರಾಧನೆಯನ್ನು ಬಿಟ್ಟು ಅಥವಾ ಗೌಣ ಮಾಡಿ ನಮ್ಮ ಐಹಿಕ ಸುಖ ಭೋಗಗಳ ವರವನ್ನು ಬೇಡುವ ಸಲುವಾಗಿ ಹರಕೆ ಇತ್ಯಾದಿಗಳನ್ನು ಹೊತ್ತು ಅನುಗ್ರಹ ಕೃಪಾಕಟಾಕ್ಷಗಳಿಗಾಗಿ ಯಕ್ಷ ಯಕ್ಷಿಯರನ್ನೇ ಹೆಚ್ಚೆಂದು ನಂಬಿ ಜಿನೇಂದ್ರನ ಸರಿಸಮಾನವಾಗಿ ಮನ್ನಿಸಿ ಪೂಜಾಭಿಷೇಕಗಳನ್ನು ಮಾಡಿ ಅತಿಭಕ್ತಿಯ ಪ್ರದರ್ಶನ ಮಾಡುವುದು ತಪ್ಪೆನಿಸುವುದು. ಜಿನೇಂದ್ರನ ಪೂಜಾ ಆರಾಧನೆಯಾದ ನಂತರ ಶಾಸನದೇವದೇವಿಯರಿಗೂ ಅರ್ಘ್ಯಾದಿಗಳನ್ನು ಅರ್ಪಿಸಿ ವಸ್ತ್ರಾಭರಣಗಳಿಂದ ಅಲಂಕರಿಸಿ ಗೌರವಿಸುವುದು ತಪ್ಪಲ್ಲ.

ಮಂಗಲಾಷ್ಟಕದಲ್ಲಿ ಹೇಳಿದ್ದಾರೆ-

ದೇವ್ಯೋಷ್ಟೌಚ ಜಯಾದಿಕಾದ್ವಿಗುಣಿತಾ
ವಿದ್ಯಾದಿಕದೇವತಾಃ।
ಶ್ರೀ ತೀರ್ಥಂಕರ ಮಾತೃಕಾಶ್ಚ ಜನಕಾ
ಯಕ್ಷಾಶ್ಚ ಯಕ್ಷ್ಯಸ್ತಥಾ ॥
ದ್ವಾತ್ರಿಂಶ ತ್ರಿದಶಾ ಗ್ರಹಾಸ್ತಿತಿಸುರಾ
ದಿಕ್ಕನ್ಯಕಾಶ್ಚಾಷ್ಟಧಾ
ದಿಲ್ಪಾಲಾದಶಚೇತ್ಯಮೀ ಸುರಣಗಾಃ
ಕುರ್ವಂತು ತೇ ಮಂಗಲಂ ॥ 4॥

ಅಂದರೆ ಜಯಾ ಮೊದಲಾದ ಎಂಟು ದೇವಿಯರೂ 16 ವಿದ್ಯಾದೇವತೆಗಳೂ ತೀರ್ಥಂಕರರ ತಾಯಿ ತಂದೆಯರೂ, ಯಕ್ಷ ಯಕ್ಷಿಯರೂ, 32 ಮಂದಿ ಇಂದ್ರರುಗಳೂ, ನವಗ್ರಹರೂ, 15 ತಿಥಿದೇವತೆಗಳೂ, 8 ಮಂದಿ ದಿಕ್ಕನ್ಯೆಯರೂ, ದಶ ದಿಕ್ಪಾಲಕರೂ ಆದ ಈ ಜಿನಶಾಸನದೇವಸಮೂಹವು ಮಂಗಲವನ್ನುಂಟು ಮಾಡಲಿ ಹೀಗೆ ಇವರೆಲ್ಲಾ ಪೂಜ್ಯರೇ ಎಂಬುದು ಶಾಸ್ತ್ರಸಮ್ಮತ.

ಚಂಡಿ, ದುರ್ಗಿ, ಮಾರಿ, ಭೂತ, ಭೇತಾಳ ಮುಂತಾದ ಭಯಂಕರವಾದ ಮೂರ್ತಿ (ಜಿನಶಾಸನ ಲಾಂಛನವಿರದ)ಗಳನ್ನು ಪೂಜಿಸುತ್ತಾ ಆರಾಧಿಸುತ್ತಾ ಭಕ್ತರಾಗಿರುವ ಕೆಲವರು ಚಾಮುಂಡಿ ಎಂದರೂ ಒಂದೇ ಪದ್ಮಾವತಮ್ಮವರು ಎಂದರೂ ಒಂದೇ ಯಲ್ಲಮ್ಮ ಬೇರೆಯಲ್ಲ ಪದ್ಮಾವತಮ್ಮ ಜ್ವಾಲ್ಲಮ್ಮನವರು ಬೇರೆಯಲ್ಲವೆಂದು ಮಾಡಿ ಬಾಯಿಮುಚ್ಚಿಸುವುದು ಶುದ್ಧ ಮೌಢ್ಯ. ತಪ್ಪು

ಮಾರ್ಗವನ್ನು ಹಿಡಿದು ಯಾವುದೋ ಮುಲಾಜಿಗೆ ಕಟ್ಟುಬಿದ್ದು ಶ್ರೀಮಂತಿಕೆ ಹೋದೀತೆಂದು ಭಯದಿಂದಲೋ, ಖಾಯಿಲೆ ಕಸಾಲೆಗಳು ಬಂದಾವೆಂದೋ ಭಯದಿಂದ ಹಿಡಿದಿರುವ ಮಿಥ್ಯಾಪದ್ಧತಿಯನ್ನು ಬಿಡದೆ ಸುಮ್ಮನೆ ಇದಕ್ಕೆ ಹೋಲಿಸಿ ವ್ಯರ್ಥವಾಗಿ ವಾದಿಸುತ್ತಾರೆ. ಇದು ಸರಿಯಲ್ಲ. ಅಂಥವರು ಇನ್ನಾದರೂ ಬಿಟ್ಟು (ಜೈನರು) ಜಿನಶಾಸನದೇವದೇವಿಯರ ಆರಾಧನೆಯನ್ನು ವಿಧಿಯರಿತು ಮಾಡಲಿ. ಮಿಥ್ಯೆಯನ್ನು ಬಿಟ್ಟು ಸತ್ಯವಾದ ದೇವತೆಗಳನ್ನೂ ನಂಬಿ ಆರಾಧಿಸಲಿ. ಧರ್ಮಕಾರ್ಯಗಳಲ್ಲಿ ಪ್ರತಿಷ್ಠೆ, ಹೋಮ, ಪಂಚಕಲ್ಯಾಣಾದಿಗಳಲ್ಲಿ ದಿಕ್ಪಾಲಕರನ್ನೂ, ಯಕ್ಷಯಕ್ಷಿಯರನ್ನೂ ಗೌರವದಿಂದ ಆಹ್ವಾನಿಸಿ ಸ್ಥಾಪಿಸಲಾಗುತ್ತದೆ. ಈ ವಿಧಾನವು ಎಲ್ಲಾ ಪ್ರತಿಷ್ಠಾಪಾಠಗಳಲ್ಲೂ ಇದೆ. ಅದಕ್ಕೆ ಕಾರಣವೂ ಇದೆ. ಇಂತಹ ಧಾರ್ಮಿಕ ಕಾರ್ಯಗಳಲ್ಲಿ ಮಿಥ್ಯಾದೇವದೇವಿಯರೂ, ಭೂತಬೇತಾಳಾದಿಗಳಿಂದ ದುಷ್ಟ ಜನಗಳಿಂದಲೂ ವಿಘ್ನಗಳಾಗುವ ಸಂಭವ ಉಂಟು. ಅವುಗಳನ್ನು ಜಿನಶಾಸನ ದೇವದೇವಿಯರು ನಿವಾರಣೆಮಾಡಿ ನಿರ್ವಿಘ್ನವಾಗಿ ಧರ್ಮಪ್ರಭಾವನೆಯಾಗುವಂತೆ ನೋಡಿಕೊಳ್ಳುತ್ತಾರೆ. ಅದಕ್ಕಾಗಿಯೇ ಆ ಕಾಲದಲ್ಲಿ ಸರ್ವಾಹ್ಣಯಕ್ಷನ ಧ್ವಜಪಟವನ್ನು ಮಾನಸ್ಥಂಭದ ಮೇಲೆ ಹಾರಿಸುತ್ತಾರೆ.

ನಮ್ಮ ದಕ್ಷಿಣದಲ್ಲೆಲ್ಲೋ ಒಂದು ಕಡೆ (ಬಹುಶಃ ಬಾಹುಬಲಿ ಕ್ಷೇತ್ರದಲ್ಲಿರಬಹುದು) ಪಂಚಕಲ್ಯಾಣಾದಿ ನಡೆಯುತ್ತಿತ್ತು. ಆಗ ಮಳೆಗಾಲವೇನಲ್ಲ. ಇದ್ದಕ್ಕಿದ್ದಂತೆ ಆಲಿಕಲ್ಲಿನ ಮಳೆ ಬೀಳಲಾರಂಭಿಸಿತು. ಬಿರುಗಾಳಿ ಎದ್ದಿತ್ತು. ಗುಡುಗು ಸಿಡಿಲುಗಳ ಉಪದ್ರವವಾಗಲಾರಂಭಿಸಿತು. ಜನ ಗಾಬರಿಯಾದರು. ಆಗ ಕಂಕಣಬದ್ಧರಾಗಿದ್ದ ಪ್ರತಿಷ್ಠಾಚಾರ್ಯರು ಒಬ್ಬರೇ ಏಕಾಂತ ಸ್ಥಳದಲ್ಲಿ ಹೋಗಿ ಜಿನಶಾಸನದೇವಿಯ ಸ್ತೋತ್ರ ಮಾಡಿದರು. ಸರಿ ಇದ್ದಕ್ಕಿದ್ದಂತೆ ಒಂದು ಹನಿ ಮಳೆ ಇಲ್ಲ ಮೊದಲಿದ್ದ ಸ್ಥಿತಿಯಾಯಿತು. ಆ ಕ್ಷೇತ್ರದ ಸುತ್ತಾ 1 ಮೈಲಿ ದೂರದಲ್ಲಿ ಭಾರೀ ಮಳೆಯಾಗಿತ್ತು. ಕಾರ್ಯ ನಿರ್ವಿಘ್ನವಾಗಿ ಸಾಗಿತು. ಇದು ಜಿನಶಾಸನ ದೇವದೇವಿಯ ಚಮತ್ಕಾರವೇ ಸರಿ. ಅಲ್ಲಿಯೇ ಭಗವಾನ ಬಾಹುಬಲಿ ಸ್ವಾಮಿಯವರ ಪ್ರತಿಷ್ಠೆಯಾದಾಗ ಸುಗಂಧವೃಷ್ಟಿಯಾದದ್ದೂ ಸರ್ವವಿದಿತ ಇದೂ ಅವರ ಪ್ರಭಾವನೆಯೇ.

ಇದು ಪಂಚಮಕಾಲವಾದರೂ ಯಕ್ಷಯಕ್ಷಿಯರಿಂದ ಈ ರೀತಿಯ ಚಮತ್ಕಾರಗಳಾಗುವುದರಲ್ಲಿ ಸಂದೇಹವಿಲ್ಲ.

ಶ್ರವಣಬೆಳಗೊಳದಲ್ಲಿ ಬಾಹುಬಲಿಸ್ವಾಮಿಯ ಪ್ರತಿಷ್ಠಾಪನಾ ಕಾಲದಲ್ಲಿ



ಚಾಮುಂಡರಾಯನು ಮಾಡಿಸಿದ ಮಹಾಮಸ್ತಕಾಭಿಷೇಕವು ಸ್ವಾಮಿಯ ಮೈತುಂಬಾ ಹರಿಯದೆ ಇದ್ದು ಗುಳಕಾಯಿ ಅಜ್ಜಿಯ ನಿಮಿತ್ತ ಧಾರಾಪೂರ್ವಕವಾಗಿ ಅಭಿಷೇಕವಾದ ಚಮತ್ಕಾರವು ಜಿನಶಾಸನ ದೇವಿಯ ಪ್ರಭಾವವಲ್ಲವೇ?

ಸ್ವಾಮಿ ಸಮಂತಭದ್ರಾಚಾರ್ಯರು ಶಿವಕೋಟಿ ಮಹಾರಾಜನ ಭೀಮಲಿಂಗದ ಎದುರಿಗೆ ಸ್ವಯಂಭೂಸ್ತೋತ್ರವನ್ನು ಹೇಳುತ್ತಿದ್ದಾಗ ಚಂದ್ರಪ್ರಭಸ್ವಾಮಿಯವರ ಯಕ್ಷಿ ಜ್ವಾಲಾಮಾಲಿನಿ ಅಮ್ಮನವರು ಲಿಂಗದ ಜಾಗದಲ್ಲಿ ಚಂದ್ರಪ್ರಭರ ಬಿಂಬವನ್ನು ಪ್ರಕಟಪಡಿಸಲಿಲ್ಲವೇ?

ಶ್ರೀ ಮಾನತುಂಗಾಚಾರ್ಯರು ತಮಗೆ ಉಂಟಾಗಿದ್ದ ಉಪಸರ್ಗದ ಸಮಯದಲ್ಲಿ ಭಕ್ತಾಮರ ಸ್ತೋತ್ರವನ್ನು ಹೇಳುತ್ತಿದ್ದಾಗ ಅವರ ಕೈ ಮೈ ಕಾಲುಗಳಿಗೆ ಬಿಗಿದಿದ್ದ ಸಂಕೋಲೆಗಳು ಹರಿದುಹೋಗಿ ಉಪಸರ್ಗನಿವಾರಣೆಯಾಗಲಿಲ್ಲವೆ. ಆದಿನಾಥ ಭಗವಾನರು ದೀಕ್ಷೆಯನ್ನು ತೆಗೆದುಕೊಂಡು ಮೌನದಿಂದ ತಪಸ್ಸು ಮಾಡುತ್ತಿದ್ದಾಗ ನಮಿವಿನಮಿಯರು ಬಂದು ತಮಗೆ ರಾಜ್ಯಕೋಷಾದಿ ವಿಭೂತಿಗಳನ್ನು ಕೊಡುವಂತೆ ದಾಂಧಲೆ ಮಾಡುತ್ತಿದ್ದಾಗ ದೇವೇಂದ್ರನ ಆಜ್ಞೆಯಂತೆ ಧರಣೇಂದ್ರಯಕ್ಷ ಅಲ್ಲಿಗೆ ಬಂದು ನಿಮಗೆ ವಿಜಯಾರ್ಧಪರ್ವತದ ದಕ್ಷಿಣ-ಉತ್ತರ ಶ್ರೇಣಿಗಳನ್ನು ಕೊಡುವಂತೆ ಭಗವಾನರು ನಮಗೆ ಆಜ್ಞೆ ಮಾಡಿದ್ದಾರೆಂದು ಹೇಳಿ ನಮಿವಿನಮಿಗಳನ್ನು ಅಲ್ಲಿಂದ ಕರೆದೊಯ್ದು ವಿಜಯಾರ್ಧ ಗಿರಿಯಲ್ಲಿ ಸ್ಥಾಪಿಸಿ ಆದಿನಾಥರ ತಪಸ್ಸಿಗೆ ಭಂಗ ತರುತ್ತಿದ್ದ ಇದರ ಉಪಟಳವನ್ನು ತಪ್ಪಿಸಲಿಲ್ಲವೇ?

ಅಕಲಂಕಾಚಾರ್ಯರು ಬೌದ್ಧರೊಂದಿಗೆ ವಾದಮಾಡುತ್ತಿದ್ದಾಗ ತಾರಾದೇವಿ ಎಂಬ ದೇವಿಯಿಂದ ಆಗುತ್ತಿದ್ದ ಅಡಚಣೆಯನ್ನು ಪದ್ಮಾವತಿ ದೇವಿಯ ನೆರವಿನಿಂದ ನಿವಾರಣೆ ಮಾಡಿಕೊಂಡು ವಾದದಲ್ಲಿ ಗೆಲ್ಲಲಿಲ್ಲವೇ?

ಸ್ವಾಮಿ ಕುಂದಕುಂದಾಚಾರ್ಯರು ಒಮ್ಮೆ ತೀರ್ಥ ಯಾತ್ರಾರ್ಥವಾಗಿ ನೇಮಿನಾಥ ಸ್ವಾಮಿಯ ಮುಕ್ತಿ ಸ್ಥಾನವಾದ ಗಿರಿನಾರ ಪರ್ವತಕ್ಕೆ ಹೋಗಿದ್ದಾಗ ಅಲ್ಲಿ ದಿಗಂಬರ-ಶ್ವೇತಾಂಬರ ಪಂಥದಲ್ಲಿ ವಿವಾದ ಉಂಟಾಗಿತ್ತು. ಶ್ವೇತಾಂಬರರು ತಾವೇ ಮೊದಲಿಗರು ಮೂಲ ಸಂಘ ನಾವೇ ಆದಿಯಾದವರು ದಿಗಂಬರರು ಅನಂತರ ಆದವರು ಎಂದಾಗ ಶ್ರೀ ಕುಂದಾಚಾರ್ಯರು ಬಹಳ ಹೇಳಿ ಅನೇಕ ಆಧಾರಗಳನ್ನು ಕೊಟ್ಟರೂ ಶ್ವೇತಾಂಬರರು ಒಪ್ಪದೆ ಹಟವಿಡಿದಿದ್ದಾಗ ನೇಮಿನಾಥರ ಯಕ್ಷಿ ಕೂಷ್ಮಾಂಡಿನಿಯಮ್ಮನವರು ಆಕಾಶದಲ್ಲಿ ಪ್ರಕಟವಾಗಿ ದಿಗಂಬರ ಪಂಥವೇ ಮೂಲ. ದಿಗಂಬರ ಮೂಲ ಸಂಘವೇ "ಆದಿ-ದಿಗಂಬರ, ಆದಿದಿಗಂಬರ ಎಂದು ಘೋಷಿಸಿ

ಕುಂದ ಕುಂದಾಚಾರ್ಯರ ಮೇಲೆ ಪುಷ್ಪವೃಷ್ಟಿ ಮಾಡಿ ಪ್ರಭಾವನೆ ಮಾಡಲಿಲ್ಲವೇ? (ಪಂಡಿತ ಶ್ರೀ ಮಖನಲಾಲಜೀ ಶಾಸ್ತ್ರೀಯವರ ಆಗಮ ಮಾರ್ಗ ಪ್ರಕಾಶದ ಆಧಾರ) ಜಿನ ದತ್ತರಾಯನಿಗೆ ಉಂಟಾಗಿದ್ದ ಪ್ರಾಣಾಪಾಯವನ್ನು ತಪ್ಪಿಸಿ ಇಂದು ಭಕ್ತರ ನೆಲೆವೀಡಾಗಿ ಭಕ್ತರನ್ನೂ ಕಾಪಾಡುತ್ತಾ ನೆಲೆಸಿರುವ ಪದ್ಮಾವತೀ ದೇವಿಯ ನೆಲೆಯಾದ ಹೊಂಬುಜಕ್ಷೇತ್ರ ಪ್ರತ್ಯಕ್ಷ ಸಾಕ್ಷಿ ಇಲ್ಲವೇ?

ಹೀಗೆ ಪದ್ಮಾವತೀ ದೇವಿಯ ವನಮಾಲಾ ಮೃತ್ಯುಂಜಯರಿಗೆ ನೆರವು ನೀಡಿ ಸತ್ಯರ್ಥ ಪ್ರಕಟವಾಗುವಂತೆ ಪ್ರಭಾವನೆ ಬೀರಲಿಲ್ಲವೇ?

ವೈದೀಕರಾಗಿದ್ದ ಪಾತ್ರಕೇಸರಿ ಎಂಬುವರು ತಮಗೆ ಒದಗಿದ್ದ ಅನುಮಾನವನ್ನು ಕನಸಿನಲ್ಲಿ ಕಂಡಂತೆ ಪದ್ಮಾವತೀ ಅಮ್ಮನವರ ಫಣಾ ಮಂಡಲದಲ್ಲಿ ಬರೆದಿದ್ದ ಶ್ಲೋಕವನ್ನು ಕಂಡು ಪ್ರಭಾವಿಕರಾಗಿ ಜಿನಧರ್ಮ ದೀಕ್ಷಾ ಬದ್ಧರಾಗಿ ಆಚಾರ್ಯರೆನಿಸಲಿಲ್ಲವೇ?

ಹಿಂದೊಮ್ಮೆ ದೆಹಲಿಯಲ್ಲಿ ಮೊಗಲಬಾದಷಹನಿಂದ ಜೈನರಿಗೆ ಉಂಟಾಗಿದ್ದ ಉಪಸರ್ಗವನ್ನು ದಕ್ಷಿಣ ದೇಶದ ಭಟ್ಟಾರಕಪಟ್ಟಾಚಾರ್ಯ ಸ್ವಾಮಿಗಳು ಭಕ್ತಿಯಿಂದ ಶಾಸನ ದೇವತೆಗಳನ್ನು ಸ್ಮರಿಸುತ್ತಿದ್ದಂತೆಯೇ ಆ ಉಪಸರ್ಗ ನಿವಾರಣೆಯಾಯಿತು. ಬಾದಷಹನು ಭಟ್ಟಾರಕರಲ್ಲಿ ಕ್ಷಮೆ ಕೋರಿದ.

ಹೀಗೆ ಜಿನಶಾಸನ ದೇವ ದೇವಿಯರಿಂದ ಅನೇಕ ವಿಘ್ನಗಳು ನಿವಾರಣೆಯಾಗಿ ಜಿನಧರ್ಮ ಪ್ರಭಾವನೆ ಉಂಟಾದ ಅನೇಕ ಉದಾಹರಣೆಗಳಿವೆ.

ಒಂದು ವಿಶೇಷವೇನೆಂದರೆ ಈ ಶಾಸನ ದೇವತೆಗಳು ನೀಚ ದೇವತೆಗಳಂತೆ ಹಾನಿಕರವಾದ ಉಪದ್ರವ ಉಪಟಳವನ್ನೆಂದೂ ಮಾಡುವುದಿಲ್ಲ. ಕೊಟ್ಟರೆ ವರ ಇಟ್ಟರೆ ಶಾಪ ಎಂಬ ಮಾತಿಲ್ಲ. ಅವರು ಧರ್ಮಾಧೀನರು ಜಿನಧರ್ಮ ಸೇವಕರು ಧರ್ಮಕಾರ್ಯ ನಡೆಯುತ್ತಿದ್ದಲ್ಲಿ ಅವರು ಇರುತ್ತಾರೆ. ಅಂತಹ ಪ್ರಭಾವನೆ, ಆರಾಧಕರಲ್ಲಿ ಭಕ್ತಿ ಮಂತ್ರ-ಬೀಜಾಕ್ಷರಗಳ ಪರಿಶುದ್ಧ ಪಠಣ ಮುಖ್ಯವಾಗಿ ನಂಬಿಕೆ ಇದ್ದಲ್ಲಿ ಅವರಿಂದ ಆಗುವುದಿದ್ದರೆ ಉಪಕಾರವೇ ಆದೀತೇ ಹೊರತು ಅಪಕಾರವೆಂದಿಗೂ ಆಗದು.

ಜಿನಶಾಸನ ದೇವತೆಗಳಲ್ಲಿ ರೌದ್ರಾಕಾರ ವಿಕಾರ ರೂಪಗಳಲ್ಲ. ಪೂಜಿಸಿದರೆ ಮಾತ್ರ ವರ, ಕಾಣಿಕೆ-ವಡವೆ ವಸ್ತ್ರಾದಿಗಳನ್ನೂ ಅರ್ಪಿಸಿದರೆ ಮಾತ್ರ ಅನುಗ್ರಹ ಎಂಬುದಿಲ್ಲ. ಅನುಪಮವಾದ ದೇವಲೋಕದ ಸಂಪತ್ತು ಅವರು ನೆನೆಸಿದರೆ ಭೋಗ



ವಸ್ತುಗಳು ಪ್ರಾಪ್ತವಾಗುವ ಪದವಿ ಪಡೆದ ಅವರಿಗೆ ಈ ಭಕ್ತರ ಲಂಚ ಖಂಡಿತ ಬೇಕಿಲ್ಲ. ಆದರೂ ಭಕ್ತರೂ ಪ್ರೀತಿ, ಭಕ್ತಿಗಾಗಿ ಅಲಂಕಾರ ಮಾಡಿದರೆ ತಪ್ಪಲ್ಲ. ಅವರೂ ನಮ್ಮಂತೆ ಸ್ವಲ್ಪ ಪುಣ್ಯಾತ್ಮರಾದ ಸಂಸಾರಿಗಳೇ ಅವರ ಅಲಂಕಾರಗಳನ್ನೂ ವಸ್ತ್ರಾಭರಣಗಳಿಂದ ಮಾಡಿ ಮೆರೆಸಿದರೆ ತಪ್ಪಲ್ಲ. ಅವರು ಸಮ್ಯಗ್ದೃಷ್ಟಿಗಳಾದುದರಿಂದ ಸಮ್ಯಗ್ದೃಷ್ಟಿಗಳ ಸಂಕಟ ನಿವಾರಣೆ ಮಾಡಲು, ಧರ್ಮ ರಕ್ಷಣೆ ಮಾಡಲು, ಜಿನಶಾಸನವನ್ನು ಬಿತ್ತರಿಸಲು ಸದಾ ಸಿದ್ಧರಿರುತ್ತಾರೆ.

ನಾವು ಕೆಲವು ಸಂದರ್ಭದಲ್ಲಿ ಪೂಜಾಪ್ರಭಾವನೆ, ಕ್ಷಾಮಡಾಮರಗಳಲ್ಲಿ ರೋಗರುಜಿನಗಳಲ್ಲಿ ಉಪದ್ರವ ನಿವಾರಣಾರ್ಥ ಅವರನ್ನೂ ಭಕ್ತಿಯಿಂದ ಪೂಜಿಸಿ ಪ್ರಾರ್ಥಿಸಬಹುದು. ಅವರು ಅನುಗ್ರಹ ಉಳ್ಳವರೇ ವಿನಃ ನಿಗ್ರಹಕರಲ್ಲ. ಕೆಡಕು ತೊಡಕುಗಳನ್ನು ಮಾಡುವವರಲ್ಲ (ಹುಟ್ಟು ಸಾವುಗಳಿಗೆ ಹಾಗೂ ಸುಖ ದುಃಖಗಳಿಗೆ ಇವರು ಕಾರಣರಾಗುವುದಿಲ್ಲ) ವರದ ಹಸ್ತ ಉಳ್ಳವರೇ ವಿನಃ ಶಾಪಕೊಡುವವರಲ್ಲ. ಅದಕ್ಕೆ ನಿದರ್ಶನವೆಂದರೆ ನೋಡಿ ಬಲಪ್ರಸಾದವಾಗುತ್ತದೆಯೇ ವಿನಃ ಎಡ ಪ್ರಸಾದವಿಲ್ಲ. ಹಾಗೆಂದ ಮಾತ್ರಕ್ಕೆ ಅನ್ಯಾಯ, ಕೊಲೆ ಕೆಲಸ, ಹಿಂಸಾಕಾರ್ಯ, ಮೋಸ, ಮಾಯ ಮಾಟ, ಹಾನಿ, ಸಂಕಟ ಮುಂತಾದವುಗಳನ್ನು ಪರರಿಗೆ ಉಂಟುಮಾಡುವ ಸಲುವಾಗಿ ಶಾಸನದೇವತೆಗಳ ನೆರವನ್ನು ಅಪೇಕ್ಷಿಸಿದರೆ ಅದು ಅವರಿಂದ ದೊರೆಯುವುದಿಲ್ಲ. ಕೆಲವರು ಸಣ್ಣ ಸಣ್ಣ ವಿಷಯಗಳಿಗೆಲ್ಲಾ ಸ್ವಾರ್ಥ ವಂಚನೆಗಳಿಗೆಲ್ಲಾ ಪ್ರಸಾದವನ್ನು ಕೇಳುವುದು, ಪ್ರಸಾದ ಕೇಳುವುದಕ್ಕಾಗಿಯೇ ಪೂಜೆ ಪ್ರಾರ್ಥನೆ ಮಾಡುವುದು, ತಮ್ಮ ಕಾರ್ಯಗಳಾಗದಿದ್ದರೆ ತೆಗಳುವುದು ಮುಂತಾದವುಗಳಿಂದ ಶಾಸನ ದೇವತೆಯರ ಮೇಲ್ಪಟ್ಟದ ಹೆಸರಿಗೆ ಕಲಂಕವನ್ನು ತರುತ್ತಿದ್ದೇವೆ. ನಮ್ಮ ಸ್ವಾರ್ಥ ಇಷ್ಟಾರ್ಥ ಸಾಧನೆಗಾಗಿ ಅವರನ್ನು ಒಲಿಸಿಕೊಳ್ಳುವ ಭರದಲ್ಲಿ ಮೂಲ ಜಿನೇಂದ್ರರ, ಜಿನಶಾಸನ, ಜಿನಗುರುಗಳನ್ನು ಮರೆತೇ ಬಿಡುತ್ತೇವೆ ಇದು ತಪ್ಪು. ಜಿನದೇವ ಗುರುಗಳು ಪೂಜಾರಾಧನೆ ಸೇವೆಗಳು ಮುಖ್ಯವೂ ಜಿನ ಶಾಸನ ದೇವತೆಗಳಾರಾಧನೆ ಗೌಣವೂ ಆಗಿರಬೇಕು.

ಪ್ರತಿಯೋರ್ವ ತೀರ್ಥಂಕರರ ಯಕ್ಷ-ಯಕ್ಷಿಯರ ವಿವಿಧ ರೂಪದಲ್ಲಿ ಆಯಾ ಕಾಲದಲ್ಲಿ ಧರ್ಮಪ್ರಭಾವನೆ ಮಾಡಿದ್ದಾರೆ. ಇವರೆಲ್ಲಾ ಜಿನಬಿಂಬವನ್ನು ಹೊತ್ತ ಶಾಸನ ದೇವತೆಗಳಾಗಿದ್ದಾರೆ. ಅವರು ಅವಿರತ ಸಮ್ಯಗ್ದೃಷ್ಟಿಗಳಾಗಿದ್ದು ಅರ್ಘ್ಯವನ್ನು ಸ್ವೀಕರಿಸಲು ಪಾತ್ರರಾಗಿದ್ದಾರೆ.

ಅಷ್ಟಾವಧಾನ, ಶೋಡಷೋಪಚಾರ, ವಸ್ತ್ರಾಭರಣಾಲಂಕಾರ, ಉತ್ಸವ, ಉಯ್ಯಾಲೆ ಇತ್ಯಾದಿಗಳನ್ನು ಮಾಡಬಹುದು. ಆದರೆ ಮಹಾಭಿಷೇಕ

ಪಂಚಾಮೃತಾಭಿಷೇಕ ಮಾಡುವ ಕ್ರಿಯೆಗಳನ್ನು ಎಲ್ಲಿಯೂ ಹೇಳಿಲ್ಲ ಹಿಂದೆ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಯಲ್ಲಿ ಪ್ರತಿಷ್ಠಾಪಿಸಿರುವ ಪದ್ಮಾವತಿ ದೇವಿ, ಕೂಷ್ಮಾಂಡಿನೀ ದೇವಿ ಮೊದಲಾದ ಯಕ್ಷ ದೇವ ದೇವಿಯರ ಪೀಠಗಳು ಇದ್ದರೂ ಅವುಗಳಲ್ಲಿ ಅಭಿಷೇಕಕ್ರಿಯೆಗೆ ತಕ್ಕ ಸಾಧನವಾದ ಜಲಧಾರೆ ಮೊದಲಾದವು ಜಿನಬಿಂಬಗಳಿರುವಂತೆ ನಿರ್ಮಿಸಿಲ್ಲವೆಂಬುದು ನಿದರ್ಶನ. ಯಕ್ಷ-ಯಕ್ಷಿಯರಿಗೆ ಅಭಿಷೇಕಾದಿಕ್ರಿಯೆಗಳು ಇತ್ತೀಚೆಗೆ ಜಾರಿಗೆಬಂದಿರಬಹುದಾದರೂ ಅಭಿಷೇಕವನ್ನು ಮಾಡಿದರೆ ಸಮ್ಯಕ್ತ್ವಕ್ಕೆ ಹಾನಿ ಏನಿಲ್ಲ ಎಂದು ನನ್ನ ನಂಬಿಕೆ. ಇದಕ್ಕಿಂತ ಮುಂಚೆ ಎಲ್ಲಿಯೋ ಇರುವ ಹುತ್ತಕ್ಕೆ ಹಾಲು ಎರೆಯುವುದು ಪೂಜಿಸಿ ಅಡ್ಡ ಬೀಳುವುದು, ಎಲ್ಲಿಯೋ ನಾಗರ ಕಲ್ಲಿಗೆ ಅಭಿಷೇಕ ಮಾಡುವುದನ್ನು ಮೊದಲು ಬಿಡಬೇಕು. ಮಾಡುವುದಾದರೆ ಪದ್ಮಾವತಮ್ಮನವರೇ ಮುಂತಾದ ಯಕ್ಷ-ಯಕ್ಷಿಯ ಪ್ರತಿಷ್ಠಾಪಿತ ಬಿಂಬಗಳಿಗೆ ಮಾಡಲಿ. ಪೂಜೆ-ಉಯ್ಯಾಲೆ ಮಾಡಿಸಲಿ-ಆರತಿ ಬೆಳಗಿಸಲಿ, ಅಲಂಕಾರ ಮಾಡಲಿ, ಭಕ್ತಿ ಮಾಡಲಿ ಅಡ್ಡಿಯಿಲ್ಲ.

ಯಕ್ಷ-ಯಕ್ಷಿಯರೂ ಶಾಸನ ದೇವದೇವಿಯರೂ ಎಲ್ಲರೂ ಒಂದೇ ಸಮಾನವಾದ ಅರ್ಹತೆಯುಳ್ಳವರು. ಇವರಲ್ಲಿ ಕೆಲವರನ್ನಷ್ಟೇ ಪೂಜಿಸಬೇಕೆಂದಲ್ಲ. ಯಾವ ಯಾವ ತೀರ್ಥಂಕರರನ್ನು ಪೂಜಿಸುತ್ತೇವೋ ಆ ತೀರ್ಥಂಕರ ಯಕ್ಷ-ಯಕ್ಷಿಯರನ್ನು ಪೂಜಿಸಬಹುದು. ಅಥವಾ ನಮ್ಮ ನಮ್ಮ ಮನೆದೇವತೆಗಳೆನಿಸಿರುವ ಶಾಸನ ದೇವತೆಗಳನ್ನು ಪೂಜಿಸುವುದು ತಪ್ಪೇನಲ್ಲ.

ವ್ಯವಹಾರ ದೃಷ್ಟಿಯಿಂದಲೂ ಪುಣ್ಯಾರ್ಜನೆಗಾಗಿ ಪೂಜೆಯು ಮುಖ್ಯವಾದುದು. ನಿಶ್ಚಯದ ದೃಷ್ಟಿಯಿಂದ ಜಿನೇಂದ್ರನ ಆರಾಧನೆ ಸಾಕು ಇನ್ನು ನಿಶ್ಚಯ ದೃಷ್ಟಿಯಿಂದ ತನ್ನ ಶುದ್ಧಾತ್ಮಾರಾಧನೇಯೇ ಸಾಕು. ಆ ಮಟ್ಟಕ್ಕೆ ಏರಿದ ಉನ್ನತಾತ್ಮರಿಗೆ ಶಾಸನ ದೇವ ದೇವಿಯರ ಆರಾಧನೆ ಬೇಕಿಲ್ಲ ನಿಜ ಆದರೆ ಗೃಹಸ್ಥರಾದ ಸರಾಗಸಮ್ಯಗ್ದೃಷ್ಟಿಗಳಾದವರಿಗೆ ಯಕ್ಷ-ಯಕ್ಷಿಯ ಪೂಜಾರಾಧನೆ ಮಾಡುವುದು ಉಚಿತವೇ ಆಗಿದೆ. ಈಗ ಯಾರೂ ಶುದ್ಧ ನಿಶ್ಚಯದ ಕ್ಷಾಯಿಕ ಸಮ್ಯಗ್ದೃಷ್ಟಿಗಳಿಲ್ಲ.

ಇಂದಿನ ಜನಾಂಗ ಮಿಥ್ಯಾ ದೇವ ದೇವಿಯ ಆರಾಧನೆ ಭಕ್ತಿ ಮಾಡುವುದನ್ನು ಬಿಡಲಿ-ತೀರ್ಥಂಕರರ ಜಿನದೇವರ ಆರಾಧನಾ ನಂತರ ಜಿನಶಾಸನ ದೇವ ದೇವಿಯರನ್ನು ಆರಾಧನೆ ಇಷ್ಟಾರ್ಥವನ್ನು ಈಡೇರಿಸಿಕೊಳ್ಳಲೆಂಬ ಉದ್ದೇಶದಿಂದ ಅನೇಕ ನಿರ್ಗ್ರಂಥಾಚಾರ್ಯರುಗಳೇ ಅನೇಕ ಸ್ಥಳಗಳಲ್ಲಿ ಯಕ್ಷ-ಯಕ್ಷಿಯರನ್ನು



ಪ್ರತಿಷ್ಠಾಪಿಸಿದ್ದಾರೆ.

ಶ್ರೀ ಸಮಂತಭದ್ರಾಚಾರ್ಯರು ಸಿಂಹನಗದ್ದೆ ಕ್ಷೇತ್ರದಲ್ಲಿ ಜ್ವಾಲಾಮಾಲಿನಿ ದೇವಿಯನ್ನು ಪ್ರತಿಷ್ಠಾಪಿಸಿದ್ದಾರೆ.

ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಯಲ್ಲಿ ಮಠಬಸದಿಯಲ್ಲಿ ಪದ್ಮಾವತಿ ದೇವಿ ಕೂಷ್ಮಾಂಡಿನಿಯರ ಪ್ರತಿಷ್ಠಾಪನೆಯನ್ನು ಶ್ರೀ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಗಳೇ ಮಾಡಿದ್ದಾರೆ.

ಹುಂಚದಲ್ಲಿ ಶ್ರೀ ಸಿದ್ಧಾಂತ ಕೀರ್ತಿ ಆಚಾರ್ಯರು ಪದ್ಮಾವತಿದೇವಿ ಯನ್ನು ಪ್ರತಿಷ್ಠಾಪಿಸಿದ್ದಾರೆ.

ಆದರೆ ಒಂದು ಮಾತು ಇವರು ಕೇವಲ ಅಮ್ಮನವರ ಅಥವಾ ಯಕ್ಷ-ಯಕ್ಷಿಯರನ್ನಷ್ಟೇ ಪ್ರತಿಷ್ಠಾಪಿಸಿಲ್ಲ ಅಲ್ಲಿ ತೀರ್ಥಂಕರರ-ಜಿನೇಂದ್ರರ ಜಿನಾಲಯಗಳಲ್ಲಿ ಜಿನಬಿಂಬಗಳನ್ನು ಸ್ಥಾಪಿಸಿದ್ದಾರೆ. ಇದರ ಉದ್ದೇಶ ಮೊದಲು ಜಿನಾರಾಧನೆ ನಂತರ ಶಾಸನ ದೇವ ದೇವಿಯರ ಆರಾಧನೆ ಮಾಡಲಿ ಎಂದು. ಹೀಗೆಯೇ ಆಚಾರ್ಯ ಪೂಜ್ಯಪಾದರೂ ಭಗವದ್ಗುಣಭದ್ರಾಚಾರ್ಯರೂ, ಸೋಮದೇವ ಸೂರಿಗಳೂ, ಅಭಯ ನಂದಿಗಳೂ, ಇಂದ್ರ ನಂದಿಗಳೂ, ಸಕಲಕೀರ್ತಿ ಆಚಾರ್ಯರೂ, ದೇವಸೇನರೂ, ಜಿನಸೇನರೂ, ವಸುನಂದಿ ಮುಂತಾದ ಮಹಾನ್ ಆಚಾರ್ಯರು ರಚಿಸಿರುವ ಪೂಜಾ ಪಾಠಗಳಲ್ಲಿ ಜಿನೇಂದ್ರ, ಜಿನಶಾಸನ, ಜಿನಗುರು ಪೂಜೆಯ ನಂತರ ಶಾಸನ ದೇವತೆಗಳ ಪೂಜಾ ವಿಧಾನಗಳನ್ನು ಹೇಳಿದ್ದಾರೆ.

ಶ್ರೀ ಅಕಲಂಕ ಸಂಹಿತೆಯಲ್ಲಿ ಪಂಚಾಚಾರ ಷೋಡಶೋಪಚಾರಗಳ ಪೂರ್ಣ ವಿವರ ಸಿಗುತ್ತದೆ.

(ಇತ್ತೀಚೆಗೆ ಸ್ವರ್ಗ ವಾಸಿಗಳಾದ ಆಚಾರ್ಯ ಮಹಾವೀರ ಕೀರ್ತಿ ಮುನಿಗಳು ಪದ್ಮಾವತಿ ಯಕ್ಷದೇವಿಯಲ್ಲಿ ನಿಷ್ಠೆ ಇಟ್ಟಿದ್ದರು. ಇವರು ಮಹಾನ್ ತಪಸ್ವಿಗಳೂ ಆಗಮನಿಷ್ಠರೂ ಆಗಿದ್ದರೂ.)

ಯಕ್ಷ-ಯಕ್ಷಿಯರ ಪ್ರಭಾವನೆ ಇರುವ ಸ್ಥಳಗಳಲ್ಲೆಲ್ಲಾ ಭಟ್ಟಾರಕರ ಪೀಠಗಳಿರುವುದು ಒಂದು ಗಮನಿಸಬೇಕಾದ ವಿಷಯ. ಇವರು ಭಕ್ತರ ಕಷ್ಟ ಸುಖಗಳನ್ನು ವಿಚಾರಿಸಿ ಖಾಯಿಲೆ ಕಸಾಲೆ ನಿವಾರಣೆ, ತೊಂದರೆ ತಾಪತ್ರಯಗಳ ನಿವಾರಣೆ ಮಾಡುವಂತಹ ಮಂತ್ರೋಪದೇಶ ಮಾಡಿ ಯಕ್ಷ ಯಕ್ಷಿಯರ ಪೂಜಾ ಪ್ರಸಾದವನ್ನು ನೀಡಿ ನಿವಾರಿಸುತ್ತಿದ್ದರು. ಅವು ಶ್ರಾವಕಭಕ್ತರನ್ನು ಆಕರ್ಷಿಸಿ ಭಕ್ತಿ

ಭಾವನೆ ಮಾಡುವ, ದಾನಧರ್ಮ ಮಾಡುವ, ಧರ್ಮಪ್ರಭಾವನೆ ಮಾಡುವ ಕೇಂದ್ರಗಳಾಗಿದ್ದವು. ಆ ಪರಿಪಾಠವನ್ನು ಈಗಲೂ ಅನೇಕ ಮಠಗಳು ನಡೆಸಿಕೊಂಡು ಬಂದು ಧರ್ಮ ಪ್ರಭಾವನೆ ಮಾಡುತ್ತಿವೆ.

ಪ್ರಾಚೀನ ಜಿನಾಲಯಗಳಲ್ಲಿ ಜಿನಬಿಂಬದ ಅಕ್ಕಪಕ್ಕದಲ್ಲಿ ಯಕ್ಷ ಯಕ್ಷಿಯರ ಬಿಂಬಗಳನ್ನು ಕೆತ್ತಿದ್ದಾರೆ. ದಕ್ಷಿಣದ ಎಲ್ಲಾ ಜಿನಾಲಯಗಳಲ್ಲೂ ಯಕ್ಷ ಯಕ್ಷಿಯರನ್ನು ಕಾಣಬಹುದು. ಉತ್ತರದಲ್ಲಿ ಕೂಡ ದೆಹಲಿಯ ಲಾಲಮಂದಿರದಲ್ಲಿ ಪದ್ಮಾವತಿ ಅಮ್ಮನವರ ಅರ್ಚನೆ ಉಂಟು. ಜಬ್ಬಲಪುರ, ಶಿವನಿ, ಶಿಖರ್‌ಜಿ, ನಾಗಪುರಗಳ ಜಿನಮಂದಿರಗಳಲ್ಲಿ ಮತ್ತಿತರ ಜಿನಶಾಸನ ದೇವ ದೇವಿಯರ ಪೂಜಾ ವಂದನೆಯ ಕ್ರಿಯಾಚರಣೆಯುಂಟು.

ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿ ಸಾಗರ ಮಹಾರಾಜರೇ ಆದಿಯಾಗಿ ಎಲ್ಲಾ ಆಚಾರ್ಯರೂ ಶಾಸನದೇವತೆಗಳಿಗೆ ಮಾಡುವ ಭಕ್ತಿ ಪೂಜೆಗೆ ವಿರೋಧವನ್ನು ಮಾಡಿರಲಿಲ್ಲ.

ವ್ಯವಹಾರವನ್ನು ಬಿಟ್ಟು ನಿಶ್ಚಯಧರ್ಮವನ್ನು ಒಮ್ಮೆಯೇ ಸಾಧಿಸಲಾಗುವುದಿಲ್ಲ. ಆದರೂ ಮಿಥ್ಯೆಯನ್ನು ಬಿಟ್ಟು ಸಮ್ಯಕ್ತ್ವವನ್ನು ಅರಿತು ಯಥಾವಿಧಿಯನ್ನು ತಿಳಿದು ಆಚರಿಸಿದರೆ ಆ ವ್ಯವಹಾರವೇ ನಿಶ್ಚಯಕ್ಕೆ ಕಾರಣವಾಗುತ್ತದೆ.

ಇನ್ನೊಂದು ಪ್ರಶ್ನೆ : ಯಕ್ಷ ಯಕ್ಷಿಯರೇ ಮುಂತಾದ ಶಾಸನ ದೇವದೇವಿಯರು ಆಯುಧಪ್ರಾಣಿಗಳಾಗಿದ್ದಾರಲ್ಲಾ ಏಕೆ?

ಸಮಾಧಾನ : ಹೌದು ಅವರೇನು ವೀತರಾಗಿಗಳೇ? ಅವರು ಸಂಸಾರಿ ಜೀವಿಗಳೇ. ನಮ್ಮಲ್ಲಿ ರಾಜ ಮಹಾರಾಜರಿದ್ದಂತೆ ಪುಣ್ಯಜೀವಿಗಳು ಆದರೆ ಅವರು ಹಿಡಿದಿರುವ ಆಯುಧ ಅವರು ಜನ್ಮತಾಳಿರುವ ಲೋಕದ ಅವರ ಪದವಿಯ ಲಾಂಛನ. ಆ ಸ್ಥಳದ ಪದವಿಯ ರಿವಾಜು, ರೀತಿ ನೀತಿ ಅಂದಾಕ್ಷಣ ಅದರಿಂದ ಅದನ್ನು ಅವರು ದುರುಪಯೋಗ ಮಾಡುವುದಿಲ್ಲ. ಅದು ಅವರಿಗೆ ಇರುವ ಬಿರುದು ಬಾವಲಿ. ಅವರಿಗೂ ಆಯುಷ್ಯ ಉಂಟು. ಸುಖ ದುಃಖ ಉಂಟು, ಹರ್ಷ ವಿಷಾದಗಳುಂಟು ಆದರೂ ಸಮ್ಯಗ್ದೃಷ್ಟಿಗಳಾದುದರಿಂದ ಇರುವ ಪುಣ್ಯಪದವಿಯನ್ನು ಸದುಪಯೋಗ ಮಾಡಿಕೊಂಡು ಶಾಂತಿಯಿಂದ ಸತ್ಕಾಲಕ್ಷೇಪ ಮಾಡಿ ಅಲ್ಲಲ್ಲಿ ನಡೆಯುವ ಜಿನಧರ್ಮ ಪ್ರಭಾವನೆಯಲ್ಲಿ ಪಾಲ್ಗೊಳ್ಳುತ್ತಾರೆ.



# 67. ಧ್ಯಾನ ವಿಚಾರ

"ಏಕಾಗ್ರಶ್ಚಿಂತಾ ನಿರೋಧೋ ಧ್ಯಾನವಂತರ್ಮುಹೂರ್ತಾತ್" ಎಂಬಂತೆ ಮನಸ್ಸಿನ ಚಪಲತೆ, ಚಂಚಲತೆಯನ್ನು ತಡೆದು ಯಾವುದಾದರು ಒಂದು ವಿಷಯದ ಬಗ್ಗೆ ಸ್ವಲ್ಪ ಹೊತ್ತು ವಿಚಾರಮಗ್ನನಾಗುವುದು, ಭಾವಿಸುವುದು, ಚಿಂತನ ಮನನ ಮಾಡುವುದು ಧ್ಯಾನವೆನಿಸುತ್ತದೆ.

ಈ ಧ್ಯಾನವು ಮುಖ್ಯವಾಗಿ 3 ವಿಧವಾಗಿವೆ. 1. ಅಶುಭಧ್ಯಾನ, 2. ಶುಭಧ್ಯಾನ, 3. ಶುದ್ಧಧ್ಯಾನ. ಅಶುಭಧ್ಯಾನವು 2 ವಿಧವಾಗಿದೆ. 1. ಆರ್ತಧ್ಯಾನ, 2. ರೌದ್ರಧ್ಯಾನ. ಶುಭಧ್ಯಾನವೇ ಧರ್ಮಧ್ಯಾನ ಮತ್ತು ಶುದ್ಧಧ್ಯಾನವೇ ಶುಕ್ಲಧ್ಯಾನ.

**ಅಶುಭ ಧ್ಯಾನ :**

ಜೀವಿಗಳ ಕೆಟ್ಟಪರಿಣಾಮ, ದುಷ್ಟಸಂಕಲ್ಪ, ವಿಕಲ್ಪಗಳ ಮನೋಸ್ಥಿತಿಯೇ ಅಶುಭಧ್ಯಾನ. ಅಶುಭವಾದ ಭಾವನೆ, ಅಹಿತವಾದ ಆಚಾರ-ವಿಚಾರ, ದುರಾಲೋಚನೆ, ಕೆಟ್ಟ ಕಾರ್ಯ, ಮಾತು, ನಡತೆಗಳು, ಹೇಯವಾದ ವರ್ತನೆ, ಮುಂತಾದುವೆಲ್ಲಾ ಅಶುಭಧ್ಯಾನವೆನಿಸುತ್ತವೆ. ಇದರ ಪರಿಣಾಮ ದುಃಖ, ಅಶಾಂತಿ ಅನಾನುಕೂಲ, ಅಹಿತ. ಇಹಪರಗಳಲ್ಲಿ ದುರಿತ ದುಃಖಾದಿಗಳನ್ನು ಅನುಭವಿಸ ಬೇಕಾಗುವುದು.

ಅಶುಭಧ್ಯಾನದಲ್ಲಿ 2 ವಿಧ. 1. ಆರ್ತಧ್ಯಾನ, 2. ರೌದ್ರಧ್ಯಾನ.

**ಆರ್ತಧ್ಯಾನ :**

ಯಾರ ಪರಿಣಾಮವು, ಭಾವವು, ವಿಚಾರಗಳು, ಕಾರ್ಯಗಳು, ವರ್ತನೆಯು ಸದಾ ದುಃಖಮಯವಾಗಿರುವುದೋ ಯಾರು ದುಃಖ, ನೋವು, ಸಂಕಟ, ದುಗುಡ, ದುಮ್ಮಾನದಿಂದ ಕೂಡಿರುತ್ತಾರೋ. ಬಡತನ, ಮುಪ್ಪು, ರೋಗ, ಶತ್ರುಗಳ ಕಾಟ, ನಷ್ಟ, ಕಷ್ಟ ಕಾರ್ಪಣ್ಯ, ತಿರಸ್ಕಾರ, ಅವಮಾನ, ನಿಂದನೆ ಮುಂತಾದವುಗಳಿಂದ ಗೋಳಾಡುತ್ತಾರೋ ಕೊರಗುತ್ತಾರೋ ಅಂತಹವನ ಸ್ಥಿತಿ ಸದಾ ದೀನಹೀನ

ವಾಗಿರುತ್ತದೆ. ಇದು ಅಶುಭವಾದುದು. ಇದೇ ಆರ್ತಧ್ಯಾನ.

**ಆರ್ತಧ್ಯಾನದಲ್ಲಿ 4 ಭೇದಗಳಿವೆ.**

1. ಇಷ್ಟವಿಯೋಗ, 2. ಅನಿಷ್ಟಸಂಯೋಗ, 3. ವೇದನೆ, 4. ನಿದಾನ.

**ಇಷ್ಟವಿಯೋಗ ಆರ್ತಧ್ಯಾನ :** ತನಗೆ ಬೇಕಾದುದು, ತನಗೆ ಪ್ರಿಯವಾದುದು, ತನಗೆ ಅನುಕೂಲವಾದುದು. ಇಷ್ಟವಾದುದು ಆದ ಧನ, ಕನಕ, ಮನೆ-ವಸ್ತು, ವಾಹನ, ಬಂಧು ಬಳಗ, ಒಡವೆ-ಸಿರಿ, ಸಂಪದ, ವಸ್ತ್ರ ಮುಂತಾದವುಗಳು ವಿಯೋಗವಾದಾಗ, ತನ್ನನ್ನು ಬಿಟ್ಟುಹೋದಾಗ, ತನ್ನ ಕೈ ತಪ್ಪಿಹೋದಾಗ, ವ್ಯಾಪಾರದಲ್ಲಿ ನಷ್ಟವಾದಾಗ, ಕಳೆದುಹೋದಾಗ ಅವುಗಳನ್ನೇ ನೆನೆದು ದುಃಖಿಯಾಗುವುದೂ, ಕೊರಗುವುದೂ, ಚಿಂತೆ ಮಾಡುವುದು ಮುಂತಾದುವು ಇಷ್ಟವಿಯೋಗ ಆರ್ತಧ್ಯಾನವಾಗಿದೆ.

**ಅನಿಷ್ಟ ಸಂಯೋಗ ಆರ್ತಧ್ಯಾನ :** ತನಗೆ ಬೇಡವಾದ, ಇಷ್ಟವಿಲ್ಲದ್ದು ಬಂದು ಒದಗಿದರೆ, ಶತ್ರುಗಳಿಂದ ಆಕ್ರಮಣವಾದರೇ, ನಷ್ಟವಾದರೆ, ಬಡತನ ಬಂದರೆ, ಛಳಿ, ಮಳೆ, ಗಾಳಿಗಳನ್ನು ಸಹಿಸಲಾಗದಿದ್ದರೆ. ರೋಗ ರುಜಿನಗಳು ಉಂಟಾದರೆ ಅಪಮಾನ, ನಿಂದನೆಗಳಾದರೆ ಇವನ್ನು ಸಹಿಸದೆ ಮನೋವ್ಯಾಕುಲನಾಗಿ ಕೊರಗುವುದು. ಚಿಂತೆ ಮಾಡುವುದು, ದುಃಖಿಸುವುದು ಅನಿಷ್ಟ ಸಂಯೋಗ ಆರ್ತ ಧ್ಯಾನವಾಗಿದೆ.

**ವೇದನಾ ಆರ್ತಧ್ಯಾನ :** ತನಗೆ ಕರ್ಮವಶಾತ್ ರೋಗ ಬಂದರೆ, ದೈಹಿಕ ಬಾಧೆಯಾದರೆ, ಅಂಗಹೀನವಾದರೆ, ಅಪಘಾತವಾದರೆ ಯಾರಿಂದಲಾದರೂ ಹೊಡೆತ, ಬೈಗುಳ, ಅಪಮಾನವಾದರೆ ಮನಸ್ಸಿಗೆ-ದೇಹಕ್ಕೆ ವೇದನೆಯಾಗುವುದು. ಅದನ್ನು ಸಹಿಸಲಾರದೆ ಕೊರಗುವುದು, ಚಿಂತೆಗೀಡಾಗುವುದು, ದುಃಖಿಯಾಗುವುದು ವೇದನಾ ಆರ್ತಧ್ಯಾನವಾಗಿದೆ.

**ನಿದಾನ ಆರ್ತಧ್ಯಾನ :** ತನಗೆ ಇಂಥಾದ್ದಾಗಬೇಕು, ಹೆಚ್ಚು ಲಾಭ ಬರಬೇಕು. ತಾನು ಮಾಡುವ ದಾನ-ಪೂಜೆಗಳಿಂದ ತನಗೆ ಬಹಳ ಸಿರಿಸಂಪದ-ಗತಿ-ಸಿಗಬೇಕು. ತಾನೇ ಸುಖಿಯಾಗಿರಬೇಕು. ತನಗೇ ಜಯವಾಗಬೇಕು. ತನಗೇ ಹೆಚ್ಚಿನ ಪದವಿ ಆಸ್ತಿ ಅಂತಸ್ತು, ಶ್ರೀಮಂತಿಕೆಗಳು ದೊರೆಯಬೇಕು ಎಂದು ಸದಾ ಚಿಂತಿಸುವುದೇ ನಿದಾನ ಆರ್ತಧ್ಯಾನವಾಗಿದೆ.

ಹೀಗೆ ಆರ್ತಧ್ಯಾನವು ಅಶುಭ ಧ್ಯಾನವಾಗಿದೆ. ಇದರಿಂದ ಮನಸ್ಸು



ಸ್ತಿಮಿತವಿರುವುದಿಲ್ಲ. ಅಶಾಂತಿ-ಅಸೌಖ್ಯವಾಗುತ್ತದೆ. ದುರ್ಭಾವ, ದುರಾಲೋಚನೆ, ಮನೋವಿಕಾರ, ಪಾಪಸಂಚಯ ದುರ್ಗತಿ ಉಂಟಾಗುತ್ತದೆ. ಇವನು ಮಿಥ್ಯಾ ದೃಷ್ಟಿಯಾಗಿರುತ್ತಾನೆ. ಬಹಿರಾತ್ಮನೆನಿಸುತ್ತಾನೆ. ಕೊರಗಿ ಕೊರಗಿ ದುಃಖದಿಂದ ಸತ್ತು ತಿರ್ಯಗ್ಗತಿಯಲ್ಲಿ ಹುಟ್ಟುತ್ತಾನೆ. ಇಂತಹವನು ಅಧರ್ಮಿಯೂ, ಅನಾಚಾರಿಯೂ, ಅಜ್ಞಾನಿಯೂ, ಚಪಲಚಿತ್ತನೂ, ದೀನದರಿದ್ರನೂ, ಅತೃಪ್ತನೂ ಆಗಿರುತ್ತಾನೆ. ಆದ್ದರಿಂದ ಆರ್ತಧ್ಯಾನ ಮಾಡಬಾರದು.

**ರೌದ್ರ ಧ್ಯಾನ :** ಯಾರು ಹಿಂಸೆ, ಸುಳ್ಳು, ಕಳ್ಳತನ, ವ್ಯಭಿಚಾರ, ಆರಂಭ ಪರಿಗ್ರಹಗಳೆಂಬ ಪಂಚ ಪಾಪ ಕಾರ್ಯದಲ್ಲಿ ನಿರತನಾಗಿರುತ್ತಾನೋ, ಯಾರಲ್ಲಿ ಕರುಣೆ-ದಯೆ, ಅನುಕಂಪ, ತಾಳ್ಮೆ ಇಲ್ಲವೋ, ಯಾರು ಸದಾ ಕೋಪ, ತಾಪ, ಸಿಟ್ಟು, ಸಿಡುಕು, ಒರಟುತನ, ಕ್ರೌರ್ಯ ಮುಂತಾದ ಅಶುಭವೂ, ಕೆಟ್ಟದ್ದೂ ಆದ ದುಷ್ಪರಿಣಾಮದಿಂದಿರುವುದೋ ಅಂತಹವರ ಈ ಭಾವನೆಗೆ ವರ್ತನೆಗೆ, ರೌದ್ರಧ್ಯಾನವೆನ್ನುತ್ತಾರೆ. ಸದಾ ಇತರರ ಮೇಲೆ ಕೋಪ ಮಾಡಿಕೊಂಡು, ಗಂಟುಮೋರೆ ಹಾಕಿಕೊಂಡು. ಇತರರಿಗೆ ಹಿಂಸೆ-ನೋವು ಮಾಡುವ ಭಾವನೆ ಇರುವುದೋ ಅದೇ ರೌದ್ರಧ್ಯಾನ. ಇಂತಹ ಸಿಡುಕನು, ಕೋಪಿಷ್ಠನು ಸದಾ ಗರ್ವ, ಜಂಭ, ಮದ, ಮಸ್ತಿ, ಕ್ರೋಧಕಷಾಯಿಯಾಗಿ ಬೀಗಿ ಮೆರೆಯುತ್ತಾನೆ. ದರ್ಪತೋರಿಸುತ್ತಾನೆ. ಕೋಪಿಯು ಕೊಲೆ, ಸುಲಿಗೆ ಮುಂತಾದ ಕ್ರೂರಕಾರ್ಯ, ಭಾವನೆ ಉಳ್ಳವನಾಗಿರುತ್ತಾನೆ. ಈ ಕೋಪಿಷ್ಠನ, ದುಷ್ಟನ ಮನಸ್ಸೂ, ಮೈ, ಮಾತು-ಕಾರ್ಯಗಳು. ವಿಚಾರ, ಭಾವನೆಗಳು ಪರಿಣಾಮಗಳೂ ಅಶುಭವಾಗಿ ಬಹು ಕಠಿಣವೂ, ಅಶುಭವೂ, ವಿಕಾರವೂ, ಆತ್ಮ ಘಾತಕವೂ ಆಗಿರುತ್ತವೆ. ಆತ ನಿರ್ದಯಿಯಾಗಿರುತ್ತಾನೆ. ಧರ್ಮ-ಕರ್ಮ-ಪಾಪ-ಪುಣ್ಯಗಳ ವಿಚಾರ ಮಾಡುವುದಿಲ್ಲ. ಮಾತಾಡಿಸಿದರೆ ಹಾವಿನಂತೆ ಮೇಲೆರಗುತ್ತಾನೆ. ಕೋಪಿಯು ಅರೆ ಹುಚ್ಚನಾಗಿರುತ್ತಾನೆ. ಈತ ಮಿಥ್ಯಾದೃಷ್ಟಿಯೂ, ಅಧರ್ಮಿಯೂ, ದುರಾಚಾರಿಯೂ ಹಿತಾಹಿತಗಳನ್ನು ತಿಳಿಯದವನೂ ಆಗಿರುತ್ತಾನೆ. ರೌದ್ರಧ್ಯಾನಿಯು ನರಕಾದಿ ದುರ್ಗತಿಗೆ ಸಾಗುತ್ತಾನೆ.

**ಈ ರೌದ್ರಧ್ಯಾನವು ನಾಲ್ಕು ವಿಧವಾಗಿದೆ.**

1. ಹಿಂಸಾನಂದ, 2. ಮೃಷಾನಂದ, 3. ಚೌರ್ಯಾನಂದ, 4. ಪರಿಗ್ರಹಾನಂದೆ.

**ಹಿಂಸಾನಂದ ರೌದ್ರ ಧ್ಯಾನ :** ಕೋಪ ತಾಪಕ್ಕೆ ಒಳಗಾದವರು ಕಠಿಣ

ಚಿತ್ತರಾಗಿರುತ್ತಾರೆ. ಪರರಿಗೆ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ಮಾಡುತ್ತಾರೆ. ಅವರ ಮನಸ್ಸಿನಲ್ಲಿ ವಿಚಾರದಲ್ಲಿ ಸದಾ ದುರ್ಭಾವವಿರುತ್ತದೆ. ಹಿಂಸೆ ಮಾಡುವ ಭಾವನೆ ಇರುತ್ತದೆ. ಮಾತೆತ್ತಿದರೆ ಹಿಡಿ, ಹೊಡಿ-ಬಡೀ, ಕೊಲ್ಲು, ಕತ್ತರಿಸು ಎಂಬ ದುರ್ಭಾಷೆ ಇರುತ್ತದೆ. ಪರರಿಗೆ-ಪ್ರಾಣಿಗಳಿಗೆ ಪೀಡೆ, ಹಿಂಸೆ, ನೋವುಗಳನ್ನು ಉಂಟು ಮಾಡುವುದೇ ವೃತ್ತಿಯಾಗಿರುತ್ತದೆ. ಇಂತಹವರಲ್ಲಿ ದಯೆ, ಕರುಣೆ, ಧರ್ಮ, ಉಪಕಾರ, ಕ್ಷಮೆ ಇರುವುದೇ ಇಲ್ಲ. ಇಂತಹ ಹಿಂಸಾಪರಿಣಾಮದಿಂದ ಮತ್ತು ತಾವು ನೀಡುವ ಹಿಂಸೆಯಿಂದ ಜನರು-ಪ್ರಾಣಿಗಳು ನರಳುತ್ತಾ ಸಂಕಟ ಪಡುತ್ತಿರುವುದನ್ನು ನೋಡಿ ಆನಂದ ಪಡುವ ಸ್ವಭಾವದವರ ಭಾವನೆಗೆ ಹಿಂಸಾನಂದ ರೌದ್ರ ಧ್ಯಾನವೆನ್ನುತ್ತಾರೆ.

**ಮೃಷಾನಂದ ರೌದ್ರ ಧ್ಯಾನ :** ಸುಳ್ಳು, ಮೋಸ, ವಂಚನೆ, ಮಾಯಾಚಾರ, ಕಪಟದಿಂದ ವರ್ತಿಸುವುದು. ತನ್ನ ಈ ಕೃತ್ಯಗಳಿಂದ ಪರರು ದುಃಖಿಸುವುದನ್ನು ಕಂಡು ಆನಂದ ಪಡುವುದೂ, ಸುಳ್ಳುಸಾಕ್ಷಿ ಹೇಳುವುದೂ, ಮೂಗರ್ಜಿ ಬರೆಯುವುದೂ ಮೃಷಾನಂದರೇ ಆಗಿದೆ, ಹಾಗೆಯೇ ದುರಾಲೋಚನೆಯಿಂದ ಇತರರಿಗೆ ಹೇಗೆ ಮೋಸ ಪಡಿಸಬಹುದು ಎಂಬ ದುರ್ಧ್ಯಾನದಲ್ಲಿರುವುದೂ, ಸುಳ್ಳು-ಪೊಳ್ಳು ಜೀವನ ನಡೆಸುತ್ತಾ ಆನಂದ ಪಡುವವರ ಪರಿಣಾಮಕ್ಕೆ ಮೃಷಾನಂದ ರೌದ್ರಧ್ಯಾನವೆನ್ನುತ್ತಾರೆ. ಇವರು ಪರರನ್ನು ಮೋಸಗೊಳಿಸುತ್ತಾ ತನ್ನನ್ನು ತಾನು ಬುದ್ಧಿವಂತನೆಂದು ಭಾವಿಸುತ್ತಾರೆ. ತನ್ನ ಮೋಸ-ಮಾಯಾಚಾರ ಸಫಲವಾಗದಿದ್ದರೆ ಅವರ ಮೇಲೆ ಕೋಪಿಸಿಕೊಂಡು ಅವರ ಮೇಲೆ ಕಿಡಿಕಾರುತ್ತಾರೆ. ಸೇಡುತೀರಿಸಿಕೊಳ್ಳುತ್ತಾರೆ.

**ಸ್ತೇಯಾನಂದ ರೌದ್ರ ಧ್ಯಾನ :** ಪರರ ವಸ್ತುಗಳನ್ನು, ತನ್ನದಲ್ಲದ್ದನ್ನು ಅಪಹರಿಸುವುದರಲ್ಲೇ ಆನಂದವನ್ನು ಅನುಭವಿಸುವುದೂ, ಕಳ್ಳತನವನ್ನು ಹೇಗೆ ಮಾಡಬೇಕೆಂದು ಚಿಂತೆ ಮಾಡುವುದೂ, ತನ್ನ ಕಳ್ಳತನದ ವೃತ್ತಿಗೆ ಅಡಚಣೆಯಾದರೆ ಕೋಪ ಮಾಡಿ-ಕೊಲೆ-ಹಿಂಸೆ ಮಾಡುವುದೂ, ಪೂರ್ವಾಚಾರ್ಯರ ಮೋಸ, ನೌಕರಿಯಲ್ಲಿ ಲೋಪ ಮಾಡುವುದೂ, ಪೂರ್ವಾಚಾರ್ಯರ ಶಾಸ್ತ್ರದ ವಿಷಯಗಳನ್ನು ತನಗೆ ತಕ್ಕಂತೆ ಬದಲಾಯಿಸುವುದೂ, ಕಳ್ಳತನ ಮಾಡುವುದು, ದಾನ-ಪೂಜೆಗೆಂದು ಕೊಟ್ಟ ಧರ್ಮದ ಧನವನ್ನು ಪೂಜಾಕಾರ್ಯಕ್ಕೆ ಬಂದ ಧನವನ್ನು ದುರ್ವ್ಯಯ ಮಾಡುವುದೂ ಮುಂತಾದ ಕುತಂತ್ರದ ಭಾವನೆ-ಚಿಂತನೆ-ವಿಚಾರ- ಆಚಾರಗಳಲ್ಲೇ ತೊಡಗಿ ಆನಂದಪಡುವ ಪರಿಣಾಮಕ್ಕೆ ಸ್ತೇಯಾನಂದ ರೌದ್ರಧ್ಯಾನವೆನ್ನುತ್ತಾರೆ.



**ಪರಿಗ್ರಹಾನಂದ ರೌದ್ರಧ್ಯಾನ :** ತನ್ನ ಅಗತ್ಯತೆಗಿಂತ ಹೆಚ್ಚಾದ ವಸ್ತುಗಳನ್ನು ಸಂಗ್ರಹಿಸುವುದರಲ್ಲೇ ಆನಂದ ಪಡುವುದೂ, ಭೋಗೋಪಭೋಗ ವಸ್ತುಗಳನ್ನು ಹೇರಳವಾಗಿ ಸಂಗ್ರಹಿಸುವುದೂ, ಭೂಮಿ, ಮನೆ, ಹಣ, ಒಡವೆ, ವಸ್ತ್ರ ಮುಂತಾದುವುಗಳನ್ನು ಸಂಗ್ರಹಿಸುವುದರಲ್ಲಿ ತಲ್ಲೀನನಾಗುವುದೂ, ತನ್ನ ಸಂಗ್ರಹ ಕಾರ್ಯಕ್ಕೆ ಅಡಚಣೆಯಾದರೆ ಕೋಪಿಸಿಕೊಳ್ಳುವುದೂ ಮುಂತಾದ ಅಶುಭ ಪರಿಣಾಮಕ್ಕೆ ಪರಿಗ್ರಹಾನಂದ ರೌದ್ರಧ್ಯಾನವೆನ್ನುತ್ತಾರೆ. ಇಂತಹ ಎಲ್ಲಾ ರೀತಿಯ ರೌದ್ರ ಪರಿಣಾಮದಿಂದ ಮನೋವಿಕಾರವಾಗಿ ಆತ್ಮಘಾತವಾಗುವುದು, ಹಿಂಸೆಯಾಗುವುದು. ಪಾಪ ಕರ್ಮಬಂಧವಾಗುವುದು. ಇದರಿಂದ ತನಗೂ ಇತರರಿಗೂ ಕೆಡುಕಾಗುವುದು. ನರಕಾದಿ ದುರ್ಗತಿಗೆ ಸಾಗಬೇಕಾಗುವುದು. ರೌದ್ರ ಧ್ಯಾನಿಯು ಸದಾ ಮಿಥ್ಯಾದೃಷ್ಟಿಯಾಗಿರುತ್ತಾನೆ. ಅವನಿಂದ ವ್ರತ, ನೇಮ ನಿಯಮ ಮಾಡಲಾಗುವುದಿಲ್ಲ, ಮಾಡಿದರೂ ಸಫಲವಾಗುವುದಿಲ್ಲ. ಕೋಪವು ಸರ್ವಕಾರ್ಯ ಹಾನಿಕಾರವೂ, ಪಾಪದ ಕೂಪವೂ ಆಗಿರುತ್ತದೆ. ರೌದ್ರ ಧ್ಯಾನಿಯು ಬಹಿರಾತ್ಮನಾಗಿರುತ್ತಾನೆ.

ಹೀಗೆ ಆರ್ತಧ್ಯಾನ, ರೌದ್ರ ಧ್ಯಾನಗಳು ಅಶುಭಧ್ಯಾನಗಳು, ದುರ್ಧ್ಯಾನಗಳು, ಆತ್ಮಘಾತಕಾರಿಯಾದವುಗಳು ಇಂತಹ ಪರಿಣಾಮ ಒಳ್ಳೆಯದಲ್ಲ, ಇದರಿಂದ ಆತ್ಮೋನ್ನತಿಯಾಗುವುದಿಲ್ಲ, ಆದ್ದರಿಂದ ಯಾರೂ ಆರ್ತ ರೌದ್ರ ಧ್ಯಾನ ಮಾಡಬಾರದು.

## ಶುಭ ಧ್ಯಾನ

**ಧರ್ಮಧ್ಯಾನ :** ಇದು ಶುಭ ಧ್ಯಾನವಾಗಿದೆ.

ಧರ್ಮಭಾವನೆ, ಧರ್ಮಕಾರ್ಯ ಪ್ರವೃತ್ತಿ, ಸತ್ಪರಿಣಾಮ, ಉತ್ತಮವಾದ ಆಚಾರ, ವಿಚಾರ, ಅಹಿಂಸಾ ಪಾಲನೆ, ಪ್ರಾಣಿ ದಯೆ, ಅನುಕಂಪ, ತಾಳ್ಮೆ, ಕ್ಷಮಾಭಾವ, ಸಹನೆ-ಸಮತಾ ಭಾವ, ಸರಳ ಜೀವನ ವೃತ್ತಿ, ಧರ್ಮಶ್ರದ್ಧೆ, ಜಿನದೇವ, ಗುರು, ಶಾಸ್ತ್ರಗಳಲ್ಲಿ ಶ್ರದ್ಧಾಭಕ್ತಿ, ವ್ರತ ನೇಮನಿಷ್ಠೆ, ಸತ್ಕಾಲಕ್ಷೇಪ, ಮಾನವೀಯ ಗುಣಧಾರಣೆ, ಸದ್ಭಾವನೆ, ನಿರ್ಮಲಾಂತಃಕರಣ, ಸ್ವಾಧ್ಯಾಯ, ಸಂಯಮ, ಸಜ್ಜನಿಕೆ, ಸೌಜನ್ಯ, ಪರೋಪಕಾರಿ ಮನೋಭಾವ ಮುಂತಾದ ಸತ್ಕಾರ್ಯದಲ್ಲಿ ತೊಡಗುವುದೂ ಮತ್ತು ಇವುಗಳನ್ನು ರಕ್ಷಿಸಿಕೊಳ್ಳುವುದರಲ್ಲಿ ಎಚ್ಚರಿಕೆಯಿಂದಿರುವ ಭಾವನೆ, ಚಿಂತನೆ, ಪರಿಣಾಮವೇ ಧರ್ಮ ಧ್ಯಾನವಾಗಿದೆ.

ಇಂತಹ ಪರಿಣಾಮವುದವರು ಮಂದಕಷಾಯಿಗಳಾಗಿರುತ್ತಾರೆ. ಪಾಪಕಾರ್ಯಗಳಿಂದ ನಿವೃತ್ತರಾಗಿರುತ್ತಾರೆ. ಮೋಹವನ್ನು ತಗ್ಗಿಸಿ ಕೊಂಡಿರುತ್ತಾರೆ. ಕೋಪ, ತಾಪ, ದುಃಖ ದುಮ್ಮಾನಗಳಿಂದ ದೂರವಿರುತ್ತಾರೆ. ಆರ್ತ ರೌದ್ರ ಧ್ಯಾನ ಮಾಡುವುದಿಲ್ಲ. ಧರ್ಮಕಾರ್ಯಾಸಕ್ತರಾಗಿರುತ್ತಾರೆ. ಸಮ್ಯಗ್ದೃಷ್ಟಿಗಳಾಗಿರುತ್ತಾರೆ. ಜ್ಞಾನಿಗಳಾಗಿರುತ್ತಾರೆ.

**ಧರ್ಮ ಧ್ಯಾನದಲ್ಲಿ 4 ಭೇದಗಳಿವೆ :**

1. ಆಜ್ಞಾವಿಚಯ, 2.ಅಪಾಯವಿಚಯ, 3. ವಿಪಾಕವಿಚಯ, 4. ಸಂಸ್ಥಾನವಿಚಯ.

ವಿಚಯವೆಂದರೆ ಶೋಧನೆ, ಆಳವಾದ ಅಭ್ಯಾಸ, ಧರ್ಮ, ಚಿಂತನೆ ಎಂದರ್ಥ.

**ಆಜ್ಞಾವಿಚಯ** : ಜಿನೇಂದ್ರರು ಹೇಳಿರುವ ವಾಣಿ, ಉಪದೇಶ ತತ್ವಬೋಧೆ, ಮೋಕ್ಷ ಮಾರ್ಗ, ಪುರಾಣ ಪುಣ್ಯಚರಿತ್ರೆ, ವ್ರತನೇಮ ನಿಯಮಗಳು ಪ್ರಮಾಣವೆಂದೂ, ಇದು ಜಿನಾಜ್ಞೆ ಎಂದೂ ಮನ್ನಿಸಿ ಭಕ್ತಿ ಗೌರವದಿಂದ ಭಾವಿಸಿ ತಿಳಿದು ಪರಿಪಾಲಿಸುವುದು ಆಜ್ಞಾವಿಚಯ ಧರ್ಮ ಧ್ಯಾನವಾಗಿದೆ. ಜಿನ ಗುರುಗಳೂ, ಆಚಾರ್ಯರು, ವಿದ್ವಾಂಸರೂ, ಪಂಡಿತರೂ, ಜಿನವಾಣಿಯನ್ನು ಅನುಸರಿಸಿ ಬರೆದಿರುವ ಹೇಳುವ ವಿಷಯವನ್ನು ಅನುಮಾನ ಪಡದೆ, ವಿಕಲ್ಪವಿಲ್ಲದೆ, ಅದನ್ನು ಬದಲಾಯಿಸದೆ, ಅವನ್ನು ವಿಪರೀತವಾಗಿ ತಿಳಿಯದೆ ನಂಬಿ ಚಿಂತನ-ಮನನ ಮಾಡುವುದೂ, ಜೀವಾದಿ ತತ್ತ್ವಗಳ ಸ್ವರೂಪವನ್ನು ವಿಚಾರ ಪೂರ್ವಕವಾಗಿ ಭಾವಿಸಿ ತಿಳಿಯುವುದೂ ಜಿನಾಜ್ಞೆಯಾಗಿದೆ. ಕರ್ಮದ ಬಂಧ-ಮೋಕ್ಷಗಳ ಬಗ್ಗೆ ಶೋಧನಾ ಪೂರ್ವಕವಾಗಿ ಅರಿಯುವುದೂ ಆಜ್ಞಾ ವಿಚಯ ಧರ್ಮಧ್ಯಾನವಾಗಿದೆ.

**ಅಪಾಯ ವಿಚಯ ಧರ್ಮಧ್ಯಾನ** : ಮೇಲ್ಕಂಡ ತನ್ನ ನಂಬಿಕೆ, ಶ್ರದ್ಧೆ, ತಿಳಿವಳಿಕೆ, ಆಚರಣೆಗೆ ಅಪಾಯವಾಗುವ, ಅಡಚಣೆಯಾಗುವ ವಿಷಯಗಳ ಬಗ್ಗೆ ಎಚ್ಚರ ವಹಿಸಿ ಅವುಗಳನ್ನು ರಕ್ಷಿಸಿಕೊಳ್ಳುವ ಭಾವನೆ ಇರುವುದೂ, ಮಿಥ್ಯಾತ್ವ, ಅಜ್ಞಾನ, ಅನಾಚಾರ, ಅವ್ರತ, ಪ್ರಮಾದ, ಕಷಾಯಗಳಿಂದ ದೂರವಿರುವುದೂ ಪಂಚಪಾಪಕಾರ್ಯ ಮಾಡದಿರುವುದೂ, ತನ್ನ ಸಮ್ಯಕ್ತ್ವಕ್ಕೆ ಚ್ಯುತಿ ಬರದಂತೆ ಎಚ್ಚರವಾಗಿರುವುದು, ಸದಾ ಸದ್‌ವಿಚಾರಶೀಲನಾಗಿ ಸದ್ಧರ್ಮ ಭಾವನೆಯಲ್ಲಿರುವುದೇ ಅಪಾಯ ವಿಚಯ ಧರ್ಮ ಧ್ಯಾನವಾಗಿದೆ. ಕರ್ಮಾಸ್ರವ-ಬಂಧಗಳಿಂದ ಆತ್ಮಘಾತವಾಗದಂತೆ ಬಾಳುವುದು. ಕರ್ಮಬಂಧನದಿಂದ ಬಿಡುಗಡೆ ಹೊಂದಲು



ಉಪಾಯವನ್ನು ಕಂಡುಕೊಳ್ಳುವುದೂ, ಧಾರ್ಮಿಕನಾಗಿ, ವ್ರತಿಕನಾಗಿ ಆತ್ಮತತ್ತ್ವದಲ್ಲಿ ಶ್ರದ್ಧೆ ಇಡುವುದೂ ಅಪಾಯ ವಿಚಯ ಧರ್ಮಧ್ಯಾನವಾಗಿದೆ.

**ವಿಪಾಕ ವಿಚಯ ಧರ್ಮಧ್ಯಾನ** : ಪೂರ್ವದಲ್ಲಿ ಬಂಧಿಸಿಕೊಂಡ ಜ್ಞಾನಾವರಣಾದಿ ಕರ್ಮಗಳು ದ್ರವ್ಯ ಕ್ಷೇತ್ರ ಕಾಲ, ಭವ, ಭಾವಾದಿಗಳ ನಿಮಿತ್ತದಿಂದ ಫಕ್ವವಾಗಿ ಉದಯಕ್ಕೆ ಬಂದು ಫಲ ನೀಡುತ್ತವೆ. ಇದರಿಂದ ಸುಖದುಃಖಗಳುಂಟಾಗುತ್ತವೆ. ಆಗ ಹಿಗ್ಗದೆ-ಕುಗ್ಗದೆ ಸಮತೆಯನ್ನು ತಾಳ್ಮೆಯನ್ನು ಕಳೆದುಕೊಳ್ಳದೆ ಸ್ಥಿತ ಪ್ರಜ್ಞನಾಗಿ ಇವೆಲ್ಲಾ ಈ ಹಿಂದೆ ನಾನೇ ಬಂಧಿಸಿಕೊಂಡ ಪುಣ್ಯ-ಪಾಪಗಳ ಫಲವೆಂದು ತಿಳಿದು ಧರ್ಮಭಾವನೆಯಿಂದ ವಿಚಲಿತನಾಗದೆ ಇರುವುದೂ, ಸದಾ ಸತ್ಪರಿಣಾಮ ಸದ್ ವಿಚಾರ- ಸದಾಚಾರಶೀಲನಾಗಿರುವುದೂ ವಿಪಾಕ ವಿಚಯ ಧರ್ಮಧ್ಯಾನವಾಗಿದೆ.

**ಸಂಸ್ಥಾನ ವಿಚಯ ಧರ್ಮಧ್ಯಾನ** : ಜೀವಾದಿ ಷಟ್‌ದ್ರವ್ಯ ಭರಿತವಾದ ಈ ಲೋಕದ ಆಕಾರ-ವಿಸ್ತಾರ-ಭೇದ ಪ್ರಭೇದಗಳ ವಿವರದ ಬಗ್ಗೆ ಚಿಂತನೆ ಮಾಡುವುದು. ಸ್ವರ್ಗ-ನರಕ-ಮಾನವ, ತಿರ್ಯಂಚಗತಿಗಳೂ-ಇವುಗಳಿರುವ ಸ್ಥಾನಗಳ ವಿವರವನ್ನು ಕುರಿತು ವಿಚಾರ ಮಾಡುವುದು. ದ್ರವ್ಯಗಳ ಗುಣಪರ್ಯಾಯಗಳ ಬಗ್ಗೆ ವಿಮರ್ಶೆ ಮಾಡುವುದು. ಜೀವಗಳ ಏಳುಬೀಳುಗಳ ಬಗ್ಗೆ ಆಲೋಚಿಸುವುದೂ, ತಾನು ದುರ್ಗತಿಗೆ ಬೀಳದೆ ಉತ್ತಮ ಗತಿಗಳಲ್ಲಿ ಜನ್ಮ ತಾಳಿ ಕೊನೆಗೆ ಮೋಕ್ಷ ಪಡೆಯುವ ಗುರಿ ಹೊಂದುವುದೂ ಸಂಸ್ಥಾನ ವಿಚಯ ಧರ್ಮ ಧ್ಯಾನವಾಗಿದೆ.

ತನ್ನ ಜೀವಿತ ಕಾಲದಲ್ಲಿ ಧರ್ಮ ಧ್ಯಾನ, ಧರ್ಮಕಾರ್ಯ, ಧರ್ಮ ಪ್ರಭಾವನೆ, ಧರ್ಮಚಿಂತನೆ, ಧ್ಯಾನ-ಸ್ವಾಧ್ಯಾಯ ತತ್ತ್ವ ಚರ್ಚೆ, ಜಪ-ಭಜನೆ- ವ್ರತಪಾಲನೆಗಳ ಮೂಲಕ ತನ್ನ ಬಾಳನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಧರ್ಮಧ್ಯಾನಿಗೆ ಮೋಕ್ಷವೇ ಗುರಿಯಾಗಿರುತ್ತದೆ. ಇದು ಆತ್ಮಕಲ್ಯಾಣಕ್ಕೆ ಕಾರಣವಾಗಿರುವುದರಿಂದ ಕರ್ಮನಿರ್ಜರೆಗೂ ಪ್ರಾರಂಭಿಕ ಹಂತವಾಗಿರುತ್ತದೆ. ಧರ್ಮಧ್ಯಾನವು ಅವಿರತ ಸಮ್ಯಗ್ದೃಷ್ಟಿ ಎಂಬ 4ನೇ ಗುಣ ಸ್ಥಾನದಿಂದ 6ನೇ ಗುಣಸ್ಥಾನದವರೆಗೂ ಇರುತ್ತದೆ.

ಈ ಧರ್ಮಧ್ಯಾನದ ಮುಂದುವರಿದ ಹಂತದಲ್ಲಿ ನಾಲ್ಕು ವಿಭಾಗಗಳಿವೆ : 1. ಪದಸ್ಥ ಧರ್ಮಧ್ಯಾನ, 2. ಪಿಂಡಸ್ಥ ಧರ್ಮಧ್ಯಾನ, 3. ರೂಪಸ್ಥ ಧರ್ಮಧ್ಯಾನ, 4. ರೂಪಾತೀತ ಧರ್ಮಧ್ಯಾನ.

**ಪದಸ್ಥ ಧರ್ಮಧ್ಯಾನ :** ಪಂಚಪರಮೇಷ್ಠಿಗಳ ಪವಿತ್ರ ಣಮೋಕಾರ ಮಂತ್ರವನ್ನು ಭಕ್ತಿ ಭಾವದಿಂದ ಜಪಿಸುವುದು. ಅವುಗಳ ಪದಗಳ ಅರ್ಥವನ್ನು ತಿಳಿಯುವುದು, ಧ್ಯಾನಿಸುವುದು, ಭಜಿಸುವುದು, ಸ್ತುತಿಸುವುದು, ಪಂಚಪರಮೇಷ್ಠಿಗಳ ಗುಣ ಸ್ವರೂಪವನ್ನು ಚಿಂತನ-ಮನನ ಮಾಡುವುದು, ಜಿನೇಂದ್ರ ಭಗವಂತನ ಗುಣಗಾನ ಮಾಡುವುದು, ಅಂದರೆ ದೃಢವಾದ ದೈವಭಕ್ತಿ, ಶ್ರದ್ಧೆ, ಆರಾಧನೆ ಮಾಡುವುದು ಪದಸ್ಥ ಧರ್ಮ ಧ್ಯಾನವಾಗಿದೆ.

**ಪಿಂಡಸ್ಥ ಧರ್ಮಧ್ಯಾನ :** ಪರಿಶುದ್ಧನಾದ, ನಿರ್ದೋಷನಾದ ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳು, ಅರಿಹಂತರ, ಜಿನೇಂದ್ರ ಭಗವಂತನ, ಅತಿಶಯ ಮೂರ್ತಿಗಳನ್ನು ದರ್ಶನ ಮಾಡಿ. ಜಿನರ ಆಕಾರವನ್ನು ತನ್ನ ಅಂತರಂಗದಲ್ಲಿ ತುಂಬಿಕೊಂಡು ಧ್ಯಾನ ಮಾಡುವುದೂ, ಅಂತಹ ಆಕೃತಿಯಂತೆಯೇ ನನ್ನಾತ್ಮನೂ ಇದ್ದಾನೆಂದು ಭಾವಿಸುವುದು ಪಿಂಡಸ್ಥ ಧರ್ಮಧ್ಯಾನವಾಗಿದೆ. ಹಾಲಿನಲ್ಲಿ ತಪ್ಪುವಿರುವಂತೆ, ಹೂವಿನಲ್ಲಿ ಸುಗಂಧವಿರುವಂತೆ, ಬೆಲ್ಲದಲ್ಲಿ ಸಿಹಿ ಇರುವಂತೆ, ಕಟ್ಟಿಗೆಯಲ್ಲಿ ಬೆಂಕಿ ಇರುವಂತೆ ತನ್ನ ಶರೀರದಲ್ಲಿಯೂ ಜ್ಞಾನ-ದರ್ಶನ ಚೇತನಶಕ್ತನಾದ ಆತ್ಮನು ತುಂಬಿಕೊಂಡಿದ್ದಾನೆಂದೂ ಅದು ಎದುರಿಗಿರುವ ಜಿನಬಿಂಬದಂತೆ ಸ್ವಚ್ಛವೂ, ನಿರ್ಮಲವೂ, ನಿರ್ವಿಕಾರವೂ ಆಗಿದೆ ಎಂದು ಭಾವಿಸುವುದು ಪಿಂಡಸ್ಥಧರ್ಮಧ್ಯಾನವಾಗಿದೆ.

ಈ ಧ್ಯಾನದಲ್ಲಿ ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶವೆಂಬ ಪಂಚತತ್ತ್ವಗಳ ಧಾರಣವಿಧಾನವೂ, ಯೋಗಾಸನಗಳ ವಿಧಾನವೂ ಅಡಕವಾಗಿದೆ. ಅಂತರಂಗದಲ್ಲಿ ಪಂಚಪರಮೇಷ್ಠಿಗಳ ಸ್ವರೂಪಸೂಚಕವಾದ ಓಂಕಾರಾದಿ ಬೀಜಾಕ್ಷರಗಳನ್ನು ಕಲ್ಪಿಸಿಕೊಂಡು ಧ್ಯಾನ ಮಾಡುವುದೂ ಪಿಂಡಸ್ಥಧ್ಯಾನವಾಗಿದೆ.

**ರೂಪಸ್ಥಧರ್ಮಧ್ಯಾನ :** ಜಿನಮಂದಿರದಲ್ಲಿರುವ ಜಿನೇಂದ್ರ ಭಗವಂತನ ಬಿಂಬದಾಕೃತಿಯಲ್ಲಿ ನನ್ನಾತ್ಮನೂ ಇದ್ದಾನೆ. ಅವನು ಜ್ಞಾನಾನಂದಚೇತನ ನಾಗಿದ್ದಾನೆ. ಬಿಂಬವು ರೂಪೀ ಆದುದು. ನನ್ನಾತ್ಮನು ಅರೂಪಿಯಾದುದು. ಈ ರೂಪವನ್ನು ದರ್ಶನ-ಸ್ತವನ-ವಂದನ-ಕೀರ್ತನ, ಭಜನ ಜಪಧ್ಯಾನ ಭಾವನೆಗಳಿಂದ ನನ್ನ ಅಂತರಂಗದಲ್ಲಿರುವ ಅರೂಪಿಯಾದ ಆತ್ಮದರ್ಶನ ಮಾಡಬಹುದೆಂದು ಭಾವಿಸುವುದು ರೂಪಸ್ಥಧರ್ಮ ಧ್ಯಾನವಾಗಿದೆ. ಜಿನೇಂದ್ರ ಭಗವಂತನು ಕರ್ಮಗಳನ್ನು ಜಯಿಸಿ ವ್ಯಕ್ತವಾಗಿದ್ದಾನೆ. ಆದರೆ ನನ್ನಾತ್ಮನು ಕರ್ಮಗಳ ಆವರಣದಿಂದ ಅವ್ಯಕ್ತನಾಗಿದ್ದಾನೆ. ಅದನ್ನು ಅರಿವಿನಿಂದ, ಅನುಭವದಿಂದ ಅಭ್ಯಾಸದಿಂದ ಧ್ಯಾನದಿಂದ ಕಾಣಬಹುದೆಂದು ಭಾವಿಸುವುದೂ, ಅನಾದಿಯಿಂದ ಕರ್ಮಬಂಧವಾಗುತ್ತಲೆ ಬಂದಿರುವ ಕಾರಣ ಆತ್ಮನು ಈ ಸಂಸಾರದಲ್ಲಿ ಸುಖ-ದುಃಖವನ್ನು ಅನುಭವಿಸುತ್ತಾ ಜನ್ಮ ಮರಣಗಳನ್ನು ಹೊಂದುತ್ತಾ ನಾಲ್ಕು ಗತಿಗಳಲ್ಲಿ ಸುತ್ತಾಡುತ್ತಿದ್ದಾನೆ. ಆದ್ದರಿಂದ ಜಿನಬಿಂಬದ ದರ್ಶನ-ಜಿನವಾಣಿಯ ಸ್ವಾಧ್ಯಾಯ-ಜಿನಗುರುಗಳ ಉಪದೇಶದಿಂದ ಧರ್ಮವನ್ನೂ ಆತ್ಮಸ್ವರೂಪವನ್ನೂ ತಿಳಿದು ಕರ್ಮ ನಿವಾರಣೆಯ ಉಪಾಯವನ್ನು ತಿಳಿಯುವ ಭಾವನೆ, ಪ್ರಯತ್ನ, ಪುರುಷಾರ್ಥ ಮಾಡುವುದೇ ರೂಪಸ್ಥಧರ್ಮ ಧ್ಯಾನವಾಗಿದೆ.



**ರೂಪಾತೀತಧರ್ಮಧ್ಯಾನ :** ಸಕಲ ಕರ್ಮ ಮಲದಿಂದ ನಿವೃತ್ತನಾದ, ಶುದ್ಧ ಚಿದಾನಂದನೂ, ನಿತ್ಯ ನಿರ್ಮಲ ನಿರಂಜನನೂ, ನಿರಾಕಾರನೂ, ರೂಪಾತೀತನೂ, ಸದಾ ಅನಂತಜ್ಞಾನದರ್ಶನಾದಿ ಗುಣಭರಿತನೂ ಆದ ಸಿದ್ಧ ಪರಮೇಷ್ಠಿಗಳ ಗುಣಗಳನ್ನು ಸ್ವರೂಪನನ್ನು ಸ್ಮರಿಸುವುದು, ಭಾವಿಸುವುದು, ಧ್ಯಾನಿಸುವುದು ರೂಪಾತೀತ ಧರ್ಮಧ್ಯಾನವಾಗಿದೆ.

ಹೀಗೆ ಇವೆಲ್ಲಾ ಧರ್ಮಧ್ಯಾನದ ವಿಧಾನಗಳಾಗಿವೆ. ಧರ್ಮಧ್ಯಾನವು ಶುಭಧ್ಯಾನವಾಗಿವೆ. ಇದರಿಂದ ಅಪಾರವಾದ ಪುಣ್ಯಬಂಧವೂ, ಅಲ್ಪಸ್ವಲ್ಪ ಕರ್ಮ ನಿರ್ಜರೆಯೂ, ದೃಢವಾದ ಸಮ್ಯಕ್ತ್ವವೂ, ಸದ್ಗತಿಯೂ, ಇಹಪರಗಳಲ್ಲಿ ಸುಖ ಶಾಂತಿಯೂ ಲಭಿಸುವುದು. ವ್ರತ, ನೋಂಪಿ, ಪೂಜೆ, ಆರಾಧನೆ ಮುಂತಾದ ಧರ್ಮಕಾರ್ಯದಲ್ಲಿ ತೊಡಗುವುದೂ ಧರ್ಮಧ್ಯಾನವಾಗಿದೆ. ಧರ್ಮಧ್ಯಾನವು ಸಮ್ಯಗ್ದೃಷ್ಟಿಯಾದ ನಾಲ್ಕನೇ ಗುಣಸ್ಥಾನದಿಂದ ಆರನೇ ಗುಣಸ್ಥಾನದವರೆಗಿನ ಗೃಹಸ್ಥರೂ ಮುನಿಗಳೂ ಮಾಡಬಹುದು.

**ಶುದ್ಧಧ್ಯಾನ :** ಇದೇ ಶುಕ್ಲಧ್ಯಾನ, ಶುಕ್ಲವೆಂದರೆ ಬಿಳುಪು, ಶುಭ್ರ, ಸ್ವಚ್ಛ, ನಿರ್ಮಲ, ಶುದ್ಧನಾದುದು ಎಂದರ್ಥ. ನಿರ್ಮಲ ಪರಿಣಾಮ ಹೊಂದಿದ ಮುನಿಗಳು ಮಾಡುವ ಶುದ್ಧನಾದ ಆತ್ಮನನ್ನು ಕುರಿತು ಏಕಾಗ್ರತೆಯಿಂದ ಮಾಡುವ ಧ್ಯಾನವೇ ಶುಕ್ಲಧ್ಯಾನ. ಅದರ ಪರಿಣಾಮವು ಅತ್ಯಂತ ಶುದ್ಧವೂ, ಸ್ವಚ್ಛವೂ, ನಿರ್ವಿಕಾರವೂ, ನಿರ್ಮಲವೂ ನಿಶ್ಚಲವೂ, ಏಕಾಗ್ರತೆಯುಳ್ಳದ್ದೂ ಆಗಿರುತ್ತದೆ. ಯಾವ ಮುನಿಗಳು ವೀತರಾಗಿಗಳೂ, ನಿರಾಡಂಭರೂ, ಮೋಹ-ಕಷಾಯಗಳನ್ನು ದೂರ ಮಾಡಿದವರೂ, ಬಾಹ್ಯ ಚಿಂತನೆಯನ್ನು ತೊರೆದವರೂ ಆಗಿ ಏಕಾಂತವೂ, ನಿರ್ಜನವೂ ಪ್ರಶಾಂತವೂ ಆದ ಸ್ಥಳದಲ್ಲಿ ತನ್ನನ್ನು ತಾನು ಮರೆತು ಆತ್ಮಧ್ಯಾನ ಮಾಡುವರೋ ಅವರ ಪರಿಶುದ್ಧವಾದ ಭಾವನೆ ಪರಿಣಾಮಗಳು ಸ್ಫಟಿಕದಂತೆ ಸ್ವಚ್ಛವಾಗಿರುತ್ತದೆ.

ನಿರ್ಮಲಾಂತಃಕರಣವಾಗಿರುತ್ತದೆ. ಇಂತಹ ಸ್ಥಿತಿಯಲ್ಲಿರುವ ಶುದ್ಧ ಚೈತನ್ಯನಾದ ಆತ್ಮನ ಸ್ವರೂಪದ ಅರಿವು ಅವರಿಗೆ ದೃಢವಾದ ಶ್ರದ್ಧೆ ಇರುತ್ತದೆ. ಇಂತಹವರು ಧ್ಯಾನಕ್ಕೆ ಕುಳಿತಾಗ 7ನೇ ಅಪ್ರಮತ್ತ ಗುಣಸ್ಥಾನದಲ್ಲಿದ್ದು ಧ್ಯಾನ ಮಾಡುತ್ತಾ ಮಾಡುತ್ತಾ ತಮ್ಮ ಶಕ್ತಿಗೆ ತಕ್ಕಂತೆ ಮುಂದಿನ ಗುಣಸ್ಥಾನಗಳನ್ನು ಏರುತ್ತಾರೆ. ಆದರೆ ಈ ಪಂಚಮಕಾಲದಲ್ಲಿ ಉತ್ತಮಸಂಹನನ, ಶರೀರಶಕ್ತಿ, ಕಾಲಲಬ್ಧಿ ಇಲ್ಲವಾಗಿ ಮುಂದಿನ 12-13-14ನೇ ಗುಣಸ್ಥಾನಗಳನ್ನು ಏರಲಾರರು. ಆದರಿಂದ ತಮಗೆ ಬಂಧವಾಗಿರುವ ಕರ್ಮವು ಪೂರ್ಣವಾಗಿ ಕ್ಷಯವಾಗಿರುವುದಿಲ್ಲ. ಆದರೂ ಮುನಿಗಳು ಶುಕ್ಲಧ್ಯಾನದ ಕೆಲವೆರಡು ಹಂತಗಳನ್ನು ಏರಬಲ್ಲರು. ಶುಕ್ಲಧ್ಯಾನವು ನಾಲ್ಕು ವಿಧವಾಗಿವೆ: 1) ಪ್ರಥಕ್ತ್ವ ವಿತರ್ಕ 2) ಏಕತ್ವ ವಿತರ್ಕ 3) ಸೂಕ್ಷ್ಮ ಕ್ರಿಯಾಪ್ರತಿಪಾತಿ 4) ವ್ಯಪರತ ಕ್ರಿಯಾನಿವೃತ್ತಿ. ಇವೆಲ್ಲಾ ಶುದ್ಧಧ್ಯಾನದ ಮೆಟ್ಟಿಲುಗಳಾಗಿವೆ.

**ಪೃಥಕ್ತ್ವ ವಿತರ್ಕ ಶುಕ್ಲಧ್ಯಾನ :** ಶ್ರುತಜ್ಞಾನದ ಮೂಲಕ ವಿಚಾರವನ್ನು ತಿಳಿದು ಆತ್ಮಧ್ಯಾನ ಮಾಡುವುದು-ಮನ-ವಚನ-ಕಾಯಗಳ ಕ್ರಿಯೆಯನ್ನು ಪರಿಶುದ್ಧವಾಗಿಸಿಕೊಂಡು ಶುದ್ಧಾತ್ಮಾವಲೋಕನದ ಕಡೆ ತಿರುಗಿಸುವುದು ಪೃಥಕ್ತ್ವ ವಿತರ್ಕ ಶುಕ್ಲಧ್ಯಾನವೆನ್ನುವುದು. ವಿತರ್ಕ ಎಂದರೆ ಶ್ರುತಜ್ಞಾನ. ಶಾಸ್ತ್ರೋಕ್ತವಾಗಿ ಶುದ್ಧ ಧ್ಯಾನದಲ್ಲಿ ತೊಡಗುವುದು. ಈ ಸಂದರ್ಭದಲ್ಲಿ ಧ್ಯಾನ ಮಾಡುವಾಗ ಮನಸ್ಸು ವಿವಿಧ ತತ್ತ್ವ ವಿಷಯಗಳ ಚಿಂತನ ಮಾಡುತ್ತಿರುವುದರಿಂದ ಆಗಾಗ ಧ್ಯಾನದ ವಿಷಯವು ಬದಲಾಗುತ್ತಿರುತ್ತದೆ. ಆದರೂ ಭಾವ-ಅಂತಃಕರಣ ಶುದ್ಧವಾಗಿರುತ್ತದೆ. ಇದರ ಸಾಧನೆಯಿಂದ 7 ರಿಂದ 10ನೇ ಗುಣಸ್ಥಾನದವರೆಗೂ ಏರಬಹುದು. ಇಲ್ಲಿ ಆತ್ಮ ಬೇರೆ-ಶರೀರ ಬೇರೆ ಎಂಬ ಭೇದ ವಿಜ್ಞಾನ ಕಾರ್ಯ ನಡೆಯುತ್ತಿರುತ್ತದೆ. ಈ ಸಂದರ್ಭದಲ್ಲಿಯೂ ಕರ್ಮ ನಿರ್ಜರೆಯಾಗುತ್ತಿರುತ್ತದೆ. ಆದರೆ ಈ ಧ್ಯಾನದ ಸ್ಥಿತಿ ಸ್ವಲ್ಪ ಕಾಲ ಮಾತ್ರವಾಗಿರುತ್ತದೆ.

**ಏಕತ್ವ ವಿತರ್ಕ ಶುಕ್ಲಧ್ಯಾನ :** ಈ ಹಿಂದೆ ಹೇಳಿದ ಶುಕ್ಲಧ್ಯಾನದಲ್ಲಿ ನಿರತರಾದ ಮಹಾಮುನಿಗಳು ಮುಂದಿನ ಗುಣಸ್ಥಾನಗಳಿಗೆ ಏರುವುದಕ್ಕೆ ತೊಡಗುತ್ತಾರೆ. ಇಲ್ಲಿ ಆತ್ಮತತ್ತ್ವದ ಬಗ್ಗೆಯೆ ಮಾತ್ರವೇ ಧ್ಯಾನವಾಗಿರುತ್ತದೆ. ಇದು ಅತ್ಯಂತ ಏಕಾಗ್ರತೆ, ನಿಶ್ಚಲತೆ ಇರುತ್ತದೆ. ಕೇವಲ ಪರಿಶುದ್ಧವಾದ ಆತ್ಮಾವಲೋಕನ ಮಾಡುತ್ತಾ ಮಾಡುತ್ತಾ ಕ್ರಮೇಣ ಲೋಭಾದಿ ಕಷಾಯಗಳೂ ಮೋಹನೀಯ ಕರ್ಮವೂ ನಾಶವಾಗುತ್ತವೆ. ಕೂಡಲೇ ಜ್ಞಾನಾದರಣೀಯ. ದರ್ಶನಾವರಣೀಯ ಮತ್ತು ಅಂತರಾಯಕರ್ಮಗಳೂ ಕ್ಷೀಣವಾಗುತ್ತವೆ. ಈ ಧ್ಯಾನದಿಂದ ಮುನಿಗಳು ಕ್ಷೀಣ



ಮೋಹಕಷಾಯವೆಂಬ ಹನ್ನೆರಡೇ ಗುಣಸ್ಥಾನಕ್ಕೆ ಏರಿ ತಮ್ಮ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯವೆಂಬ ಘಾತೀಯ ಕರ್ಮಗಳು ಪೂರ್ಣವಾಗಿ ಕ್ಷಯವಾಗುತ್ತವೆ. ಕೂಡಲೇ ಅವರು ಸಯೋಗ ಕೇವಲಿ ಎಂಬ 13ನೇ ಗುಣಸ್ಥಾನಕ್ಕೆ ಏರುತ್ತಾರೆ. ಆಗ ಅವರು ಅರಹಂತರು, ಕೇವಲಿಗಳೂ, ವೀತರಾಗರೂ, ಸರ್ವಜ್ಞರೂ, ಹಿತೋಪದೇಶಿಗಳೂ ಆಗಿ ಪೂಜ್ಯರಾಗುತ್ತಾರೆ. ಆಗ ಅವರಲ್ಲಿ ಅನಂತ ಜ್ಞಾನ, ಅನಂತ ದರ್ಶನ, ಅನಂತಸುಖ, ಅನಂತಶಕ್ತಿಗಳು ಪ್ರಕಟವಾಗುತ್ತವೆ. ಅವರಿಗೆ ಮನವಚನಕಾಯಗಳ ಕ್ರಿಯೆಗಳು ಇರುತ್ತವಾದರೂ ರಾಗದ್ವೇಷ ಮೋಹ ಇಲ್ಲದ್ದರಿಂದ ಮತ್ತೆ ಹೊಸ ಕರ್ಮಬಂಧವಾಗುವುದಿಲ್ಲ. ಇದರಿಂದ ಅವರಿಗೆ ಸಯೋಗ ಕೇವಲಿಗಳೆನ್ನುತ್ತಾರೆ.

**ಸೂಕ್ಷ್ಮಕ್ರಿಯಾಪ್ರತಿಪಾತಿ ಶುಕ್ಲಧ್ಯಾನ :** ಸಯೋಗ ಕೇವಲಿಗಳಿಗೆ ಘಾತೀಯ ಕರ್ಮಗಳು ನಾಶವಾದರೂ ಅವರಲ್ಲಿ ಆಯುಷ್ಯನಾಮ, ಗೋತ್ರ ಮತ್ತು ವೇದನೀಯವೆಂಬ ಅಘಾತೀಯ ಕರ್ಮಗಳು ಇರುತ್ತವೆ. ಇದನ್ನು ನಿವಾರಣೆ ಮಾಡಿಕೊಳ್ಳಲು ಅರಿಹಂತ ಜಿನ ಕೇವಲಿಗಳು ತಮ್ಮ ಆಯುಷ್ಯದ ಕೆಲವೇ ಸಮಯ, ದಿನಗಳಿವೆ ಎನ್ನುವಾಗ ಅವರು ಅತ್ಯಂತ ಪ್ರಶಾಂತವೂ, ನಿರ್ಜನವೂ, ಏಕಾಂತವೂ ಆದ ಪ್ರದೇಶಕ್ಕೆ ತೆರಳಿ ಅಲ್ಲಿ ಅತ್ಯಂತ ಪವಿತ್ರವೂ, ಶುದ್ಧವೂ, ಏಕಾಗ್ರವೂ ಆದ ಆತ್ಮಧ್ಯಾನದಲ್ಲಿ ತೊಡಗುತ್ತಾರೆ. ಆಗ ಅವರ ಮನ-ವಚನ-ಕಾಯಗಳ ಯೋಗವನ್ನು ಸಂಪೂರ್ಣವಾಗಿ ತಡೆಯುತ್ತಾರೆ. ಶ್ವಾಸ ಬಂಧನವನ್ನೂ ಮಾಡುತ್ತಾರೆ. ಕೇವಲ ತದೇಕವಾಗಿ ಆತ್ಮಪ್ರದೇಶದಲ್ಲಿ ಮಾತ್ರವೇ ಅವರ ಧ್ಯಾನವು ಕೇಂದ್ರೀಕೃತವಾಗಿರುತ್ತದೆ. ಆಗ ನಾಮ, ಗೋತ್ರ, ವೇದನೀಯ ಕರ್ಮಗಳು ಕ್ಷಯಿಸುತ್ತವೆ. ಈ ಅವಸ್ಥೆಗೆ ಸೂಕ್ಷ್ಮಕ್ರಿಯಾ ಪ್ರತಿಪಾತಿ ಶುಕ್ಲಧ್ಯಾನವೆನ್ನುವರು. ಇಲ್ಲಿ ಪಂಚೇಂದ್ರಿಯಗಳೂ, ಮನೋಬಲ, ವಚನಬಲ, ಕಾಯಬಲ, ಸ್ವಾಸೋಚ್ಛ್ವಾಸ ಎಂಬ 9 ಪ್ರಾಣಗಳು ನಿಷ್ಕ್ರಿಯವಾಗಿರುತ್ತವೆ. ಕೇವಲ ಆಯುಕರ್ಮ ಪ್ರಾಣ ಮಾತ್ರವಿರುತ್ತದೆ.

**ವ್ಯಪಾರತಕ್ರಿಯಾ ನಿವೃತ್ತಿಶುಕ್ಲಧ್ಯಾನ :** ಈ ಧ್ಯಾನವು ಪರಮಶ್ರೇಷ್ಠವೂ, ಶುದ್ಧವೂ, ಏಕಾಗ್ರತೆಯಿಂದ ಕೂಡಿದುದೂ ಆದ ಧ್ಯಾನವಾಗಿದೆ. ಸಕಲ ಕರ್ಮದಿಂದ ಸಂಪೂರ್ಣವಾಗಿ ಮುಕ್ತನಾಗಲು ತೊಡಗಿ ದೇಹದಿಂದ ಆತ್ಮನನ್ನು ಬಿಡುಗಡೆ ಮಾಡಿ ಅತ್ಯಂತ ಶುದ್ಧ ಚಿದ್ರೂಪರೇ ತಾವಾಗಲು ಮಾಡುವ ಕೊನೆಯ ಶುಕ್ಲ ಧ್ಯಾನ, ಇದು ಪರಿಶುದ್ಧವಾದ ಪರಿಪೂರ್ಣ ಆತ್ಮ ವಿಕಾಸದ ಅವಸ್ಥೆಯಾಗಿರುತ್ತದೆ. ಈ

ಧ್ಯಾನಜ್ವಾಲೆಯಿಂದ ತಮ್ಮಲ್ಲಿದ್ದ ಆಯುಷ್ಯಕರ್ಮವೆಂಬುದೂ ಸುಟ್ಟುಹೋಗುತ್ತದೆ. ಹೀಗಾಗಿ ಸಕಲಕರ್ಮಗಳೂ ಕ್ಷಯವಾಗಿ ಬಿಡುತ್ತದೆ. ಆಗ ಭೌತಿಕದೇಹದಿಂದ ಅವರ ಪವಿತ್ರಾತ್ಮನು ಸಂಪೂರ್ಣ ಬಿಡುಗಡೆ ಹೊಂದಿ ಶುದ್ಧ ಚಿದ್ರೂಪರೇ ತಾವಾಗಿ ಊರ್ಧ್ವಗಮನತ್ವವೆಂಬ ಸ್ವಸ್ವಭಾವಗುಣದ ಶಕ್ತಿಯಿಂದ ಲೋಕದ ತುತ್ತತುದಿಯಲ್ಲಿರುವ ಮುಕ್ತಿ ಮಂದಿರವನ್ನು ಸೇರುತ್ತದೆ. ನಿತ್ಯ ನಿರಂಜನ ಸಿದ್ಧಪರಮಾತ್ಮನಾಗುತ್ತದೆ. ಈ ಸಿದ್ಧಾತ್ಮನು ಸಿದ್ಧಲೋಕದಲ್ಲಿ ಶಾಶ್ವತವಾಗಿ ಅನಂತಜ್ಞಾನಾದಿ ಅಷ್ಟಗುಣಭರಿತನಾಗಿ ಚಿದಾನಂದಮಯನಾಗಿ ಇರುತ್ತಾನೆ. ಅದೇ ಆತ್ಮನ ಕೊನೆಯ ನೆಲೆಯಾಗಿದೆ. ಈ ಆತ್ಮನು ಮತ್ತೆ ಜನ್ಮ ತಾಳುವುದಿಲ್ಲ. ಮತ್ತು ದುಃಖವಿಲ್ಲ. ಇದೇ ಆತ್ಮನ ಕೃತಕೃತ್ಯತೆ. ಸಾರ್ಥಕತೆ. ಈ ಪದವಿಯು ವ್ಯಪರತಕ್ರಿಯಾ ನಿವೃತ್ತಿ ಎಂಬ ಪರಮಶುಕ್ಲಧ್ಯಾನದಿಂದ ಲಭಿಸುತ್ತದೆ. ಅನಾದಿಯಿಂದ ಅಂಟಿಬಂದಿದ್ದ ಸಕಲ ಕ್ರಿಯೆಗಳಿಂದ ಕರ್ಮಗಳಿಂದ ಆತ್ಮನು ಸಂಪೂರ್ಣನಾಗಿ ನಿವೃತ್ತನಾಗಿ ಸಿದ್ಧಪರಮಾತ್ಮನಾಗುತ್ತದೆ.

ಹೀಗೆ ಧ್ಯಾನ ವಿಚಾರದಲ್ಲಿ ಆರ್ತ, ರೌದ್ರ ಧ್ಯಾನಗಳು ಅಶುಭಧ್ಯಾನಗಳು, ಧರ್ಮಧ್ಯಾನ ಶುಭಧ್ಯಾನವೂ, ಶುಕ್ಲಧ್ಯಾನ ಶುದ್ಧಧ್ಯಾನವೂ ಆಗಿವೆ.

ಇವುಗಳಲ್ಲಿ ಆರ್ತ, ರೌದ್ರಧ್ಯಾನಗಳು ಅಶುಭವೂ ಹೇಯವಾದವುಗಳೂ ಆಗಿವೆ. ಇವನ್ನು ಯಾರೂ ಮಾಡುವುದು ಬೇಡ. ಗೃಹಸ್ಥರು ಧರ್ಮ ಧ್ಯಾನದಲ್ಲಿರಬೇಕು. ಯಾರು ಭಾವಸಹಿತ ಧರ್ಮಕಾರ್ಯ, ಪ್ರಭಾವನೆ, ಪೂಜೆ-ಜಪ ಮುಂತಾದವುಗಳಲ್ಲಿರುತ್ತದೋ ಅದೂ ಧರ್ಮಧ್ಯಾನವೇ ಆಗುತ್ತದೆ. ಮುನಿಗಳು ಧರ್ಮ ಧ್ಯಾನ ಮತ್ತು ಶುಕ್ಲಧ್ಯಾನ ಮಾಡುತ್ತಾರೆ. ಆದರೆ ಈ ಪಂಚಮಕಾಲದಲ್ಲಿ ಶುಕ್ಲಧ್ಯಾನವು ಯಾರಿಗೂ ಸಾಧ್ಯವಿಲ್ಲ. ಅಂತಹ ಉತ್ತಮವಾದ, ಬಲಿಷ್ಠವಾದ ಶರೀರ, ಮಾನಸಿಕ ಸ್ಥಿತಿ, ಪರಿಸರ, ಸಂಸ್ಕಾರ, ಕಾಲಲಬ್ಧಿಗಳು ಇಲ್ಲ. ಆದರೂ ಅವರು ಆತ್ಮಧ್ಯಾನ ಮಾಡಬಲ್ಲರು.

ಧ್ಯಾನವು ಚಾರಿತ್ರ ಪ್ರಧಾನವಾದುದು, ಭಾವನಾಪೂರ್ಣವಾದುದು. ಅಂತರಂಗಕ್ಕೆ ಸಂಬಂಧಿಸಿದ್ದು. ಇದೊಂದು ಅಲೌಕಿಕವಾದ ಕ್ರಿಯೆ.

ಧ್ಯಾನವು ಒಮ್ಮೆಲೇ ಯಾರಿಗೂ ಬೇಗ ಸಿದ್ಧಿಸುವುದಿಲ್ಲ. ಧ್ಯಾನದ ಸ್ಥಿತಿಯು ಬಹುಕಾಲವಿರುವುದಿಲ್ಲ. ಆದ್ದರಿಂದ ಧ್ಯಾನ ಮಾಡಲು ಕ್ರಮವಾಗಿ ಅಭ್ಯಾಸ ಮಾಡಿ ಪರಿಣತನಾಗಬೇಕು. ಅದಕ್ಕಾಗಿ ಮೊದಲು ಸಮ್ಯಗ್ದೃಷ್ಟಿಯಾಗಬೇಕು. ದಯಾವಂತನೂ, ಕೋಮಲಸ್ವಭಾವಿಯೂ, ಮಂದಕಷಾಯಿಯೂ, ಮಿತ



ಪರಿಗ್ರಹಿಯೂ, ಸರಳಸತ್ಯಸಾತ್ವೀಕ ವೃತ್ತಿಯುಳ್ಳವನೂ, ಸಂಯಮಶೀಲ ನಾಗಬೇಕು. ಪಾಪಕಾರ್ಯಗಳನ್ನು ಮಾಡಬಾರದು. ಸಮತಾಭಾವದಿಂದ ಇರಬೇಕು. ಜಿನದೇವ, ಗುರು, ಶಾಸ್ತ್ರಭಕ್ತನಾಗಿರಬೇಕು. ವ್ರತಿಕನಾಗಬೇಕು.

**ಧ್ಯಾನ ಮಾಡುವ ಕ್ರಮ :** ಧ್ಯಾನ ಮಾಡುವವರು ಮನೆಯಲ್ಲೋ, ಮಂದಿರದಲ್ಲಿಯೋ ಏಕಾಂತವೂ, ನಿರ್ಜನವೂ ಆದ ಸ್ಥಳದಲ್ಲಿ ಪದ್ಮಾಸನ ದಲ್ಲಿಯೋ, ಖಡ್ಗಾಸನದಲ್ಲಿಯೋ (ನಿಂತು) ಶುಭವಾದ ಭಾವದಿಂದ, ನಿಶ್ಚಲನಾಗಿ ನೇರವಾಗಿ ಕುಳಿತು ಅಥವಾ ನಿಂತು ಅರೆಗಣ್ಣಿನಿಂದ ನಾಸಿಕಾಗ್ರದಲ್ಲಿ ದೃಷ್ಟಿಯನ್ನಿಟ್ಟು, ಹಣೆಯಲ್ಲಿ ಹುಬ್ಬುಗಳ ಮಧ್ಯೆ ಗಮನವನ್ನಿಟ್ಟು ಮೌನದಿಂದ ಮೊದಲು ಜಿನೇಂದ್ರರ, ಪಂಚಪರಮೇಷ್ಠಿಗಳ ಜಪ-ಸ್ತುತಿ ಮಾಡಿ ಅಂತರ್‌ಮುಖಿಯಾಗಿ ಧ್ಯಾನಕ್ಕೆ ತೊಡಗಬೇಕು. ಪರವನ್ನು ಮರೆತು ದೇಹದ ಮಮತೆಯನ್ನು ತೊರೆದು, ಬರುವಂತಹ ಪರೀಷಹಗಳನ್ನು ಸಹಿಸಬೇಕು. ಅಂತರಾತ್ಮನನ್ನು ಕಾಣಬೇಕು. ಆನಂದದಲ್ಲಿ ಮೈಮರೆಯಬೇಕು. ಅವರವರ ಶಕ್ತಿ, ಭಕ್ತಿ, ಆಸಕ್ತಿ, ನಿಷ್ಠೆಗಳಿಗೆ ತಕ್ಕಂತೆ ಧ್ಯಾನ ಸಿದ್ಧಿಸುತ್ತದೆ.

ಭವ್ಯಾಮೃತದಲ್ಲಿ ಹೇಳಿದ್ದಾರೆ :-

*ದಿನಕ್ಕೊಂದು ಗಳಿಗೆಯಾನುಂ । ಜಿನಾಕಾರದೊಳು ತನ್ನ ನಿಜಮಂ ಕಾಣ್ಬಗೆ ।*
*ಜನಿಸಿದ ಕರ್ಮಸಮೂಹಂ । ದಿನಕರನುದಯದಿಂ ಪರಿವ ಕತ್ತಲೆಗೆ ಸಮಂ ॥*

ಅಂದರೆ ದಿನವೂ ಒಂದು ಗಳಿಗೆಯಾದರೂ ಜಿನರ ಆಕಾರದಂತೆ ತನ್ನಾತ್ಮನೂ ಇರುವನೆಂದು ಧ್ಯಾನ ಮಾಡುವವನಿಗೆ ಸೂರ್ಯೋದಯದಿಂದ ಕತ್ತಲೆಯು ನಾಶವಾಗುವಂತೆ ಕ್ರಮೇಣ ಕರ್ಮಸಮೂಹವೂ ನಾಶವಾಗುವುದು. ನಿಯಮದಿಂದ ಆತ್ಮ ಕಲ್ಯಾಣವಾಗುವುದು.

ಧ್ಯಾನ, ಯೋಗಾಭ್ಯಾಸ, ತಪಗಳನ್ನು ತಿಳಿದವರಿಂದ, ಅನುಭವೀ ಗುರುಗಳಿಂದ ಕಲಿತು ಕ್ರಮವರಿತು ಮಾಡಬೇಕು.